ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 17 ಶುಕ್ರವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 210 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com





ನಾಳೆ ಬಿವಿಬಿ ತಿಂಗಳ ಕಾರ್ಯಕ್ರಮ

ಮೈಸೂರು,ನ.16–ಭಾರತೀಯ ವಿದ್ಯಾ ಭವನ, ಮೈಸೂರು ಕೇಂದ್ರದ ಕಲಾ ಭಾರತಿ ವಿಭಾಗದಿಂದ ನ. 18 ರಂದು ಸಂಜೆ 5.30ಕ್ಕೆ ಭಾರತೀಯ ವಿದ್ಯಾಭವನದ ಪ್ರೊ. ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ತಿಂಗಳ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.


ರಾವ್ ಆರ್.ಶರತ್

ಕಾರ್ಯಕ್ರಮವನ್ನು ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರು, ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರು ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸುವರು. ಸಂಜೆ 5.35 ರಿಂದ ವಿದ್ಯಾಭವನದ ಕಲಾ ಭಾರತಿ ಕರ್ನಾಟಕ ಸಂಗೀತ ವಿಭಾಗದ ವಿದ್ಯಾರ್ಥಿಗಳಿಂದ ಪ್ರಾರ್ಥನೆ, ಸಂಜೆ 5.40ರಿಂದ ಬಿವಿಬಿ ಸದಸ್ಯರಾದ ಡಾ.ತುಳಸಿ ರಾಮಚಂದ್ರ ಅವರಿಂದ ಸ್ವಾಗತ ಮತ್ತು ಕಲಾ ವಿದರ ಪರಿಚಯದ ನಂತರ ಸಂಜೆ 6ಕ್ಕೆ ರಾವ್ ಆರ್.ಶರತ್ ಅವರಿಂದ ಗಾಯನವಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಪ್ರದೇಶಚಾರ್–ಪಿಟೀಲು, ನಿಕ್ಷಿತ್ ಪುತ್ತೂರು–ಮೃದಂಗ, ವಿದ್ವಾನ್ ರಘು ನಂದನ್–ಘಟ ಮೂಲಕ ಸಹಕಾರ ನೀಡಲಿದ್ದಾರೆ.

ಪತ್ರಿಕಾ ವಿತರಕರ ಬಳಗದಿಂದ ಗೌರವ ಡಾಕ್ಟರೇಟ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ

ಮೈಸೂರು,ನ.16–ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಮತ್ತು ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತ ಆಶ್ರಯದಲ್ಲಿ ನ.18ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಆವರಣದಲ್ಲಿ ಗೌರವ ಡಾಕ್ಟರೇಟ್ ಹಾಗೂ ಕನ್ನಡ ರಾಜ್ಯೋತ್ಸವ ಪುರಸ್ಕೃತರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿದೆ.


ಕೆ.ಬಿ. ಗಣಪತಿ


ಜವರಪ್ಪ

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರು ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ಹಿರಿಯ ಪತ್ರಿಕಾ ವಿತರಕರು ಮತ್ತು ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಜವರಪ್ಪ ಅವರನ್ನು ಸನ್ಮಾನಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಹರೀಶ್‌ಗೌಡ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಶಂಭುಲಿಂಗ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಂಸ್ಥೆ ಅಧ್ಯಕ್ಷ ರಾಜಪ್ಪ, ಪ್ರಜಾಪ್ರಗತಿ ಸಂಪಾದಕ ಎಸ್. ನಾಗಣ್ಣ ಭಾಗವಹಿಸುವರು. ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಸಿ.ಕೆ. ಮಹೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ.

ಭಾರತ್ ಸೈಕಲ್ ಡಿಸೈನ್ ಚಾಲೆಂಜ್‌ನಲ್ಲಿ ಮಹಾರಾಜ ತಾಂತ್ರಿಕ ಕಾಲೇಜಿಗೆ ಬಹುಮಾನ



ಮೈಸೂರು,ನ.16(ಜಿಎ)–ಇತ್ತೀಚೆಗೆ ಬೆಂಗಳೂರಿನ ಚಾಣಕ್ಯ ವಿವಿಯಲ್ಲಿ ಅಖಿಲ ಭಾರತ ತಾಂತ್ರಿಕ ಮಂಡಳಿಯು ಭಾರತ ಕೌಶಲ್ಯ ಅಡಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಭಾರತ್ ಸೈಕಲ್ ಡಿಸೈನ್ ಚಾಲೆಂಜ್‌ನಲ್ಲಿ ಮೈಸೂರಿನ ಮಹಾರಾಜ ತಾಂತ್ರಿಕ ಮಹಾ ವಿದ್ಯಾಲಯ ವಿದ್ಯಾರ್ಥಿಗಳು ಲಕ್ಷ ರೂ. ಬಹುಮಾನ ಗಳಿಸಿದ್ದಾರೆ ಎಂದು ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಎಚ್‌ಓಡಿ ನಂಜೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸ್ಪರ್ಧೆಯಲ್ಲಿ ದೇಶದಾದ್ಯಂತ 700 ತಂಡಗಳು ಭಾಗವಹಿಸಿದ್ದವು. ಅದರಲ್ಲಿ 100 ತಂಡಗಳನ್ನು ಆಯ್ಕೆ ಮಾಡಲಾಗಿತ್ತು. ಅಂತಿಮ ಸುತ್ತಿಗೆ 16 ತಂಡ ಪ್ರವೇಶ ಪಡೆದುಕೊಂಡಿತ್ತು. ಅದರಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಪ್ರಮೋದ್, ದರ್ಶನ್ ಮತ್ತು ಮದನ್ 35 ಸಾವಿರ ರೂ. ವೆಚ್ಚದಲ್ಲಿ ಕಾಂಪೌಂಡ್ ಸ್ಪ್ರಾಕೆಟ್ ಮತ್ತು ಮಲ್ಟಿ ಸ್ಪೀಡ್ ಗೇರ್ ಸಿಸ್ಟಮ್ ಬಳಸಿ ವೇಗದ ಅನುಪಾತ ಮತ್ತು ಟಾರ್ಕ್ ಅನ್ನು ವಿನ್ಯಾಸಗೊಳಿಸಿದ್ದಾರೆ.

ಇದರಿಂದ ಪೆಡಲ್‌ನ ಒಂದು ಸುತ್ತಿಗೆ ಹಿಂದಿನ ಚಕ್ರವು ಕೊನೆಯ ಗೇರ್‌ನಲ್ಲಿ 8 ಸುತ್ತುಗಳಿಂದ ತಿರುಗುತ್ತದೆ. ಇದು ಸಾಮಾನ್ಯ ಸೈಕಲ್‌ಗಿಂತ ಗಂಟೆಗೆ 55ರಿಂದ 60 ಕಿಮೀ ವೇಗವನ್ನು ಪಡೆದುಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳ ಶ್ರಮಕ್ಕೆ ಕಾಲೇಜಿನ ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ ಮತ್ತು ಜಂಟಿ ನಿರ್ದೇಶಕ ಡಾ.ಹೆಚ್.ಕೆ.ಚೇತನ್ ಸಾಥ್ ನೀಡಿದರು ಎಂದರು.

ವಿದ್ಯಾರ್ಥಿ ಪ್ರಮೋದ್ ಮಾತನಾಡಿ, ಮುಂದಿನ ದಿನಗಳಲ್ಲಿ ಈ ಸೈಕಲ್ ಅನ್ನು ಮಾರುಕಟ್ಟೆಗೆ ತರುವ ಆಶಯವಿದೆ. ಇದಕ್ಕಾಗಿ ಈಗಾಗಲೇ ಕೆಲ ಪ್ರಕ್ರಿಯೆಯೂ ನಡೆಯುತ್ತಿದೆ. ದೊಡ್ಡ ಮಟ್ಟದಲ್ಲಿ ತಯಾರು ಮಾಡಿದ್ದರೆ ಇದರ ವೆಚ್ಚವು ಕಡಿಮೆ ಆಗಲಿದೆ ಎಂದರು. ಗೋಷ್ಠಿಯಲ್ಲಿ ಪ್ರೊ ಸಲಾಮತ್, ವಿದ್ಯಾರ್ಥಿ ಮದನ್ ಉಪಸ್ಥಿತರಿದ್ದರು.

ಪೂರ್ಣಪ್ರಜ್ಞಾ ವಿದ್ಯಾ ಕೇಂದ್ರದ ವಿಸ್ತೃತ ಶಾಲಾ ಕೊಠಡಿ ಉದ್ಘಾಟನೆ




ಮೈಸೂರು,ನ.16–ಮೈಸೂರಿನ ಕುವೆಂಪು ನಗರ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಪೂರ್ಣಪ್ರಜ್ಞಾ ವಿದ್ಯಾ ಕೇಂದ್ರದ ವಿಸ್ತೃತ ಶಾಲಾ ಕೊಠಡಿಯನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿದ್ದ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ನಾಮಫಲಕ ಅನಾವರಣಗೊಳಿಸಿದರು. ನಾಗರಿಕ ವೇದಿಕೆ ಅಧ್ಯಕ್ಷ ಕೆ.ಆರ್.ರಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಗೌರವಾಧ್ಯಕ್ಷ ಬಿ.ಪಿ.ಪುಟ್ಟಸ್ವಾಮಿ, ಕಾರ್ಯದರ್ಶಿ ಕುಳ್ಳೇಗೌಡ, ಉಪಾಧ್ಯಕ್ಷ ಎಚ್.ಕೆ.ಅರವಿಂದ್, ಖಜಾಂಚಿ ಎಸ್.ಪಿ.ತ್ಯಾಗರಾಜ್, ಶಾಲಾ ಸಮಿತಿ ಅಧ್ಯಕ್ಷ ಲೋಕೇಶ್, ಕಟ್ಟಡ ಸಮಿತಿ ಅಧ್ಯಕ್ಷ ಬಿ.ಶಿವಣ್ಣ, ಜಂಟಿ ಕಾರ್ಯದರ್ಶಿ ಶ್ರೀಕಾಂತ್, ದೇವಸ್ಥಾನ ಸಮಿತಿ ಅಧ್ಯಕ್ಷ ಶೈಲೇಂದ್ರ, ಸಮಿತಿ ಸದಸ್ಯರಾದ ಎಸ್. ಕೃಷ್ಣ, ಎಚ್.ಕೆ.ಅಪ್ಪಾಜಿಗೌಡ, ರಮೇಶ್, ಬಿ.ಟಿ.ಲಕ್ಷ್ಮಿಗೌಡ, ಡಿ.ರೇವಣ್ಣ ರಾಜು, ಶಾಲಾ ಶಿಕ್ಷಕರು, ಸಂಸ್ಥೆಯ ಸದಸ್ಯರು, ಪೋಷಕರು ಭಾಗವಹಿಸಿದ್ದರು. ಇದೇ ವೇಳೆ ನಿವೃತ್ತ ಕಾರ್ಯ ಪಾಲಕ ಅಭಿಯಂತರ ಕಿಶೋರ್ ಚಂದ್ರ, ಗುತ್ತಿಗೆದಾರ ಕುಮಾರ್, ವಿಶ್ವನಾಥ್ ಅವರನ್ನು ಸನ್ಮಾನಿಸಲಾಯಿತು.


ನಿಧನ

ಸುಮಿತ್ರಾ



ಮೈಸೂರು, ನ.16–ಎನ್.ಆರ್. ಮೊಹಲ್ಲಾ ನಿವಾಸಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಬಳಿಯ ಮಾರುತಿ ಎಂಟರ್‌ಪ್ರೈಸಸ್ ಮಾಲೀಕ ಮಹದೇವಸ್ವಾಮಿ ಅವರ ಪತ್ನಿ ಸುಮಿತ್ರಾ (47) ಅವರು ಬುಧವಾರ ನಿಧನರಾದರು. ಮೃತರು ಪುತ್ರಿ ಸಿಂಚನಾ, ಪುತ್ರ ಚಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರದ ಜಮೀನಿನಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಪುಷ್ಪಕುಮಾರಿ



ಕೊಳ್ಳೇಗಾಲ ಸಮೀಪದ ಸಿದ್ದಯ್ಯನಪುರ ಗ್ರಾಮದ ನಿವಾಸಿ ಪುಷ್ಪ ಕುಮಾರಿ (76) ಅವರು ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪತಿ ಮ್ಯಾಥ್ಯೂ, ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸಂಜೆ ಪಟ್ಟಣದ ಮಹದೇಶ್ವರ ಕಾಲೇಜು ರಸ್ತೆಯಲ್ಲಿರುವ ಕ್ರೈಸ್ತ ಸಮುದಾಯದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬರಗಾಲದ ಕಾರಣ ಸಹಕಾರ ಸಂಘಗಳ ರೈತರ ಸಾಲ ಮನ್ನಾ ಮಾಡಿ

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹ

- **ಕೈಗಾರಿಕೆಗಳಿಗೆ 12.60 ಲಕ್ಷ ಕೋಟಿ ಸಾಲ ಇದೆ**
- **ಸಂಕಷ್ಟದಲ್ಲಿರುವ ರೈತರ ಸಾಲ ಮನ್ನಾ ಮಾಡಿ**
- **ರೈತ ಪರ ದನಿ ಎತ್ತಿದ್ದ ಸಿದ್ದರಾಮಯ್ಯ ಈಗ ಮೌನ**

ಮೈಸೂರು,ನ.16(ಬಿಎಲ್‌ಯು)– ರಾಜ್ಯದಲ್ಲಿ ಬರಗಾಲ ಎದುರಾಗಿರುವ ಕಾರಣ ಸಹಕಾರ ಸಂಘಗಳಿಂದ ಪಡೆದಿರುವ ಸಾಲವನ್ನು ರೈತರು ಮರು ಪಾವತಿ ಮಾಡಲು ಸಾಧ್ಯವಿಲ್ಲ. ಅದನ್ನು ಮನ್ನಾ ಮಾಡಿ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಸರ್ಕಾರವನ್ನು ಆಗ್ರಹಪಡಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು ಸಹಕಾರ ಸಂಘಗಳಿಂದ ಪಡೆದಿರುವ ಸಾಲವನ್ನು ಬೆಳೆ ಬೆಳೆಯಲು ಹೂಡಿಕೆ ಮಾಡಿದ್ದಾರೆ. ಆದರೆ ಈಗ ಬರಗಾಲ ಎದುರಾಗಿರುವ ಕಾರಣ ಸಾಲ ಮರುಪಾವತಿ ಸಾಧ್ಯವಿಲ್ಲ. ಆದ ಕಾರಣ ರೈತರ ಸಾಲ ಮನ್ನಾ ಮಾಡಿ ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.



ಕೈಗಾರಿಕೆಗಳಿಗೆ ಸಂಕಷ್ಟ ಎದುರಾಗಿದೆ ಎಂಬ ಕಾರಣಕ್ಕೆ ಉದ್ಯಮೆದಾರರು ಪಡೆದಿದ್ದ 12.60 ಲಕ್ಷ ಕೋಟಿ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಿದೆ. ಅದರಂತೆ ಈಗ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಲು ಸಾಲ ಮನ್ನಾ ಮಾಡಿ ಎಂದು ಕುರುಬೂರು ಶಾಂತಕುಮಾರ್ ಒತ್ತಾಯಿಸಿದರು.

ವಿರೋಧ ಪಕ್ಷದ ನಾಯಕನಾಗಿದ್ದಾಗ ಪ್ರತಿ ಟನ್ ಕಬ್ಬಿಗೆ 4 ಸಾವಿರ ರೂಪಾಯಿ ನಿಗದಿ ಮಾಡಬೇಕೆಂದು ಭಾಷಣ ಬಿಗಿದ ಸಿದ್ದರಾಮಯ್ಯ, ಮುಖ್ಯಮಂತ್ರಿ ಆದ ನಂತರ ಮೌನವಾಗಿದ್ದಾರೇಕೆ ಎಂದು ಪ್ರಶ್ನಿಸಿದ್ದಾರೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ವಿಧಾನಸಭಾ ಅಧಿವೇಶನದ ವೇಳೆ ಟನ್ ಕಬ್ಬಿಗೆ 4 ಸಾವಿರ ರೂಪಾಯಿ ನಿಗದಿ ಮಾಡಬೇಕೆಂದು ಸಿದ್ದರಾಮಯ್ಯ ಭಾಷಣ ಬಿಗಿದರು. ಈಗ ಅವರೇ ಮುಖ್ಯಮಂತ್ರಿ ಆಗಿದ್ದರೂ ಇದನ್ನು ಏಕೆ ಕಾರ್ಯಗತಗೊಳಿಸುತ್ತಿಲ್ಲ ಎಂದು ಮರು ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರ ವರುಣ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯು ಕಟಾವು ಕೂಲಿ, ಸಾಗಾಣಿಕೆ ವೆಚ್ಚ ಕಳೆದು ತನಗೆ 2,200 ರೂಪಾಯಿ ನೀಡುತ್ತಿದೆ. ವರುಣ ಕ್ಷೇತ್ರದ ಸುಮಾರು 25 ಸಾವಿರ ರೈತರು ಕಬ್ಬು ಸರಬರಾಜು ಮಾಡುತ್ತಿದ್ದಾರೆ. ಇನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕ್ಷೇತ್ರದಿಂದಲೂ 25 ಸಾವಿರ ರೈತರು ಕಬ್ಬು ಸರಬರಾಜು ಮಾಡುತ್ತಿದ್ದಾರೆ. ತಮ್ಮ ಕ್ಷೇತ್ರದ ಜನರಿಗೆ ನ್ಯಾಯ ಕೊಡಿಸದಿದ್ದವರು ಮುಖ್ಯಮಂತ್ರಿಯಾಗಿ, ಮಂತ್ರಿಯಾಗಿ ರಾಜ್ಯದ ಬೇರೆ ಯಾವ ಕಡೆ ನ್ಯಾಯ ಕೊಡಿಸುತ್ತಾರೆ ಎಂದು ಕುರುಬೂರು ಶಾಂತಕುಮಾರ್ ಕೇಳಿದರು.

ಭಾಷಣದಲ್ಲಿ ತಾವು ರೈತರ ಪರ ಎಂದೇಳುತ್ತಾರೆ. ಆದರೆ ಅಧಿಕಾರಕ್ಕೆ ಬಂದಾಗ ರೈತರ ನೆರವಿಗೆ ಬರುವುದಿಲ್ಲ. ಹಾಗಾದರೆ ರೈತರು ಇವರಿಗೆ ಮಾಡಿರುವ ಅನ್ಯಾಯವಾದರೂ ಏನು ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರು ತಾವು ರೈತನ ಮಗ ಎಂದೇಳುತ್ತಾರೆ. ಆದರೆ ಪ್ರತಿಭಟನೆ ಮಾಡಿದ ರೈತರನ್ನು ಪೊಲೀಸರಿಂದ ಬಂಧಿಸುತ್ತಾರೇಕೆ ಎಂದು ಪ್ರಶ್ನೆ ಮಾಡಿದ ಕುರುಬೂರು ಶಾಂತಕುಮಾರ್, ಕೂಡಲೇ ನಮ್ಮ ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದರೆ ರೈತರ ಗಂಭೀರ ಹೋರಾಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಬ್ಬು ಬೆಳೆಗಾರರ ಸಂಘದ ಮುಖಂಡರಾದ ಕೆರೆಹುಂಡಿ ರಾಜಣ್ಣ, ಲಕ್ಷ್ಮಿಪುರ ವೆಂಕಟೇಶ್, ನೀಲಕಂಠಪ್ಪ, ವಾಜಮಂಗಲ ಮಹದೇವ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನ.19, ಶರಣ ಸಾಹಿತ್ಯ ಪರಿಷತ್‌ನಿಂದ ಸಂವಾದ



ಮೈಸೂರು, ನ.16(ಜಿಎ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ ಹಾಗೂ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಗಳ ವತಿಯಿಂದ ನ.19ರಂದು ಬೆಳಗ್ಗೆ 10.30ಕ್ಕೆ ಮೌಲ್ಯಾಧಾರಿತ ಶಿಕ್ಷಣ ಮತ್ತು ವಚನ ಸಾಹಿತ್ಯ' ಕುರಿತು ಸಂವಾದ ಕಾರ್ಯಕ್ರಮವನ್ನು ನಗರದ ನಂಜುಮಳಿಗೆಯಲ್ಲಿರುವ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ನಗರದ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಕುಂದೂರು ಮಠದ ಡಾ. ಶರತ್ ಚಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಉದ್ಘಾಟನೆಯನ್ನು ಅಧ್ಯಾತ್ಮ ಚಿಂತಕ ಶಂಕರ ದೇವನೂರು ಅವರು ಮಾಡಲಿದ್ದಾರೆ, ಸಂವಾದದ ಸಂಪನ್ಮೂಲ ವಿದ್ವಾಂಸರಾಗಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಕೆ.ಎಸ್.ಮಲ್ಲೇಶ್, ಜೆಎಸ್‌ಎಸ್ ಕಾಲೇಜು ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಹೆಚ್.ಟಿ.ಶೈಲಜ, ರಾಮಕೃಷ್ಣ ಶಿಕ್ಷಣ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕರಾದ ಎಸ್.ಎಸ್.ರಮೇಶ್, ಬಿ.ಬಿ.ಎಸ್, ಶಿಕ್ಷಣ ಮಹಾವಿದ್ಯಾಲಯದ ಅಧ್ಯಾಪಕರಾದ ಡಾ.ಹೆಚ್.ಬಿ.ಬೆಟ್ಟಸ್ವಾಮಿ ಭಾಗವಹಿಸಲಿದ್ದಾರೆ. ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ಸಮನ್ವಯಕಾರರಾಗಿರುತ್ತಾರೆ. ಅಧ್ಯಕ್ಷತೆಯನ್ನು ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ವಹಿಸಲಿದ್ದಾರೆ ಎಂದು ವಿವರಿಸಿದರು.

ವಿವೇಕ, ಆಚಾರ, ವಿಚಾರ, ದಯೆ, ಧರ್ಮ, ನೀತಿ, ಸತ್ಯ, ಕಾಯಕ, ದಾಸೋಹ ಹಾಗೂ ಶಿಕ್ಷಣ ಮತ್ತು ಜೀವನ ಮೌಲ್ಯಗಳು ಕುಸಿಯುತ್ತಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ವಚನ ಸಾಹಿತ್ಯ ಶರಣರ ನಡೆ–ನುಡಿ ಒಂದು ದಾರಿ ದೀಪವಾಗಬಹುದೇ? ಇಂದಿನ ವಿಜ್ಞಾನ ಯುಗದಲ್ಲಿ ಇವನ್ನು ಪಚನ ಮಾಡಿಕೊಳ್ಳುವ ಬಗೆ ಹೇಗೆ? ಪಾಶ್ಚಾತ್ಯ ಸಾಹಿತ್ಯ, ಸಂಸ್ಕೃತಿಯ ಬಿರುಗಾಳಿಯ ಮಧ್ಯದಲ್ಲಿ ವಚನಕಾರರ ದೇಶೀಯ ಜ್ಞಾನ, ಭಾಷೆ, ಕಾಯಕ ತತ್ವಗಳನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಸಂವಾದ ಏರ್ಪಡಿಸಲಾಗುತ್ತಿದ್ದು, ಈ ವಿಶೇಷ ರೀತಿ ಸಂವಾದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಭಾಗವಹಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ, ಉಪಾಧ್ಯಕ್ಷೆ ಜಯಾಗೌಡ, ಚಂದ್ರಶೇಖರ್ ಉಪಸ್ಥಿತರಿದ್ದರು.

ನ.19ಕ್ಕೆ ಚಿತ್ರಕಲಾ ಸ್ಪರ್ಧೆ



ಮೈಸೂರು, ನ.16(ಜಿಎ)– ಮಕ್ಕಳ ದಿನಾಚರಣೆ ಅಂಗವಾಗಿ ಮಕ್ಕಳೊಟ್ಟಿಗೆ ಪೋಷಕರಿಗೂ ಚಿತ್ರಕಲೆ ಕೌಶಲ್ಯಗಳನ್ನು ದೊಡ್ಡ ವೇದಿಕೆಯಲ್ಲಿ ಪ್ರದರ್ಶಿಸಲು ಬ್ರ್ಯಾಂಡ್ ಫ್ರೇಮ್ಸ್ ವತಿಯಿಂದ ನ.19ರಂದು ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಬೆಳಗ್ಗೆ 8.30ರಿಂದ 12.30ರವರೆಗೂ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ ಸಂಸ್ಥೆಯ ಸಿಇಓ ಅಭಿನಂದ್ ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಮಕ್ಕಳು ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ಮಕ್ಕಳೊಟ್ಟಿಗೆ ಪೋಷಕರಿಗೂ ಅವಕಾಶ ನೀಡಿದ್ದು, ಅವರು ಭಾಗವಹಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದಾಗಿದ್ದು, ಈಗಾಗಲೇ ಸಾವಿರ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

ಅಂತರ ಶಾಲಾ ಸ್ಪರ್ಧೆಯು ಸೂಪರ್ ಜೂನಿಯರ್, ಜೂನಿಯರ್ ಮತ್ತು ಹಿರಿಯ 3 ವಿಭಾಗಗಳಲ್ಲಿ ನಡೆಯಲಿದ್ದು, ಎಲ್ಲಾ ವಿಭಾಗಗಳಲ್ಲಿ ವಿಜೇತರಾದವರಿಗೆ ನಗದು ಬಹುಮಾನ ನೀಡಲಾಗುತ್ತದೆ. ಜೊತೆಗೆ ಭಾಗವಹಿಸುವವರಿಗೆ ಪ್ರಮಾಣ ಪತ್ರ ನೀಡಲಾಗುತ್ತದೆ. ನೋಂದಣಿಗೆ ಯಾವುದೇ ಶುಲ್ಕವಿಲ್ಲ. ಮಾಹಿತಿಗಾಗಿ 7411526622 ಸಂಪರ್ಕಿಸಿ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ವಿನಂತ್ ಶಂಕರ್, ಅರ್ಪಿತಾ, ಸಿಂಚನಾ ಉಪಸ್ಥಿತರಿದ್ದರು.

ಸತೀಶ್‌ಕುಮಾರ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಸ್.ಸುರೇಶ ಮಾರ್ಗದರ್ಶನದಲ್ಲಿ ಜೆ.ಸತೀಶ್ ಕುಮಾರ್ ಪರಿಸರ ವಿಜ್ಞಾನ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿವಿ ಪಿಎಚ್.ಡಿ ಪದವಿ ನೀಡಿದೆ.

ನವೀಕೃತ ಎನ್‌ಎಂಕೆಎ ಬಾಲಬೋಧಿನಿ ಸರ್ಕಾರಿ ಶಾಲೆ ಉದ್ಘಾಟನೆ

ಮೈಸೂರು,ನ.16(ಎಂಟಿವೈ)– ಮೈಸೂರಿನ ಚಾಮರಾಜೇಂದ್ರ ಜೋಡಿ ರಸ್ತೆಯಲ್ಲಿರುವ ನವೀಕೃತ ಎನ್‌ಎಂಕೆಎ ಬಾಲಬೋಧಿನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗುರುವಾರ ಉದ್ಘಾಟಿಸಿದರು.



ಚಾಮರಾಜ ಜೋಡಿ ರಸ್ತೆಯಲ್ಲಿರುವ ಎನ್‌ಕೆಎಂಎ ಬಾಲಬೋಧಿನಿ ಶಾಲೆ 80 ವರ್ಷಕ್ಕೂ ಹಳೆಯದಾದ ಶಾಲೆಯಾಗಿದ್ದು, ಮೂಲಸೌಲಭ್ಯದ ಕೊರತೆ ಎದುರಿಸುತ್ತಿತ್ತು. ಈ ಹಿನ್ನೆಲೆಯಲ್ಲಿ 70 ಲಕ್ಷ ರೂ. ವೆಚ್ಚದಲ್ಲಿ ಶಾಲೆಯನ್ನು ನವೀಕರಣಗೊಳಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಕಲಿಕೆಗೆ ಪೂರಕವಾದ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ, ಪೀಠೋಪಕರಣಗಳನ್ನು ಖರೀದಿಸಲಾಗಿದ್ದು, ಹೈಟೆಕ್ ಶಾಲೆಯಾಗಿ ಪರಿವರ್ತಿಸಲಾಗಿದೆ. ನವೀಕೃತ ಶಾಲೆಯನ್ನು ಉದ್ಘಾಟಿಸಿದ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಸಿಗುವ ಮುನ್ನವೇ ಬಾಲಬೋಧಿನಿ ಶಾಲೆಯನ್ನು ನಿರ್ಮಿಸಲಾಗಿದೆ. ಸ್ಥಳೀಯ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಚಾಮರಾಜ ಜೋಡಿ ರಸ್ತೆಯಲ್ಲಿ ಸರ್ಕಾರಿ ಶಾಲೆ ಆರಂಭಿಸಲು 80 ವರ್ಷಗಳ ಹಿಂದೆ ನವಾಬ್ ಮೀರ್ ಕಮಲುದ್ದೀನ್ ಅಲಿಖಾನ್ ಎಂಬುವರು ಉಚಿತವಾಗಿ ಜಾಗ ನೀಡಿದ್ದಾರೆ. ಅವರನ್ನು ನಾವು ಸ್ಮರಿಸಬೇಕು ಎಂದರು.

ಮಾನವನ ವಿಕಾಸಕ್ಕೆ ಶಿಕ್ಷಣ ಅತ್ಯಗತ್ಯವಾಗಿದೆ. ಶಿಕ್ಷಣವನ್ನು ವೈಜ್ಞಾನಿಕ ಮತ್ತು ವೈಚಾರಿಕ ನೆಲೆಗಟ್ಟಿನಲ್ಲಿ ಪಡೆಯಬೇಕು ಎಂಬುದು ನಮ್ಮ ಸಂವಿಧಾನದ ಆಶಯ. ಪ್ರತಿಯೊಂದು ವಿಷಯವನ್ನು ವೈಚಾರಿಕವಾಗಿ ಕಲಿತರೆ ಎಲ್ಲರೂ ಸಮಾಜಕ್ಕೆ ದಾರಿದೀಪವಾಗುತ್ತಾರೆ. ಸರ್ಕಾರಿ ಶಾಲೆಗಳು ಮಕ್ಕಳ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ಕಟ್ಟಿಕೊಡುತ್ತವೆ. ಬಾಲಬೋಧಿನಿ ಸರ್ಕಾರಿ ಶಾಲೆಗೆ ಹೆಚ್ಚಿನ ಮಕ್ಕಳು ದಾಖಲಾಗಬೇಕು. ಮುಂದಿನ ದಿನಗಳಲ್ಲಿ ಮಾದರಿ ಶಾಲೆಯಾಗಿ ರೂಪುಗೊಳ್ಳುವಂತೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಜಾತೀಯತೆ ಹೆಚ್ಚಾಗಿ ಕಂಡು ಬರುತ್ತಿದೆ. ಈ ಪಿಡುಗು ಶಾಲಾ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರಬಾರದು. ಎಲ್ಲರೂ ಜಾತಿ, ಧರ್ಮದ ಸಂಕೋಲೆಯಿಂದ ಹೊರಬಂದು ನಾವೆಲ್ಲ ಭಾರತೀಯರು ಎಂಬ ಮನೋಭಾವ ತಾಳಬೇಕು. ಮಕ್ಕಳ ಭವಿಷ್ಯ ಉಜ್ವಲಗೊಳಿಸಲು ಶ್ರಮಿಸಬೇಕು. ಪ್ರಾಥಮಿಕ ಶಾಲಾ ಮಕ್ಕಳಲ್ಲಿ ಕಲಿಕಾ ಹಾಗೂ ಗ್ರಹಿಸುವ ಶಕ್ತಿ ಹೆಚ್ಚಾಗಿರುತ್ತದೆ. ಈ ಅವಧಿಯಲ್ಲಿ ಮಕ್ಕಳಿಕೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್, ಅಧೀಕ್ಷಕ ಕಾರ್ಯಪಾಲಕ ಎಂಜಿನಿಯರ್ ಸಿಂಧು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ರಾಜು, ಮುಖ್ಯಶಿಕ್ಷಕಿ ರತ್ನಮಾಲ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.11.2023 ಶುಕ್ರವಾರ, ಮಳೆ ನಕ್ಷತ್ರ: ವಿಶಾಖ, 07.11.2023 ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಲೈಪೋಮ (ಬೊಜ್ಜಿನ ಗಂಟು) ಹಾಗೂ ಗ್ರಂಥಿಗಳಿಗೆ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು :** ರಾಷ್ಟ್ರಕವಿ ಕುವೆಂಪು ಅವರ 30ನೇ ಪುಣ್ಯಸ್ಮರಣೆ ಪ್ರಯುಕ್ತ ಕುವೆಂಪು ಸಾಹಿತ್ಯ : ಕನ್ನಡ – ಕರ್ನಾಟಕ–ಸಂಸ್ಕೃತಿ ಚಿಂತನೆಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಬೆಳಗ್ಗೆ 9.30ಕ್ಕೆ ಉದ್ಘಾಟನೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಗುರುಪಾದ ಮರಿಗುದ್ದಿ, ಅಧ್ಯಕ್ಷತೆ : ಎಂಡಿಇಎಸ್ ಕಾರ್ಯದರ್ಶಿ ಮ.ಗು. ವಿಜಯಕುಮಾರ್, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು ಉಪ ಪ್ರಾಂಶುಪಾಲರಾದ ಶ್ರೀಮತಿ ಆರ್. ಶಿಲ್ಪ, ಪ್ರಾಸ್ತಾವಿಕ ನುಡಿ : ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿ ಡಾ. ಎನ್.ಆರ್. ಚಂದ್ರೇಗೌಡ, ಉಪಸ್ಥಿತರು : ಎಂಡಿಎಎಸ್ ಆಡಳಿತಾಧಿಕಾರಿ ಮ.ಗು. ಅವಿನಾಶ್, ಕಾಲೇಜು ಪ್ರಿನ್ಸಿಪಾಲ್ ಹೆಚ್.ಎನ್. ಚಂದ್ರಶೇಖರ, ಕನ್ನಡ ವಿಭಾಗದ ಮುಖ್ಯಸ್ಥ ಎ.ಎಸ್. ಮಹೇಶ್, ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಎಂಡಿಎಎಸ್ ಕಾರ್ಯದರ್ಶಿ ಮ.ಗು. ವಿಜಯ ಕುಮಾರ್, ಸಮಾರೋಪ ಭಾಷಣ : ಮೈಸೂರು ವಿವಿ ಡೀನ್ ಪ್ರೊ. ಎಂ.ಜಿ. ಮಂಜುನಾಥ್, ಮುಖ್ಯ ಅತಿಥಿಗಳು : ಕರಾಮುವಿವಿ ಡೀನ್ ಪ್ರೊ. ಎನ್. ಲಕ್ಷ್ಮೀ, ಆಡಳಿತಾಧಿಕಾರಿ ಮ.ಗು. ಅವಿನಾಶ್, ಪ್ರಾಂಶುಪಾಲ ಹೆಚ್.ಎನ್. ಚಂದ್ರಶೇಖರ, ಸಂಯೋಜನಾಧಿಕಾರಿ ಡಾ.ಎನ್.ಆರ್. ಚಂದ್ರೇಗೌಡ, ಎ.ಎಸ್. ಮಹೇಶ್, ಸ್ಥಳ: ಕಾಲೇಜು ಸಭಾಂಗಣ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ.

■ **ಜೆಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ :** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು : ರಾಷ್ಟ್ರೀಯ ಚಿಂತಕ ಚಕ್ರವರ್ತಿ ಸೂಲಿಬೆಲೆ, ಅಧ್ಯಕ್ಷತೆ : ಜೆಎಸ್‌ಎಸ್ ಗೌರವ ಕಾರ್ಯದರ್ಶಿ ಶ್ರೀಮತಿ ವನಜಾ ಬಿ. ಪಂಡಿತ್, ಉಪಸ್ಥಿತರು: ಆಡಳಿತಾಧಿಕಾರಿ ಅನುಪಮ ಬಿ.ಪಂಡಿತ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರ್.ಕೆ. ಭರತ್, ಪ್ರಾಂಶುಪಾಲ ಡಾ. ಎಂ. ಶಿವಕುಮಾರ್, ಸ್ಥಳ: ಗೋವಿಂದ ರಾವ್ ಸ್ಮಾರಕ ಸಭಾಂಗಣ, ಜೆಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಖೇಡ ವೇದವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಗಾನಭಾರತೀ :** ದಿವಂಗತ ಎನ್. ಗೋಪಾಲಕೃಷ್ಣ ಸಂಸ್ಮರಣೆ ಅಂಗವಾಗಿ ಸಂಗೀತ ಕಛೇರಿ, ವಿದುಷಿ ಇಳಾ ಸಂಗೀತ ದಿಲೀಪ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನಕುಮಾರ್–ಪಿಟೀಲು, ವಿದ್ವಾನ್ ಸಚಿನ್ ಪ್ರಕಾಶ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

■ **ಶ್ರುತಿಮಂಜರಿ ಪ್ರತಿಷ್ಠಾನ:** ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಾಧಾರಿತ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ನಾಗಚೇತನ್ ಶರ್ಮ್ಮ ಅವರಿಂದ ಹಾಡುಗಾರಿಕೆ, ವಿದ್ವಾನ್ ಅನಂತಪದ್ಮನಾಭ– ಪಿಟೀಲು, ವಿದ್ವಾನ್ ಸುನಿಲ್ ಸುಬ್ರಮಣ್ಯ–ಮೃದಂಗ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ ರಚನೆ– ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಟಿ.ವಿ. ಶಂಕರ ನಾರಾಯಣ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಟಿ.ಆರ್.ಮಹಾಲಿಂಗಂ–ವೇಣುವಾದನ, 4.00 ಮಹಿಳಾರಂಗ–ಸಖೀ ಸಾಹಿತ್ಯ–ಕವಯಿತ್ರಿ ಅನ್ನಪೂರ್ಣ ಅವರೊಂದಿಗೆ ಮಾತುಕತೆ ಹಾಗೂ ಕವನ ವಾಚನ. ಪ್ರಸ್ತುತಿ–ಅಬ್ದುಲ್ ರಶೀದ್, 4.30 ವೃತ್ತಿ ಮಾರ್ಗದರ್ಶನ–ಶಿಕ್ಷಣ ಮತ್ತು ಶೈಕ್ಷಣಿಕ ಮನೋ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಪಾಂಡುರಂಗ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಕೃಷಿಕ ದಂಪತಿ ಮಹೇಶ್ ಹಾಗೂ ಕೆ.ಎನ್.ಅನೂಷಾ, 8.00 ಕನ್ನಡ ಭಾರತಿ, 9.30 ಅರುಣಾ ಸಾಯಿರಾಂ–ಹಾಡುಗಾರಿಕೆ, 10.00 ತತ್ವ ಸಂಚಾರ–ತತ್ವಪದ ಗಾಯಕರ ಹಾಡುಪಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 17 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 210 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..



ಹಲೋ ಅಪ್ಪಾ...! ನಾನು ಕೊಟ್ಟಿರುವ ನಾಲ್ಕೈದನ್ನು ಮಾತ್ರ ಮಾಡಿ...!

- ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ವಿಡಿಯೋ ವೈರಲ್
- ಇದು ವರ್ಗಾವಣೆ ದಂಧೆಯ ಕರಾಳಮುಖಕ್ಕೆ ಸಾಕ್ಷಿಯೆಂದು ವಿಪಕ್ಷಗಳ ಕಿಡಿ
- ಕೀಳನಪುರದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಡಾ. ಯತೀಂದ್ರ ಸಂಭಾಷಣೆ
- ಇದು ವರ್ಗಾವಣೆ ವಿಚಾರವಲ್ಲ; ಸಿದ್ದರಾಮಯ್ಯ ಸ್ಪಷ್ಟನೆ: ಡಿಸಿಎಂ ಡಿಕೆಶಿ ಸಮರ್ಥನೆ

ಮೈಸೂರು, ನ.16 (ಬಿಎಲ್‌ಯು)– ಮೈಸೂರಿನಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ತಮ್ಮ ತಂದೆಯೊಂದಿಗೆ ಆಡಿರುವ ಮಾತುಗಳ ವಿಡಿಯೋ ವೈರಲ್ ಆಗಿದೆ.

ಇದು ರಾಜ್ಯ ರಾಜಕೀಯದಲ್ಲಿ ಭಾರಿ ಸಂಚಲನವನ್ನು ಉಂಟು ಮಾಡಿದೆ. ಮೊದಲಿನಿಂದಲೂ ಸರ್ಕಾರದಲ್ಲಿ ಜಿಎಸ್‌ಟಿ ಮಾದರಿಯ ವೈಎಸ್‌ಟಿ ವಸೂಲಿ ಆಗುತ್ತಿದೆ ಎಂದು ಆರೋಪ ಮಾಡುತ್ತಿದ್ದ ವಿರೋಧ ಪಕ್ಷಗಳಿಗೆ ಈ ವಿಡಿಯೋ ಆಹಾರ ಒದಗಿಸಿದಂತಾಗಿದೆ.

ಮೈಸೂರು ತಾಲೂಕು ಕೀಳನಪುರದಲ್ಲಿ ಬುಧವಾರ ಜನಸಂಪರ್ಕ ಸಭೆ ಆಯೋಜಿಸಲಾಗಿತ್ತು. ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರೂ ಆದ ಡಾ.ಯತೀಂದ್ರ ಜನರ ಅಹವಾಲು ಸ್ವೀಕಾರ ಮಾಡುತ್ತಿದ್ದರು. ಅಧಿಕಾರಿಗಳಿಗೆ ಸೂಚನೆ ನೀಡಿ ಸ್ಥಳದಲ್ಲೇ ಕೆಲವು ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದ್ದರು. ಈ ವೇಳೆ ಡಾ.ಯತೀಂದ್ರರಿಗೆ ಮೊಬೈಲ್ ಕರೆ ಬರುತ್ತದೆ. ಜನರ ಮುಂದೆಯೇ ಕರೆ ಸ್ವೀಕರಿಸುತ್ತಾರೆ.

ಅಪ್ಪಾ... ಹೇಳಿ ಎಂದು ಡಾ.ಯತೀಂದ್ರ ಮಾತು ಶುರು ಮಾಡುತ್ತಾರೆ. ಈ ವೇಳೆ ವಿವೇಕಾನಂದ... ಯಾರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅತ್ತಲಿಂದ ಪ್ರಶ್ನೆ ಮಾಡಿದ್ದಾರೆ. ವಿವೇಕಾನಂದನಾ ಎಲ್ಲಿಗೆ, ಇಲ್ಲ ಅದ್ಯಾವುದು ಕೊಟ್ಟಿಲ್ಲ ಎಂದು ಸಿದ್ದರಾಮಯ್ಯರಿಗೆ ಪುತ್ರ ಡಾ.ಯತೀಂದ್ರ ಇತ್ತಲಿಂದ ಸ್ಪಷ್ಟನೆ ನೀಡಿದ್ದಾರೆ.



ಆಗ ಯಾರೂ ಆ ಮಹದೇವ್, ಕೊಡಿ ಅವರಿಗೆ ಫೋನ್ ಕೊಡಿ ಎಂದು ತಂದೆ, ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಹೇಳುತ್ತಾರೆ. ತರುವಾಯ ಸಿದ್ದರಾಮಯ್ಯ ಅವರು ಮಹದೇವ್‌ಗೆ ಫೋನ್ ಕೊಡುತ್ತಾರೆ. ಡಾ. ಯತೀಂದ್ರ, ಮಹದೇವ್‌ಗೆ ತರಾಟೆಗೆ ತೆಗೆದುಕೊಂಡಿದ್ದಾರೆ. ಮಹದೇವ್ ಯಾಕೆ, ಯಾವುದ್ಯಾವುದೋ ಕೊಡುತ್ತಿದ್ದೀರಾ. ನಾನು ಕೊಟ್ಟಿರುವುದು ಬಿಟ್ಟು, ಬೇರೆ ಯಾವುದು ಅದು ಎಂದು ಪ್ರಶ್ನಿಸಿದ್ದಾರೆ. ಬೇಡ,

● 6ನೇ ಪುಟಕ್ಕೆ

ಆರೋಪ ಸಾಬೀತಾದರೆ ರಾಜಕೀಯ ನಿವೃತ್ತಿ

ಸಿಎಸ್‌ಆರ್ ಫಂಡಿಂಗ್ ಬಗ್ಗೆ ಯತೀಂದ್ರ ಪ್ರಸ್ತಾಪಿಸಿದ್ದು

ಬೆಂಗಳೂರು: ಸಿಎಸ್‌ಆರ್ ಫಂಡಿಂಗ್ ಬಗ್ಗೆ ನನ್ನ ಪುತ್ರ ಡಾ.ಯತೀಂದ್ರ ಪ್ರಸ್ತಾಪಿಸಿದ್ದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ್ದಾರೆ. ಡಾ ಯತೀಂದ್ರ ಮೊಬೈಲ್‌ನಲ್ಲಿ ಮಾತನಾಡಿರುವ ವಿಡಿಯೋ ಮಾಧ್ಯಮಗಳಲ್ಲಿ ತೀವ್ರ ಸುದ್ದಿಯಾಗಿ ವಿರೋಧ ಪಕ್ಷಗಳು ಟೀಕಿಸುತ್ತಿರುವ ಸಂದರ್ಭದಲ್ಲಿ



● 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆಗ್ರಹ

- ಸಿಎಂ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ವರ್ಗಾವಣೆ ಸಂಬಂಧ ತಂದೆಗೆ ಸೂಚನೆ ನೀಡುವ ವಿಡಿಯೋ ವೈರಲ್ ಹಿನ್ನೆಲೆ
- ಸಿಎಂ ಪುತ್ರ ಸರ್ಕಾರಿ ನೌಕರರ ವರ್ಗಾವಣೆ ವಿಷಯದಲ್ಲಿ ನಿರಂತರ ಹಸ್ತಕ್ಷೇಪ; ವಸೂಲಿಗೆ ಇದು ಸಾಕ್ಷಿ ಎಂದು ಹೆಚ್‌ಡಿಕೆ ಕಿಡಿನುಡಿ

ಬೆಂಗಳೂರು, ನ.16(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಸರ್ಕಾರಿ ನೌಕರರ ವರ್ಗಾವಣೆ ವಿಷಯದಲ್ಲಿ ಹಸ್ತಕ್ಷೇಪ ಮಾಡಿ ವಸೂಲಿಯಲ್ಲಿ ತೊಡಗಿದ್ದಾರೆಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ವಿಡಿಯೋ ಬಾಂಬ್ ಸಿಡಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ವರ್ಗಾವಣೆ ಸೇರಿದಂತೆ ಅಭಿವೃದ್ಧಿ ಯೋಜನೆಗಳ ಗುತ್ತಿಗೆಗಳಲ್ಲಿ ಲಂಚ ಮತ್ತು ಕಮಿಷನ್ ಅನ್ನು ಹಾದಿ–ಬೀದಿಯಲ್ಲಿ ವಸೂಲಿ

ಕಾಸಿಗಾಗಿ ಹುದ್ದೆ ದಂಧೆ ಆರೋಪ



ಮಾಡುತ್ತಿದ್ದಾರೆ. ನೈತಿಕತೆ, ಮೌಲ್ಯ, ಸಾಮಾಜಿಕ ನ್ಯಾಯದ ಡೋಂಗಿ ಹರಿಕಾರನ ಅಸಲಿ ಮುಖ ಅದೇ ಹಾದಿ–ಬೀದಿಯಲ್ಲಿ ಮೂರು ಕಾಸಿಗೆ ಹರಾಜು ಆಗಿದೆ ಎಂದು ಟೀಕಾಪ್ರಹಾರ ಮಾಡಿದ್ದಾರೆ.

ತುರ್ತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಯತೀಂದ್ರ ತಮ್ಮ ತಂದೆ ಮುಖ್ಯಮಂತ್ರಿ ಜೊತೆ ಅಧಿಕಾರಿಗಳ ವರ್ಗಾವರ್ಗಿಗೆ ಸಂಬಂಧಿಸಿದಂತೆ ತಾಕೀತು ಮಾಡುತ್ತಿರುವ ವಿಡಿಯೊವನ್ನು ಬಿಡುಗಡೆ ಮಾಡಿ, ಕಾಸಿಗಾಗಿ ಹುದ್ದೆ ದಂಧೆಯಲ್ಲಿ ತೊಡಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ತಕ್ಷಣ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಈಗ ಹೇಳಿ

● 6ನೇ ಪುಟಕ್ಕೆ



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಲಲಿತ ಮಹಲ್ ಪ್ಯಾಲೇಸ್‌ಗೆ ಶಾಶ್ವತ ಕಾಯಕಲ್ಪವಾಗಬೇಕು

ಪುಟ–4

ಒಳಪುಟಗಳಲ್ಲಿ

ರಾಜ್ಯದಲ್ಲಿ ಬರ ಪರಿಸ್ಥಿತಿ; ಕುಡಿಯುವ ನೀರು, ಜಾನುವಾರುಗಳ ಮೇವು ನಿರ್ವಹಣೆಗೆ

ಶಾಸಕರ ನೇತೃತ್ವದ ಟಾಸ್ಕ್‌ಫೋರ್ಸ್



ಬೆಂಗಳೂರು,ನ.16(ಕೆಎಂಶಿ)–ರಾಜ್ಯದಲ್ಲಿ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳ ಮೇವಿನ ನಿರ್ವಹಣೆಯ ಜವಾಬ್ದಾರಿಯನ್ನು ಶಾಸಕರ ಅಧ್ಯಕ್ಷತೆಯ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್‌ಗಳಿಗೆ ವಹಿಸಲು ಸಚಿವ ಸಂಪುಟದ ಉಪಸಮಿತಿ ತೀರ್ಮಾನಿಸಿದೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ನೈಸರ್ಗಿಕ ವಿಕೋಪಗಳ ನಿರ್ವಹಣೆ ಪರಾಮರ್ಶೆಗೆ ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಹಲವು ಪ್ರಮುಖ ವಿಷಯಗಳನ್ನು ಚರ್ಚಿಸಿ, ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಉಪ ಸಮಿತಿಯಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಭಾಗವಹಿಸಿ ಹಲವು ವಿಷಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

- ಸಂಪುಟ ಉಪಸಮಿತಿ ಸಭೆ ನಿರ್ಧಾರ
- ಟ್ಯಾಂಕರ್, ಖಾಸಗಿ ಬೋರ್‌ವೆಲ್ ಬಾಡಿಗೆ ಪಡೆದು ನೀರು ಪೂರೈಕೆ





ಪ್ರತಿ ತಾಲೂಕಿನಲ್ಲಿ ಟಾಸ್ಕ್‌ಫೋರ್ಸ್ ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳನ್ನು ಗುರುತಿಸಿ ಟ್ಯಾಂಕರ್ ಅಥವಾ ಖಾಸಗಿ ಕೊಳವೆ ಬಾವಿ ಬಾಡಿಗೆ ಪಡೆದು ಯಾವುದೇ ಲೋಪಗಳಾಗದಂತೆ ನೀರು ಪೂರೈಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಜಿಲ್ಲಾಧಿಕಾರಿಗಳ ಬಳಿ ಲಭ್ಯವಿರುವ 783 ಕೋಟಿ ರೂ. ಅನುದಾನವನ್ನು ಬರ ನಿರ್ವಹಣೆಗೆ ಜವಾಬ್ದಾರಿಯುತವಾಗಿ ಬಳಸಲು ನಿರ್ದೇಶನ ನೀಡಲು ಸಮಿತಿ ತೀರ್ಮಾನಿಸಿತು.

ಪ್ರಿವೆಂಟಿವ್ ಸೋಯಿಂಗ್ ಇನ್ವೋಕ್ ಅಡಿಯಲ್ಲಿ ಬೆಳೆ ಹಾನಿಗೊಳಗಾದ ರೈತರ ಖಾತೆಗೆ 230 ಕೋಟಿ ರೂ. ವಿಮೆ ಪಾವತಿ ಪ್ರಕ್ರಿಯೆ ಪ್ರಾರಂಭಿಸಿದ್ದು, ತಕ್ಷಣ ರೈತರ ಖಾತೆಗೆ ಹಣ ಜಮೆ ಮಾಡಲು ವಿಮಾ ಕಂಪನಿಗಳಿಗೆ ಸೂಚಿಸಲು ಕೃಷಿ ಸಚಿವ ಚೆಲುವರಾಯಸ್ವಾಮಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೃಷಿ, ತೋಟಗಾರಿಕೆ, ರೇಷ್ಮೆಯಲ್ಲಿ ನೀರಿನ ಮಿತ ಬಳಕೆ ಉತ್ತೇಜಿಸಲು ಹನಿ ನೀರಾವರಿ ಸಹಾಯಧನಕ್ಕೆ 800 ಕೋಟಿ ರೂ. ಹೆಚ್ಚುವರಿ ಅನುದಾನ ಕೋರಲು ಪ್ರಸ್ತಾವನೆ ಸಲ್ಲಿಸಲು ಸಹ ಸಚಿವ ಸಂಪುಟ ಉಪ ಸಮಿತಿ ತೀರ್ಮಾನಿಸಿತು. ಫ್ರೂಟ್ಸ್ ಐ ಡಿಯಲ್ಲಿ ಬೆಳೆ ವಿವರಗಳ ಜೊತೆಗೆ ಎಲ್ಲಾ ಆರ್.ಟಿ.ಸಿ ಗಳ ಪ್ರಕಾರ ರೈತರ ಸಂಪೂರ್ಣ ಜಮೀನಿನ ವಿವರಗಳನ್ನು ಆಧಾರ್‌ನೊಂದಿಗೆ ಜೋಡಣೆ ಮಾಡಲು ಒಂದು ವಾರದ ವಿಶೇಷ ಅಭಿಯಾನ ನಡೆಸಲು ಸಮಿತಿಯು ಕಂದಾಯ, ಕೃಷಿ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿತು.

ಕೊಡಗಿನ ಮಿನಿ ವಿಮಾನ ನಿಲ್ದಾಣ ಯೋಜನೆಗೆ ಕೂಡಿಗೆ ಬಳಿ ಭೂಮಿ

ಸದ್ಯದಲ್ಲೇ ಜಿಲ್ಲಾಧಿಕಾರಿ ಸಮೀಕ್ಷಾ ವರದಿ ಸಲ್ಲಿಕೆ



ಮಡಿಕೇರಿ: ಕೊಡಗಿನಲ್ಲಿ ಮಿನಿ ವಿಮಾನ ನಿಲ್ದಾಣ ಸ್ಥಾಪನೆಗೆ ಸಮೀಕ್ಷಾ ಕಾರ್ಯ ಇತ್ತೀಚೆಗೆ ನಡೆದಿದ್ದು, ರಾಜ್ಯ ಸರ್ಕಾರಕ್ಕೆ ಶೀಘ್ರದಲ್ಲಿಯೇ ಜಿಲ್ಲಾಧಿಕಾರಿಗಳು ಪ್ರಸ್ತಾವನೆ ಸಲ್ಲಿಸಲಿದ್ದಾರೆ ಎಂದು ಹೇಳಲಾಗಿದೆ.

ಕೊಡಗಿನಲ್ಲಿ ಮಿನಿ ವಿಮಾನ ನಿಲ್ದಾಣ ಸ್ಥಾಪನೆ ಯೋಜನೆಗಾಗಿ ಈ ಹಿಂದೆ ಭೂಮಿಯನ್ನು ಗುರುತಿಸಲಾಗಿತ್ತು. ಆದರೆ ಈಗ ಮತ್ತೊಂದೆಡೆ ಇನ್ನು ಹೆಚ್ಚಿನ ಭೂಮಿಯನ್ನು ಗುರುತಿಸಲಾಗಿದ್ದು, ಅದರ ಬಗ್ಗೆ ಜಿಲ್ಲಾಡಳಿತ ವರದಿ ಸಲ್ಲಿಸಲಿದೆ. 2018ರಲ್ಲಿ ಕೊಡಗು ಜಿಲ್ಲೆಯಲ್ಲಿ ಏರ್‌ಸ್ಟ್ರಿಪ್ ಸ್ಥಾಪನೆಗೆ ಸರ್ಕಾರ ಆದೇಶ ನೀಡಿತ್ತು. ಹಾಗಾಗಿ ಕುಶಾಲನಗರ ಸಮೀಪದ ಕೂಡಿಗೆ ಬಳಿ ಭೂಮಿಯನ್ನು ಗುರುತಿಸಲಾಗಿತ್ತು. ಅದರಂತೆ ಜಿಲ್ಲೆಯಲ್ಲಿ ಏರ್‌ಸ್ಟ್ರಿಪ್ ಮತ್ತು ಮಿನಿ ವಿಮಾನ ನಿಲ್ದಾಣ ಸ್ಥಾಪನೆಗೆ ಕೃಷಿ ಇಲಾಖೆಗೆ ಸೇರಿದ ಕೂಡಿಗೆಯ ಸೈನಿಕ ಶಾಲೆಯ ಹಿಂಭಾಗದ ಒಟ್ಟು 49 ಎಕರೆ ಜಾಗವನ್ನು ಮೊದಲು ಗುರುತಿಸಲಾಗಿತ್ತು. ಅಂತೆಯೇ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ)

● 6ನೇ ಪುಟಕ್ಕೆ

ವಿಪಕ್ಷ ನಾಯಕನ ಸ್ಥಾನಕ್ಕೆ ನಾನು ಸೇರಿ ನಾಲ್ಕೈದು ಆಕಾಂಕ್ಷಿಗಳಿದ್ದೇವೆ



ಬೆಂಗಳೂರು: ಕರ್ನಾಟಕ ವಿಧಾನ ಸಭೆ ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ನಾಲ್ಕೈದು ಶಾಸಕರೊಂದಿಗೆ ತಾನು ಕೂಡ ಆಕಾಂಕ್ಷಿಯಾಗಿದ್ದು, ಈ ಹುದ್ದೆಗೆ ಯಾರೇ ಆಯ್ಕೆಯಾದರೂ, ಅವರನ್ನು ಒಪ್ಪಿಕೊಳ್ಳುತ್ತೇವೆ ಎಂದು ಬಿಜೆಪಿಯ ಹಿರಿಯ ಶಾಸಕ ಮತ್ತು ಮಾಜಿ ಉಪಮುಖ್ಯಮಂತ್ರಿ ಆರ್.ಅಶೋಕ್ ಹೇಳಿದ್ದಾರೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಶುಕ್ರವಾರ (ನ.17) ನಡೆಯಲಿದ್ದು, ಈ ಸಂದರ್ಭದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕನ ಆಯ್ಕೆಯನ್ನು ಘೋಷಿಸುವ ಸಾಧ್ಯತೆಯಿದೆ. 'ನನಗೆ ಗೊತ್ತಿಲ್ಲ, ಪಕ್ಷ ತೀರ್ಮಾನ ಮಾಡಬೇಕು. ಪಕ್ಷ ಯಾರನ್ನು ಈ ಹುದ್ದೆಗೆ ಪರಿಗಣಿಸುತ್ತದೆಯೋ ಅವರಿಗೆ ಹುದ್ದೆ ಸಿಗುತ್ತದೆ. ನಾವ್ಯಾರೂ ಅರ್ಜಿ ಸಲ್ಲಿಸಿಲ್ಲ. ಅಂತಹ ಸಂಸ್ಕೃತಿ ನಮ್ಮ ಪಕ್ಷದಲ್ಲಿ ಇಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಶಾಸಕರಾದ ಸುನೀಲ್ ಕುಮಾರ್, ಡಾ.ಅಶ್ವತ್ಥ್ ನಾರಾಯಣ್ ಮತ್ತು ಆರಗ ಜ್ಞಾನೇಂದ್ರ ಜೊತೆಗೆ ಆರ್. ಅಶೋಕ್ ಹೆಸರು ಈ ಹುದ್ದೆಗೆ ಕೇಳಿ ಬರುತ್ತಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಅವರನ್ನು ನೇಮಕ ಮಾಡಿರುವುದನ್ನು ಉಲ್ಲೇಖಿಸಿದ ಅವರು,

● 6ನೇ ಪುಟಕ್ಕೆ

ನ.19ಕ್ಕೆ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಭಾರತ–ಆಸ್ಟ್ರೇಲಿಯಾ ವಿಶ್ವಕಪ್‌ಗೆ ಸೆಣಸಾಟ



ಚೋಕರ್ಸ್ ಹಣೆಪಟ್ಟಿಯೊಂದಿಗೆ ದಕ್ಷಿಣ ಆಫ್ರಿಕಾ ವಿಶ್ವಕಪ್‌ಗೆ ವಿದಾಯ

ಕೋಲ್ಕತ್ತಾ,ನ.16–ಕೊನೆವರೆಗೂ ರೋಚಕತೆಯಿಂದ ಕೂಡಿದ್ದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ವಿರುದ್ಧ 3 ವಿಕೆಟ್‌ಗಳ ಜಯ ಸಾಧಿಸಿ, 8ನೇ ಬಾರಿ ವಿಶ್ವಕಪ್ ಫೈನಲ್ ಪ್ರವೇಶಿಸಿದೆ.

ಆ ಮೂಲಕ ಆಸ್ಟ್ರೇಲಿಯಾ ನ.19ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಭಾರತ ತಂಡವನ್ನು ಎದುರಿಸಲಿದೆ. ಮತ್ತೊಂದೆಡೆ ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ್ದ ದಕ್ಷಿಣ ಆಫ್ರಿಕಾ ಪಂದ್ಯ ಗೆಲ್ಲುವ ಸಾಧ್ಯತೆ ಇತ್ತು ಆದರೆ ಪ್ರಮುಖ ಕ್ಯಾಚ್‌ಗಳನ್ನು ಕೈಚೆಲ್ಲಿದ್ದು ತಂಡದ ಸೋಲಿಗೆ ಕಾರಣವಾಯಿತು. ಈ ಸೋಲಿನೊಂದಿಗೆ ದ.ಆಫ್ರಿಕಾ ಮತ್ತೊಮ್ಮೆ ಚೋಕರ್ಸ್ ಹಣೆಪಟ್ಟಿಯೊಂದಿಗೆ 2023ರ ವಿಶ್ವಕಪ್‌ಗೆ ವಿದಾಯ ಹೇಳಿತು.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಗುರುವಾರ ನಡೆದ 2ನೇ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ನೀಡಿದ 213 ರನ್‌ಗಳ ಸಾಮಾನ್ಯ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಗುರಿಯನ್ನು ಸುಲಭವಾಗಿ ಚೇಸ್ ಮಾಡುವ ಲೆಕ್ಕಾಚಾರದಲ್ಲಿತ್ತು. ಆದರೆ ಆಸೀಸ್ ಲೆಕ್ಕಾಚಾರ ಫಲಿಸಲಿಲ್ಲ. ಸತತ ವಿಕೆಟ್ ಪತನದಿಂದ ಆಸೀಸ್ ಕಂಗಾಲಾಗಿತ್ತು. ಒಂದೊಂದು ರನ್ ಗಳಿಸುವುದು ಸವಾಲಾಗಿತ್ತು. ತಂಡದ ಪರ

● 6ನೇ ಪುಟಕ್ಕೆ

ಅಸಲಿ ಚಲನ್, ಸೀಲ್ ಬಳಸಿಯೇ ಮುಡಾ, ಬ್ಯಾಂಕ್‌ಗೆ ಮಕ್ಮಲ್ ಟೋಪಿ

ಮುಡಾದ ಇಬ್ಬರು, ಬ್ಯಾಂಕ್‌ನ ಓರ್ವ ಉದ್ಯೋಗಿ ಬಂಧನ

- ■ ಜಾಮೀನಿನ ಮೇಲೆ ಮೂವರೂ ಬಿಡುಗಡೆ
- ■ ಮುಡಾ ಮಾಡಿದ ತಪ್ಪಿಗೆ ಫಲಾನುಭವಿಗಳ ಮೇಲೆ ಕೇಸ್!
- ■ ಮುಡಾ ನಂಬಿರುವ ನಾವೂ ಮೂರ್ಖರೆ...!?

ಮೈಸೂರು, ನ.16–ನಕಲಿ ಚಲನ್ ಮತ್ತು ಬ್ಯಾಂಕ್ ಸೀಲ್ ಬಳಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ಕ್ಕೆ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಲಕ್ಷ್ಮೀಪುರಂ ಠಾಣೆ ಪೊಲೀಸರು ಮುಡಾದ ಇಬ್ಬರು ನೌಕರರು ಹಾಗೂ ಬ್ಯಾಂಕ್ ಆಫ್ ಬರೋಡಾ ಮುಡಾ ಶಾಖೆಯ ಓರ್ವ ನೌಕರ ಸೇರಿ ಮೂವರನ್ನು ಬಂಧಿಸಿ 4.5 ಲಕ್ಷ ರೂ. ವಶಪಡಿಸಿಕೊಂಡಿದ್ದಾರೆ.

ಮುಡಾ ಡಿ–ಗ್ರೂಪ್ ನೌಕರ ಟಿ.ಎಸ್. ನಂದನ್ ಹೊರ ಗುತ್ತಿಗೆಯಡಿ ಡೇಟಾ ಎಂಟ್ರಿ ಕೆಲಸ ಮಾಡುತ್ತಿದ್ದ ಬಿ.ತರುಣ್ ಕುಮಾರ್ ಮತ್ತು ಬ್ಯಾಂಕ್ ಆಫ್ ಬರೋಡಾ ಮುಡಾ ಶಾಖೆಯಲ್ಲಿ ಹೊರ ಗುತ್ತಿಗೆ ಮೇಲೆ ಡೇಟಾ ಎಂಟ್ರಿ ಕೆಲಸ ಮಾಡುತ್ತಿದ್ದ ಸುನೀಲ್‌ಕುಮಾರ್ ಬಂಧಿತರಾಗಿದ್ದು, ಇವರನ್ನು ಇಂದು ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಲಯವು ಅವರಿಗೆ ಷರತ್ತುಬದ್ಧ ಜಾಮೀನು ನೀಡಿ ಬಿಡುಗಡೆ ಮಾಡಿದೆ.

ವಿಶೇಷವೆಂದರೆ ಈ ಪ್ರಕರಣದಲ್ಲಿ ದೂರು ನೀಡಿದ್ದ ಮುಡಾ ಅಧಿಕಾರಿ ಈಗ ಬಂಧಿತರಾಗಿರುವವರನ್ನು ಆರೋಪಿಗಳೆಂದು ಉಲ್ಲೇಖಿಸಿರಲಿಲ್ಲ. ಅಲ್ಲದೇ ನಕಲಿ ಚಲನ್ ಹಾಗೂ ಬ್ಯಾಂಕ್ ಸೀಲ್ ಬಳಸಿ ಮುಡಾಗೆ ವಂಚಿಸಲಾಗಿದೆ ಎಂದು ನೀಡಿದ್ದ ದೂರಿನಲ್ಲಿ ಮುಡಾದಿಂದ ಸೇವೆ ಪಡೆದಿದ್ದ ಐವರು ಅರ್ಜಿದಾರರನ್ನು ಆರೋಪಿಗಳೆಂದು ಉಲ್ಲೇಖಿಸಿದ್ದರು. ಅದರಂತೆ ಐವರು ಅರ್ಜಿದಾರರ ವಿರುದ್ಧವೇ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಆರೋಪಿ ಸ್ಥಾನದಲ್ಲಿದ್ದ ಅರ್ಜಿದಾರರನ್ನು ಪೊಲೀಸರು ವಿಚಾರಣೆಗೊಳಪಡಿಸಿದಾಗ ಅವರು ಅಮಾಯಕರಾಗಿದ್ದು, ಮುಡಾ ಮತ್ತು ಬ್ಯಾಂಕ್ ನೌಕರರೇ ಈ ವಂಚನೆ ಎಸಗಿದ್ದಾರೆ ಎಂಬುದು ಪೊಲೀಸರಿಗೆ ತಿಳಿದು ಬಂದಿತ್ತು. ಈ ಹಿನ್ನೆಲೆಯಲ್ಲಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಅಸಲಿ ಚಲನ್, ಬ್ಯಾಂಕ್ ಸೀಲ್ ದುರ್ಬಳಕೆ: ತಿ.ನರಸೀಪುರ ತಾಲೂಕು ಎಂ.ಎಲ್.ಹುಂಡಿ ಗ್ರಾಮದ ಮೋಹನ್‌ಕುಮಾರ್, ಶ್ಯಾದನಹಳ್ಳಿ ಗ್ರಾಮದ ಆನಂದ ರೆಡ್ಡಿ, ಹೆಬ್ಬಾಳ್‌ನ ಯೋಗೇಶ್, ನಜರ್‌ಬಾದ್‌ನ ಯು.ಆರ್.ಗಿರೀಶ್ ಮತ್ತು ಬೆಂಗಳೂರಿನ ವೇಣುಗೋಪಾಲ್ ಎಂಬುವರು ಖಾತೆ ಬದಲಾವಣೆಗಾಗಿ ಮುಡಾಗೆ ಶುಲ್ಕ ಪಾವತಿಸಿದ್ದ ಚಲನ್ ಮತ್ತು ಅದರ ಮೇಲಿನ ಬ್ಯಾಂಕ್ ಸೀಲ್ ನಕಲಿಯಾಗಿದ್ದು, ಮುಡಾಗೆ ವಂಚಿಸಲಾಗಿದೆ ಎಂದು ಮುಡಾ ಅಧಿಕಾರಿ ಪೊಲೀಸರಿಗೆ ದೂರು ಸಲ್ಲಿಸಿದ್ದರು.



ಆದರೆ ಮುಡಾ ಚಲನ್ ಆಗಲೀ, ಬ್ಯಾಂಕ್‌ನ ಸೀಲ್ ಆಗಲೀ ನಕಲಿಯಾಗಿಲ್ಲದೇ ಅಸಲಿ ಎಂಬುದು ಪೊಲೀಸರ ತನಿಖೆ ವೇಳೆ ಬಯಲಾಗಿದೆ. ಆದರೆ ಬ್ಯಾಂಕ್‌ನ ಸೀಲ್ ಅನ್ನು ದುರ್ಬಳಕೆ ಮಾಡಿಕೊಂಡು ಬ್ಯಾಂಕ್ ಮತ್ತು ಮುಡಾ ನೌಕರರೇ ವಂಚನೆ ಎಸಗಿದ್ದಾರೆ ಎಂಬುದು ಬಯಲಾಗಿದೆ. ಮುಡಾದಿಂದ ಸೇವೆ ಪಡೆಯಲು ಬರುವ ಅರ್ಜಿದಾರರು ಮುಡಾ ಕಚೇರಿಯ ಸ್ಪಂದನಾ ಕೌಂಟರ್‌ನಲ್ಲಿ ಚಲನ್ ಪಡೆದು, ಆ ಚಲನ್ ಮೂಲಕ ಬ್ಯಾಂಕ್‌ಗೆ ಹಣ ಪಾವತಿಸಬೇಕು. ಆದರೆ ಮುಡಾ ನೌಕರರಾದ ನಂದನ್ ಮತ್ತು ತರುಣ್‌ಕುಮಾರ್ ಸ್ಪಂದನಾ ಕೌಂಟರ್ ಬಳಿಯೇ ಅರ್ಜಿದಾರರಿಂದ ಚಲನ್ ಮತ್ತು ಹಣವನ್ನು ಪಡೆದು ತಾವೇ ಬ್ಯಾಂಕ್‌ಗೆ ಹಣ ಪಾವತಿಸಿ ಅರ್ಜಿದಾರರ ಕೆಲಸ ಮಾಡಿಕೊಡುವುದಾಗಿ ನಂಬಿಸುತ್ತಿದ್ದರು. ಹಾಗೆ ಮುಡಾ ನೌಕರರು ಪಡೆದ ಚಲನ್ ಅನ್ನು ಬ್ಯಾಂಕ್ ಆಫ್ ಬರೋಡಾ ನೌಕರ ಸುನೀಲ್‌ಕುಮಾರ್‌ಗೆ ನೀಡಿದಾಗ ಆತ ಬ್ಯಾಂಕ್‌ನ ನೌಕರರು ಮೈಮರೆತಿರುವ ಅಥವಾ ಯಾವುದಾದರೂ ಕಾರಣಕ್ಕಾಗಿ ತಮ್ಮ ಆಸನದಿಂದ ಅತ್ತಿತ್ತ ಹೋದ ಸಮಯವನ್ನೇ ಬಳಸಿಕೊಂಡು ಟೇಬಲ್ ಮೇಲಿರುವ ಸೀಲ್ ಅನ್ನು ಚಲನ್‌ಗಳಿಗೆ ಒತ್ತಿ ಮುಡಾ ನೌಕರರಿಗೆ ನೀಡುತ್ತಿದ್ದ.

ಇಲ್ಲಿ ಬ್ಯಾಂಕ್‌ಗೆ ಹಣ ಪಾವತಿಯಾಗದೆಯೇ ಹಣ ಪಾವತಿಯಾದಂತೆ ಚಲನ್ ಮೇಲೆ ಸೀಲ್ ಬೀಳುತ್ತಿತ್ತು. ಮತ್ತೊಂದೆಡೆ ಮುಡಾ ಖಾತೆಗೆ ಹಣ ಜಮೆಯೂ ಆಗುತ್ತಿರಲಿಲ್ಲ. ಈ ಹಣ ಈ ಮೂವರ ಆರೋಪಿಗಳ ಪಾಲಾಗುತ್ತಿತ್ತು ಎಂಬುದು ತನಿಖೆಯಲ್ಲಿ ಗೊತ್ತಾಗಿದ್ದು, ಇವರುಗಳು ಕಳೆದ ಒಂದೂವರೆ ವರ್ಷದಿಂದ ಈ ಕೃತ್ಯ ಎಸಗುತ್ತಿದ್ದರು ಎಂಬುದು ತಿಳಿದು ಬಂದಿದೆ. ಮುಡಾ ಅಧಿಕಾರಿ ನೀಡಿರುವ ದೂರಿನಂತೆ ಕೇವಲ 5 ಚಲನ್‌ಗಳ ಮೂಲಕ ಮಾತ್ರ ವಂಚನೆಯಾಗಿದೆ. ಆದರೆ ಕಳೆದ ಒಂದೂವರೆ ವರ್ಷದಿಂದ ಈ ಆರೋಪಿಗಳು ಎಷ್ಟು ಚಲನ್‌ಗಳನ್ನು ಇದೇ ರೀತಿ ಬಳಸಿಕೊಂಡು ವಂಚನೆ ಎಸಗಿದ್ದಾರೆ ಎಂಬುದು ಸುದೀರ್ಘ ಪರಿಶೀಲನೆ ಹಾಗೂ ತನಿಖೆಯಿಂದ ಮಾತ್ರ ತಿಳಿಯಬೇಕಾಗಿದೆ.

ಇದಕ್ಕಾಗಿ ಮುಡಾ ಅಧಿಕಾರಿಗಳು ಕಳೆದ ಒಂದೂವರೆ ವರ್ಷದಿಂದ ಕಚೇರಿಗೆ ಸಲ್ಲಿಕೆಯಾಗಿರುವ ಎಲ್ಲಾ ಚಲನ್‌ಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮಾತ್ರ ಎಷ್ಟು ಮೊತ್ತದ ಹಣ ವಂಚನೆಯಾಗಿದೆ ಎಂಬುದು ತಿಳಿಯುತ್ತದೆ. ಅದಕ್ಕಾಗಿ ಮುಡಾ ವಲಯ ಕಚೇರಿ ಹಾಗೂ ಲೆಕ್ಕ ಶಾಖೆಯ ಸಮನ್ವಯತೆಯೊಂದಿಗೆ ವಿಶೇಷ ತಂಡವನ್ನೇ ರಚಿಸುವ ಅನಿವಾರ್ಯತೆ ಇದೆ ಎಂದು ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಓರ್ವ ಪ್ರಯಾಣಿಕ : "ಕಂಡಕ್ಟರ್ ನಿಮ್ಮ ಬಸ್‌ಗೆ ಎಫ್‌ಎಂ ಬಂದ ಮೇಲೆ ನೀವು ಬಹಳ ಖುಷಿಯಲ್ಲಿದ್ದೀರಾ ಯಾಕೆ?"
ಕಂಡಕ್ಟರ್ : "ಒಳ್ಳೊಳ್ಳೆ ಹಾಡು ಕೇಳ್ತಾ ಜನ ಬಾಕಿ ಚಿಲ್ಲರೆ ಮರೆತು ಹೋಗಿ ಬಿಡ್ತಾರೆ, ಅದಕ್ಕೆ ನನಗೆ ಖುಷಿ. !"

ಮೈಸೂರು ಮಿತ್ರ
ಶುಕ್ರವಾರ, 17 ನವೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಒಳ್ಳೆಯ ಪುಸ್ತಕವು ಕಷ್ಟಕಾಲದಲ್ಲಿ ಸ್ನೇಹಿತನಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಆಳವಾದ ದುಃಖವನ್ನು ಮರೆಯಲು ಸಹಾಯ ಮಾಡುತ್ತದೆ.
–ವೀಣಾ ಶಾಂತೇಶ್ವರಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರೀತಿಯಿದ್ದರೂ ನೀತಿ ನಿಯಮ ಬಿಡಬೇಡ

ನಿಮ್ಮ ಪತ್ರಗಳು

ಗಜ ಪ್ರಸವದ ನಂತರ...

ಮಾನ್ಯರೆ,
ಕೊನೆಗೂ ರಾಜ್ಯ ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ಬಿ.ವೈ.ವಿಜಯೇಂದ್ರ ಅವರನ್ನು ನೇಮಿಸಿದ ತರುವಾಯ ಅವರ ಪಕ್ಷದಲ್ಲೇ ಪರ–ವಿರೋಧದ ತಳಮಳ ನಡೆಯುತ್ತಿದೆ.

ವಿಜಯೇಂದ್ರ ಅವರನ್ನು ಹೊರತುಪಡಿಸಿ ಬೇರೆ ಯಾರನ್ನು ಆಯ್ಕೆ ಮಾಡಿದ್ದರೂ ಬಹುಶಃ ಇಷ್ಟೊಂದು ವಿರೋಧ ವ್ಯಕ್ತವಾಗುತ್ತಿರಲಿಲ್ಲ ಎಂದು ಭಾವಿಸಿದರೂ ಪಕ್ಷ ಸಂಘಟನೆಯಲ್ಲಿ ಇವರಿಗೆ ಹೆಚ್ಚಿನ ಜನ ಬೆಂಬಲ ಸಿಗುತ್ತದೆ ಎಂಬ ನಿರೀಕ್ಷೆ ಹೈಕಮಾಂಡ್‌ನವರದ್ದು. ಆದರೆ ಇದೇ ಹೈಕಮಾಂಡ್ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರನ್ನು ಹೇಗೆ ಹೀನಾಯವಾಗಿ ಅಧಿಕಾರದಿಂದ ಕೆಳಗಿಳಿಸಿದರು. ಹಾಗೂ ವಿಜಯೇಂದ್ರ ಅವರನ್ನು ಎಂಎಲ್‌ಸಿ ಮಾಡುವಂತೆ ಯಡಿಯೂರಪ್ಪನವರು ದುಂಬಾಲು ಬಿದ್ದರೂ ಲೆಕ್ಕಿಸದೆ ಹೇಗೆ ನಡೆಸಿಕೊಂಡರು ಎನ್ನುವುದು ಕೂಡ ಈಗ ಚರ್ಚಿತ ಎನ್ನುವುದು ಗಮನಾರ್ಹ.

ಇದರ ಬಗ್ಗೆ ಕೆಬಿಜಿಯವರು ತಮ್ಮ ಲೇಖನ 13.11.23ರಲ್ಲಿ ವಿಜಯೇಂದ್ರ ಅವರು ಕರ್ನಾಟಕದಲ್ಲಿ ಹರಿದು ಹಂಚಿ ಹೋಗಿರುವ ಬಿಜೆಪಿಯನ್ನು ಒಟ್ಟುಗೂಡಿಸಿ 2024 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸಂಸದರನ್ನೂ ದೆಹಲಿಗೆ ಕಳಿಸುವುದರಲ್ಲಿ ಸಂದೇಹ ವಿಲ್ಲ ಎಂಬ ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

ಆದರೆ ಬೇರೆಯವರು ಇರಲಿ ಈಗ ಬಿಜೆಪಿಯಲ್ಲೇ ಅಸಮಧಾನಿತರು ಕೊತ ಕೊತ ಕುದಿಯುತ್ತಿರುವುದರಿಂದ ಹುದ್ದೆ ಕೈ ತಪ್ಪಿದವರು, ಯಡಿಯೂರಪ್ಪ ವಿರೋಧಿಗಳು, ತಮಗೆ ಮುಂದೆ ಯಾವ ಹುದ್ದೆ, ಚುನಾವಣೆ ಸೀಟು ಸಿಗುವುದಿಲ್ಲ ಎಂದು ಖಾತ್ರಿಯಾದವರು ಒಮ್ಮೆಲೇ ಮುಗಿಬಿದ್ದಿರುವುದು ವಿರೋಧ ಪಕ್ಷದವರು ವಿರೋಧಿಸಲು ಆಗದಂತೆ ದಾಳಿ ನಡೆಸುತ್ತಿದ್ದಾರೆ.

ಆದರೆ ತಮಗೆ ಈ ಹಿಂದೆ ಇದ್ದ ಕಳಂಕಗಳನ್ನು ತೊಡೆದು ಪಕ್ಷವನ್ನು ಅವರು ಎಷ್ಟು ಎತ್ತರಕ್ಕೆ ಕೊಂಡೊಯ್ಯಬಲ್ಲರು ಎನ್ನುವುದು. ಅವರ ಪಕ್ಷದಲ್ಲಿನ ಅಸಮಾಧಾನ, ಒಗ್ಗಟ್ಟು, ಜನರ ಬೆಂಬಲ, ಚುನಾವಣೆಯ ಸನ್ನಿವೇಶಗಳನ್ನು ಅವಲಂಬಿಸಿದೆ. ಆ ಅಗ್ನಿ ಪರೀಕ್ಷೆಯ ಫಲಿತಾಂಶಕ್ಕಾಗಿ 2024ರ ಮೇವರೆಗೂ ಕಾಯುವುದು ಅನಿವಾರ್ಯ.

–ಮುಳ್ಳೂರು ಪ್ರಕಾಶ್, ಮೈಸೂರು.

ವೇಣುಗೋಪಾಲಸ್ವಾಮಿ ದೇವಸ್ಥಾನದ ರಸ್ತೆ ದುಸ್ಥಿತಿ



ಮಾನ್ಯರೆ,
ಕರ್ನಾಟಕದ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾದ ಕೃಷ್ಣರಾಜಸಾಗರದ ಹಿನ್ನೀರ ಬಳಿ ಇರುವ ವೇಣುಗೋಪಾಲ ಸ್ವಾಮಿ ದೇವಸ್ಥಾನಕ್ಕೆ ವಿವಿಧ ಭಾಗಗಳಿಂದ ಪ್ರತಿನಿತ್ಯ ನೂರಾರು ಮಂದಿ ಭೇಟಿ ನೀಡುತ್ತಿದ್ದಾರೆ. ಹೀಗೆ ಭೇಟಿ ನೀಡುವ ಪ್ರವಾಸಿಗರು ಹೊಸ ಕನ್ನಂಬಾಡಿ ಗ್ರಾಮದ ರಸ್ತೆಯ ಮೂಲಕವೇ ದೇವಸ್ಥಾನಕ್ಕೆ ತೆರಳಬೇಕಾಗುತ್ತದೆ. ಆದರೆ, ಈ ರಸ್ತೆಯು ಎಷ್ಟು ಹಾಳಾಗಲು ಸಾಧ್ಯವೋ ಅಷ್ಟೂ ಹಾಳಾಗಿದೆ. ದೇವಸ್ಥಾನಕ್ಕೆ ಬರುವವರು ಏಕಾದರೂ ಬಂದೆವೋ ಅಂದುಕೊಂಡು ಸಂಬಂಧಪಟ್ಟವರನ್ನು ಶಪಿಸಿಕೊಂಡು ಹೋಗುವುದು ಅಲ್ಲಿನ ದಿನಚರಿಯಾಗಿಬಿಟ್ಟಿದೆ. ಆದ್ದರಿಂದ, ಇನ್ನಾದರೂ ಸಂಬಂಧಪಟ್ಟವರು ಎಚ್ಚೆತ್ತುಕೊಂಡು ತ್ವರಿತವಾಗಿ ರಸ್ತೆ ದುರಸ್ತಿಗೊಳಿಸಿ, ಅಲ್ಲಿನ ಗ್ರಾಮಸ್ಥರು, ಭಕ್ತಾದಿಗಳು ಹಾಗೂ ಪ್ರವಾಸಿಗರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಸಂಸದ ಪ್ರತಾಪ್ ಸಿಂಹರ ಗಮನಕ್ಕೆ

ಮಾನ್ಯರೆ,
ರೈಲ್ವೆ ಇಲಾಖೆಯು ಹಿರಿಯ ನಾಗರಿಕರಿಗೆ ರಿಯಾಯಿತಿ ದರದಲ್ಲಿ ಟಿಕೆಟ್ ನೀಡಬೇಕು. ಇದರಿಂದ ವಯೋವೃದ್ಧರಿಗೆ ಅನುಕೂಲವಾಗುತ್ತದೆ. ಅಲ್ಲದೆ ರೈಲ್ವೆ ನಿಲ್ದಾಣದಲ್ಲಿ ವಾಹನಗಳಿಗೆ ದುಪ್ಪಟ್ಟು ಹಣ ವಸೂಲಿ ಮಾಡಲಾಗುತ್ತಿದೆ. ಕೂಡಲೇ ಮಾನ್ಯ ಸಂಸದರಾದ ಪ್ರತಾಪ್ ಸಿಂಹ ಅವರು ಇದರ ಬಗ್ಗೆ ಗಮನಹರಿಸಿ ಹಿರಿಯ ನಾಗರಿಕರಿಗೆ ರೈಲ್ವೆ ಟಿಕೆಟ್ ದರ ಕಡಿಮೆ ಮಾಡಿಸಿಕೊಡುವಂತೆ ಮನವಿ.

– ಬಿ. ಮಹದೇವಸ್ವಾಮಿ, ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್, ಮೈಸೂರು.

ಮೂಗು

ಮಾನ್ಯರೆ,
ಇಂದಿನ ಕೆಲವರು ಲಲನೆಯರ
ಮೂಗುಗಳೆ ಇಷ್ಟು
ಅಂದವಾಗಿರಬೇಕಾದರೆ,
(ಸೀಸರ್, ಆಂಟೋನಿಗಳನ್ನು ಮರುಳು ಮಾಡಿದ)
ಅಂದಿನ ಕ್ಲಿಯೋಪಾತ್ರಳ ಮೂಗು ಇನ್ನು ಹೇಗಿರಬೇಡ!?

ಹೃದಯ

ಮುಖ್ಯವಾದುದು
ಭಾವೈಕ್ಯ; ದೇಹ ಸಂಗಮವಲ್ಲ,
ಹೃದಯ ಸಂಗಮ; ಅದು
ಹೃದಯಂಗಮ ಕೂಡ!
(ಅನಂಗನ ಪಾತ್ರ ಗೌಣ)

ಬರ(ಹ) : ಯಾವುದಕ್ಕೆ ಬರ ಬಂದರೂ ಕವಿಗಳಿಗೆ
ಬರದು; ಬರವನ್ನೇ ಕುರಿತು ಬರೆದಾರು!

–ಸಿಪಿಕೆ, ಮೈಸೂರು.



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಲಲಿತ ಮಹಲ್ ಪ್ಯಾಲೆಸ್‌ಗೆ ಶಾಶ್ವತ ಕಾಯಕಲ್ಪವಾಗಬೇಕು

ಅಬ್ಬಾ! ಕಡೆಗೂ 38 ಕೋಟಿ ರೂ. ವೆಚ್ಚದಲ್ಲಿ ಲಲಿತ ಮಹಲ್ ಪ್ಯಾಲೆಸ್ ಪುನರುಜ್ಜೀವನ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಇದು ಒಳ್ಳೆಯ ಸುದ್ದಿ. ಆದರೆ, ಈ ಮೊತ್ತ ಪೂರ್ಣ ಪ್ರಮಾಣದ ಪುನರುಜ್ಜೀವನಕ್ಕೆ ಯಾವುದಕ್ಕೂ ಸಾಕಾಗುವುದಿಲ್ಲ. ವಾಸ್ತವವೆಂದರೆ ಈ ದುರಸ್ತಿ ಕಾರ್ಯ ಕೇವಲ ತಾತ್ಕಾಲಿಕ ಕ್ರಮ ಅಷ್ಟೆ

ಅದೇನೆ ಇರಲಿ. ಸರ್ಕಾರ ಲಲಿತ ಮಹಲ್ ಪ್ಯಾಲೆಸ್ ಹೋಟೆಲನ್ನು ದುರಸ್ತಿಗೊಳಿಸುವ ತುರ್ತು ಅಗತ್ಯವನ್ನು ಅರ್ಥ ಮಾಡಿಕೊಂಡು ತಾತ್ಕಾಲಿಕ ಕ್ರಮವನ್ನಾದರೂ ಕೈಗೊಳ್ಳುತ್ತಿರುವುದು ಪ್ರಶಂಸನೀಯ.

ಅನೇಕ ಮೈಸೂರಿಗರು ಅರಮನೆಯ ಪುನರುಜ್ಜೀವನಕ್ಕೆ ಸರ್ಕಾರ ಕ್ರಮ ಕೈಗೊಳ್ಳುವಷ್ಟರಲ್ಲಿ ಪ್ರಾಯಶಃ ಅರಮನೆ ಸಂಪೂರ್ಣ ಹಾನಿಗೊಳಗಾಗಿ ಅದನ್ನು ಪುನರುಜ್ಜೀವನಗೊಳಿಸುವುದರ ಬದಲು ಹೊಸದಾಗೇ ಪುನರ್ ನಿರ್ಮಿಸಬೇಕಾಗಬಹುದು ಎಂದು ಆತಂಕಗೊಂಡಿದ್ದರು.

ಈ ಆತಂಕ ಸಹಜವಾದುದು. ಏಕೆಂದರೆ ಸರ್ಕಾರ ತೀರಾ ತಡಮಾಡಿದ್ದರಿಂದ ಅನೇಕ ಪಾರಂಪರಿಕ ಕಟ್ಟಡಗಳು ಬಹುತೇಕ ಕುಸಿದು ಹೋಗಿವೆ.

2012 ರಲ್ಲಿ, 180 ವರ್ಷ ಹಳೆಯದಾದ ಲ್ಯಾನ್ಸ್‌ಡೌನ್ ಕಟ್ಟಡ ಕುಸಿಯಿತು. 2016 ರಲ್ಲಿ 136 ವರ್ಷಗಳಷ್ಟು ಹಳೆಯದಾದ ದೇವರಾಜ ಮಾರುಕಟ್ಟೆಯ ಒಂದು ಭಾಗ ಕುಸಿದು ಹೋಯಿತು. 2022ರಲ್ಲಿ ವಾಣಿ ವಿಲಾಸ ಮಾರುಕಟ್ಟೆ ಒಂದು ಪಾರ್ಶ್ವ ಕುಸಿದು ಬಿದ್ದು, ಹೋದ ವರ್ಷವೇ 106 ವರ್ಷದ ಹಿಂದಿನ ಮಹಾರಾಣಿ ಕಾಲೇಜಿನ ಒಂದು ಭಾಗ ಕುಸಿದು ಬಿದ್ದಿತು. ಈ ಮಧ್ಯೆ 2019ರಲ್ಲಿ ಸರಸ್ವತಿಪುರಂನ ಅಗ್ನಿಶಾಮಕ ಕೇಂದ್ರದ ಪ್ರಮುಖ ಭಾಗವೇ ಕುಸಿಯಿತು. ಮುಂದೆ ಲಲಿತ ಮಹಲ್ ಅರಮನೆಯ ಹಣೇಬರಹವೂ ಇಷ್ಟೇ ಎಂದು ನಾವು ಭಾವಿಸಿದ್ದೆವು.

ಲಲಿತ ಮಹಲ್ ಅರಮನೆಯ ದುರಸ್ತಿಗೆ 38 ಕೋಟಿ ರೂ. ಒದಗಿಸಲಾಗುತ್ತಿದೆ. ಆದರೆ ಇಷ್ಟು ಅನುದಾನ ಸಾಕೇ? ಎಲ್ಲಕ್ಕಿಂತ ಮಿಗಿಲಾಗಿ ಲಲಿತಮಹಲ್ ನಿಜವಾಗಿ ಪುನರುಜ್ಜೀವನಗೊಳ್ಳುವುದೇ? ಅದಕ್ಕೆ ಉತ್ತರ, ಬಹುಶಃ ಇಲ್ಲ.

ಅರಣ್ಯ ಇಲಾಖೆ ಅಡಿ ಬರುವ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್, ಲಲಿತ ಮಹಲ್ ಪ್ಯಾಲೆಸ್ ಅನ್ನು ಎಲ್ಲಿಯವರೆಗೆ ನಿರ್ವಹಿಸುವುದೋ ಅಲ್ಲಿಯವರೆಗೆ ಅದರ ಹಿಂದಿನ ಗತವೈಭವ ಮರುಕಳಿಸುವುದಿಲ್ಲ. ಅದು ಅವರ ತಪ್ಪಲ್ಲ. ಅವರ ಮೂಲ ಸಾಮರ್ಥ್ಯ ಅವರ ಹೆಸರಿನಲ್ಲೇ ಇದೆ. ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್‌ನವರು ಅರಣ್ಯದಲ್ಲಿನ ಲಾಡ್ಜ್‌ಗಳನ್ನಷ್ಟೇ ನಿರ್ವಹಿಸುವವರು!

ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್‌ನವರು ಅರಣ್ಯದಲ್ಲಿರುವ ರೆಸಾರ್ಟ್‌ಗಳನ್ನು ಮತ್ತು ಸಫಾರಿಗಳನ್ನು ಅದ್ಭುತವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಆದರೆ ಭವ್ಯ ಇತಿಹಾಸವಿರುವ ಐಷಾರಾಮಿ ಹೋಟೆಲನ್ನು ನಿರ್ವಹಿಸುವುದು ಹಾಗಿರಲಿ ಒಂದು ಪಾರಂಪರಿಕ ಐಷಾರಾಮಿ ಹೋಟೆಲನ್ನು ನಡೆಸಿಕೊಂಡು ಹೋಗುವ ಪ್ರಾವಿಣ್ಯತೆ ಅವರಲ್ಲಿ ಇಲ್ಲ.

ಲಲಿತ ಮಹಲ್ ಅರಮನೆಯ ಮೂಲ ವೈಭವ ಮರಳಬೇಕಾದರೆ ಅದರ ಪುನರುಜ್ಜೀವನ ಕಾರ್ಯವನ್ನು ಪಾರಂಪರಿಕ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ, ನಿರ್ವಹಿಸಿಕೊಂಡು ಹೋಗುವಂತಹ ಅನುಭವವಿರುವ ಖಾಸಗಿ ಹೋಟೆಲ್ ಸಮೂಹಕ್ಕೆ ಸರ್ಕಾರ ವಹಿಸುವ ಅಗತ್ಯವಿದೆ.

ಲಲಿತ ಮಹಲ್ ಅರಮನೆಯನ್ನು ಆರ್ಥಿಕವಾಗಿ ಸಾಕಷ್ಟು ಸುಸ್ಥಿತಿವುಳ್ಳ, ಪಾರಂಪರಿಕ ಕಟ್ಟಡಗಳನ್ನು ನಿರ್ವಹಿಸುವ ಕ್ಷಮತೆ ಇರುವ ವೃತ್ತಿಪರ ಹೋಟೆಲ್ ಸಮೂಹಕ್ಕೆ ವಹಿಸಿದರೆ ಅವರು ನಮ್ಮ ನಗರದ ಮೊದಲ ನಿಜವಾದ ಪಂಚತಾರ ಹೋಟೆಲ್ ಅನ್ನು ಪುನರ್ ಸೃಷ್ಟಿಸುತ್ತಾರೆ. ನಮ್ಮ ನಗರವನ್ನು ಶ್ರೀಮಂತ ಪ್ರವಾಸಿಗರಿಗೆ ಆಕರ್ಷಣೀಯ ತಾಣವನ್ನಾಗಿಸುತ್ತಾರೆ. ಆ ಹೋಟೆಲ್ ಕೂಡ ಒಂದು ಪ್ರವಾಸಿ ಕೇಂದ್ರವಾಗಲೂಬಹುದು.

ತಾಜ್ ಹೋಟೆಲ್ ಸಮೂಹ, ಶಿಥಿಲಗೊಂಡಿದ್ದಂತಹ ಹೈದರಾಬಾದ್‌ನ ಫಲೂಕ್‌ನುಮಾ ಪ್ಯಾಲೆಸ್ ಹೋಟೆಲ್ ಅನ್ನು ಹೇಗೆ ನಿರ್ವಹಿಸಿತು ಎಂಬ ತಾಜಾ ಉದಾಹರಣೆ ನಮ್ಮ ಮುಂದೇ ಇದೆ.



2000ರಲ್ಲಿ ತಾಜ್ ಹೋಟೆಲ್ ಫಲಕ್ನುಮಾ ಪ್ಯಾಲೆಸ್ ಹೋಟೆಲ್ ಅನ್ನು ತನ್ನ ಸುಪರ್ದಿಗೆ ತೆಗೆದುಕೊಂಡಾಗ ಕನಿಷ್ಠ 120 ಕೋಟಿ ರೂಪಾಯಿಗಳನ್ನು ಹೂಡುವುದಾಗಿ ಹೇಳಿತ್ತು. ಅಂದಾಜಿಗಿಂತ 100 ಕೋಟಿ ಹೆಚ್ಚು ವ್ಯಯಿಸಿ 10 ವರ್ಷಗಳಲ್ಲಿ ತನ್ನ ಕೆಲಸ ಮುಗಿಸಿತು. 2010ರಲ್ಲಿ, ಹೋಟೆಲ್ ಪ್ರವಾಸಿಗರಿಗೆ ತೆರೆದಾಗ ಜನರು ಅದರ ನೋಟಕ್ಕೆ ಮಾರು ಹೋದರು. ತಾಜ್ ಫಲಕ್ನುಮಾ ಪ್ಯಾಲೆಸ್ ಹೋಟೆಲ್‌ನ ಗತವೈಭವವನ್ನು ಪುನರ್ ಪ್ರತಿಷ್ಠಾಪಿಸಿದ್ದರು. ಕೇವಲ ಒಂದು ಹೋಟೆಲ್‌ಗಿಂತ ಮಿಗಿಲಾಗಿ ಫಲಕ್ನುಮಾ ಪ್ಯಾಲೆಸ್ ಈಗ ಒಂದು ಪ್ರವಾಸಿ ತಾಣವಾಗಿ ಹೊರಹೊಮ್ಮಿದೆ.

ಫಲಕ್ನುಮಾ ಪ್ಯಾಲೆಸ್ ಹೋಟೆಲ್ ವಾರಾಂತ್ಯಗಳಲ್ಲಿ ಪ್ರವಾಸಿಗರಿಗೆ ತೆರೆದಿರುತ್ತದೆ. ತಲಾ 3000 ರೂ.ಗಳಿಗೆ ಹೈ ಟೀಯೊಂದಿಗೆ ಗೈಡ್‌ಗಳು ಹೋಟೆಲ್ ಅನ್ನು ತೋರಿಸಿ, ಮಾಹಿತಿ ನೀಡುತ್ತಾರೆ. ಲಲಿತ ಮಹಲ್ ಹೋಟೆಲ್‌ನಲ್ಲೂ ಹೈ ಟೀ ದೊರೆಯುತ್ತದೆ. ಆದರೆ ಅದು ಫಲಕ್ನುಮಾ ಹೋಟೆಲ್‌ನಲ್ಲಿ ತಾಜ್ ಒದಗಿಸುವ ಜನಪ್ರಿಯ, ಐಷಾರಾಮಿ, ಸ್ಫೂರ್ತಿದಾಯಕ, ಶೈಕ್ಷಣಿಕ ವಿಷಯವಾಗಿಯೂ ಅದರ ಹತ್ತಿರಕ್ಕೂ ಇಲ್ಲ.

ನಮ್ಮ ಸರ್ಕಾರ ಎಂದಾದರೂ ತಾಜ್‌ನಂತಹ ಪ್ರತಿಷ್ಠಿತ ಕಂಪನಿ ಲಲಿತ ಮಹಲ್ ಪುನರುಜ್ಜೀವನಗೊಳಿಸಿ ನಿರ್ವಹಿಸುವ ಮಟ್ಟದ ಒಂದು ಟೆಂಡರನ್ನು ಕರೆಯುತ್ತದಾ? ನಾವು ಹಾಗೆ ಆಶಿಸುತ್ತೇವೆ. ಆದರೆ ನಮ್ಮ ನಿರೀಕ್ಷೆಗಳು ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನ ಕಂಬಗಳಂತೆ ದುರ್ಬಲಗೊಳ್ಳುತ್ತಿವೆ; ಏಕೆ?

ತಾಜ್ ಹೋಟೆಲ್, ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಅನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಲಿದೆ ಎಂಬ ವರದಿಗಳು ಕಳೆದ 22 ವರ್ಷಗಳಿಂದ ಕೇಳಿ ಬರುತ್ತಿವೆ. ಆದರೆ ಆ ರೀತಿ ಏನು ಆಗಿಲ್ಲ.

ಈ ರೀತಿಯ ಸುದ್ದಿಗಳು 2000ರಲ್ಲಿ ಪ್ರಾರಂಭವಾದವು. ಆಗ ದಿವಂಗತ ಅರುಣ್ ಜೇಟ್ಲಿಯವರು ಬಂಡವಾಳ ಹಿಂತೆಗೆತ ಮಂತ್ರಿಗಳಾಗಿದ್ದು, ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಅನ್ನು ಖಾಸಗಿಯವರಿಗೆ ಒಪ್ಪಿಸಲು ಬಯಸಿದ್ದರು. ಆಗಲೇ ನಾವು ತಾಜ್ ಕಂಪನಿ, ಲಲಿತ ಮಹಲ್ ತಾನು ತೆಗೆದುಕೊಳ್ಳಲಿದೆ ಎಂದು ಭಾವಿಸಿದ್ದೆವು. ಏನೂ ಆಗಲಿಲ್ಲ.

ಹದಿನೈದು ವರ್ಷಗಳ ನಂತರ, 2015ರಲ್ಲಿ ಕೇಂದ್ರದ ಪ್ರವಾಸೋದ್ಯಮ ಸಚಿವರಾಗಿದ್ದ ಮಹೇಶ್ ಶರ್ಮಾ ಹೀಗೆ ಹೇಳಿದ್ದರು, "ಈ ಹೋಟೆಲ್‌ಗಳು ನಿರಂತರವಾಗಿ ನಷ್ಟ ಅನುಭವಿಸುವುದಕ್ಕೆ ಬಿಡುವುದು ಬುದ್ಧಿವಂತಿಕೆಯಲ್ಲ". ಆಗ, ಮತ್ತೆ ತಾಜ್ ಪಡೆಯಲಿದೆ ಎಂದು ನಾವು ಭಾವಿಸಿದ್ದೆವು. ಆಗಲೂ ಏನು ಆಗಲಿಲ್ಲ.

ಎರಡು ವರ್ಷಗಳ ನಂತರ 2017ರಲ್ಲಿ ಐಟಿಡಿಸಿ (ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ) ಲಲಿತ ಮಹಲ್ ಹೋಟೆಲ್ ಅನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿತು. ಆಗಲೂ ತಾಜ್ ಪಡೆಯಬಹುದು ಎಂದು ಎಣಿಸಿದೆವು. ಅಂತಹದ್ದೇನೂ ಆಗಲಿಲ್ಲ ಬಿಡಿ.

ಈ ಮಧ್ಯೆ, ಅದು ಅರಣ್ಯಗಳಲ್ಲಿನ ಲಾಡ್ಜುಗಳನ್ನು ನಿರ್ವಹಣೆ ಮಾಡುತ್ತಿರುವ ರಾಜ್ಯ ಸರ್ಕಾರದ ಒಂದು ಅಂಗ ಸಂಸ್ಥೆಯಾದ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ವಶಕ್ಕೆ ಹೋಯಿತು.

ಆದರೆ, ಸರ್ಕಾರ ಇದೊಂದು ತಾತ್ಕಾಲಿಕ ವ್ಯವಸ್ಥೆ, ಜಾಗತಿಕ ಟೆಂಡರ್ ನಂತರ ಅತ್ಯಂತ ಅನುಭವಿ ಖಾಸಗಿ ಹೋಟೆಲ್ ಕಂಪನಿಯೊಂದಕ್ಕೆ ಇದನ್ನು ವಹಿಸಲಾಗುವುದು ಎಂದು ನಮಗೆ ಭರವಸೆ ನೀಡಿತ್ತು. ಆಗಲೂ ಮತ್ತೆ ತಾಜ್ ವಶವಾಗಬಹುದೆಂಬ ಹಲವು ಯೋಚನೆಗಳಿದ್ದವು. ಮತ್ತೇನು ಆಗಲಿಲ್ಲ.

2021ರಲ್ಲಿ, ತಾಜ್ ಭಾರತದಲ್ಲಿ 14 ಪ್ಯಾಲೆಸ್ ಹೋಟೆಲ್‌ಗಳನ್ನು ಪುನರುಜ್ಜೀವನಗೊಳಿಸಿ ನಿರ್ವಹಿಸುತ್ತಿರುವುದರಿಂದ ಅದು ಆಯ್ದ ಹೋಟೆಲ್ ಸಮೂಹ ಆದರೂ ಸರ್ಕಾರ ಶಿಷ್ಟಾಚಾರದಂತೆ ಜಾಗತಿಕ ಟೆಂಡರ್ ಕರೆಯಲಿದೆ ಎಂದು ಹೇಳಲಾಯಿತು. ಇದುವರೆಗೂ ಏನೂ ಆಗಲಿಲ್ಲ.

ಕಳೆದ ವರ್ಷವೂ ತಾಜ್ ಕೈಗೆತ್ತಿಕೊಳ್ಳಲಿದೆ ಎಂಬ ವರದಿಗಳು ಬಂದವು. ಇನ್ನೂ ಏನೂ ಆಗಿಲ್ಲ ಅನ್ನಿ.

ಲಲಿತ ಮಹಲ್‌ನ ಪುನರುಜ್ಜೀವನ ಮೈಸೂರಿಗೆ ಬಹಳ ಮುಖ್ಯ. ಅದು ನಗರಕ್ಕೆ ಪ್ರವಾಸಿ ತಾಣವಾಗಿ ಒಂದು ಹೊಸ ಆಯಾಮವನ್ನು ನೀಡಲಿದೆ. ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಅದರ ಗತವೈಭವಕ್ಕೆ ಮರಳಿದರೆ, ನಾವು ಮೈಸೂರು ಪಾರಂಪರಿಕ ರಾಜವೈಭೋಗದ ಕಟ್ಟಡಗಳ ನಗರಿಯೆಂದು ಹೇಳಿಕೊಳ್ಳುವುದಕ್ಕೂ ಸಾರ್ಥಕವಾಗುತ್ತದೆ.

ಸದ್ಯಕ್ಕೆ, ನಮ್ಮ ಸರ್ಕಾರ ಜಾಗತಿಕ ಮಟ್ಟದ ಟೆಂಡರ್ ಕರೆಯಲು ಕಾಯುತ್ತಿರುವಂತೆ ಲಲಿತ ಮಹಲ್ ಅರಮನೆಗೆ 102 ವರ್ಷ ತುಂಬಿದೆ. ಆದರೆ, ನನಗೆ ಭಯ ಏನೆಂದರೆ ಅದು ಹೆಚ್ಚು ಕಾಲ ಬಾಳುವುದಿಲ್ಲ ಎಂಬುದು. ಆಕೆಯನ್ನು ತಾತ್ಕಾಲಿಕ ದುರಸ್ತಿಗಳೊಂದಿಗೆ ಊರ್ಜಿತಗೊಳಿಸಿದರೂ ಅದು ಒಂದು ಕಾಲದ ಸುಂದರಿ ಎಂಬಂತೆ ಕಂಗೊಳಿಸುತ್ತಾಳೆ. ಆದರೆ ಆಕೆಯ ಮಕ್ಕಳು ಅವಳನ್ನು ಹಾಳು ಮಾಡಿದ್ದಾರೆ.

ನಿರ್ಲಕ್ಷ್ಯದಿಂದಾಗಿ, ನಮ್ಮ ಸುತ್ತಲ ಹಳೆಯ ಸುಂದರ ಕಟ್ಟಡಗಳು ಹಾಳಾಗುತ್ತಿರುವುದನ್ನು ನೋಡಿದಾಗ ನನಗೆ ಕನ್ನಡದ ಒಂದು ಗಾದೆ ಮಾತು ನೆನಪಿಗೆ ಬರುತ್ತದೆ–

ಮಂಗನ ಕೈಯ್ಯಲ್ಲಿ ಮಾಣಿಕ್ಯ!

ಲಲಿತ ಮಹಲ್ ಪ್ಯಾಲೆಸ್ ಸರ್ಕಾರದ ಕೈಯ್ಯಲ್ಲಿರುವ ಒಂದು ಮಾಣಿಕ್ಯ. ಅದು ಎಷ್ಟು ಅಮೂಲ್ಯ ಎಂಬುದನ್ನು ಅದು ಅರ್ಥಮಾಡಿಕೊಂಡಿಲ್ಲ. ಸುಂದರ ವಸ್ತುಗಳ ಬಗ್ಗೆ ಅರಿಯುವಷ್ಟು ನಾವು ಯೋಗ್ಯರಲ್ಲ. ನಮಗೆ ಅವುಗಳ ಬೆಲೆಯೂ ತಿಳಿದಿಲ್ಲ. ಕಾಲ ಮಿಂಚುವ ಮುನ್ನ ಸರ್ಕಾರ ಅರಿತುಕೊಳ್ಳುವುದು ಎಂದು ಆಶಿಸುತ್ತೇನೆ.

email : vikram@starofmysore.com

ಹಾಸನಾಂಬೆ : 8.72 ಕೋಟಿ ರೂ. ಸಂಗ್ರಹ

14.20 ಲಕ್ಷಕ್ಕೂ ಹೆಚ್ಚು ಭಕ್ತರಿಂದ ದರ್ಶನ



ಹಾಸನ: ಹಾಸನಾಂಬೆ ದೇವಾಲಯದ ಹುಂಡಿ ಎಣಿಕೆ ಕಾರ್ಯ ಪೂರ್ಣವಾಗಿದ್ದು, ದಾಖಲೆ ಪ್ರಮಾಣದ 8.72 ಕೋಟಿ ಹಾಗೂ 62 ಗ್ರಾಂ ಚಿನ್ನ ಸಂಗ್ರಹವಾಗಿದೆ.

ಹುಂಡಿಯಲ್ಲಿ 2.55 ಕೋಟಿ ರೂ. ಸಂಗ್ರಹವಾಗಿದ್ದು, ಮುನ್ನೂರು ರೂ. ಟಿಕೆಟ್ ಮತ್ತು ಲಾಡು ಮಾರಾಟದಿಂದ 6.17 ಕೋಟಿ ಸೇರಿ ಒಟ್ಟು 8,72,41,531 ದಾಖಲೆ ಆದಾಯ ಗಳಿಸಲಾಗಿದೆ. ಕಾಣಿಕೆ ರೂಪದಲ್ಲಿ 62 ಗ್ರಾಂ ಚಿನ್ನ, 161 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ ಎಂದು ದೇಗುಲದ ಆಡಳಿತಾಧಿಕಾರಿ ಮಾರುತಿ ತಿಳಿಸಿದ್ದಾರೆ.

ಎಣಿಕೆ ಬಿರುಸು: ಸಿದ್ದೇಶ್ವರ ಸ್ವಾಮಿ ದೇವಾಲಯದ ಮುಂಭಾಗ ಹುಂಡಿ ಎಣಿಕೆ ನಡೆಸಲಾಯಿತು. ಬ್ಯಾಂಕ್, ಕಂದಾಯ, ಮುಜರಾಯಿ, ಎಸಿ ಕಚೇರಿ, ಸ್ಕೌಟ್ಸ್ ಮತ್ತು ಗೈಡ್ಸ್ ಹೀಗೆ 300ಕ್ಕೂ ಹೆಚ್ಚು ಜನ ಎಣಿಕೆ ಕಾರ್ಯದಲ್ಲಿದ್ದರು. ನ.2ರಿಂದ 15 ರವರೆಗೆ ಈ ಬಾರಿಯ ಹಾಸನಾಂಬೆ ಜಾತ್ರಾ ಮಹೋತ್ಸವ ನಡೆದಿತ್ತು. ಈ ಅವಧಿಯಲ್ಲಿ ಮೊದಲ ಹಾಗೂ ಕಡೆಯ ದಿನ ಸಾರ್ವಜನಿಕ ದರ್ಶನ ಇಲ್ಲದೇ ಇದ್ದರೂ, ಗಣ್ಯರು, ಜನಪ್ರತಿನಿಧಿಗಳು ಸೇರಿ ಸುಮಾರು 14.20 ಲಕ್ಷಕ್ಕೂ ಹೆಚ್ಚು ಜನ ಭಕ್ತರು ದೇವಿಯ ದರ್ಶನ ಪಡೆದಿದ್ದಾರೆ. ನಾಣ್ಯಗಳು ಹಾಗೂ ನೋಟುಗಳನ್ನು ವಿಂಗಡಿಸಿ, ಬಿಸಿಲಲ್ಲಿ ಒಣಗಿಸಿ ಎಣಿಕೆ ಮಾಡಲಾಯಿತು. ವಿದೇಶಿ ಕರೆನ್ಸಿಗಳು ಹುಂಡಿಯಲ್ಲಿ ಹಾಕಿರುವುದು ಕಂಡು ಬಂತು. ನಿಷೇಧವಾಗಿರುವ ನೋಟುಗಳು, ವಾಚು, ಹಾರ ಸೇರಿದಂತೆ ಹಲವು ವಿವಿಧ ಬಗೆಯ ವಸ್ತುಗಳು ಇತರೆ ಬೆಳ್ಳಿ ಪದಾರ್ಥಗಳನ್ನು ಕೂಡ ಭಕ್ತರು ದೇವಿಗೆ ಅರ್ಪಣೆ ಮಾಡಿದ್ದಾರೆ.

ಕೋರಿಕೆ ಪತ್ರ ಬಹಿರಂಗ ಇಲ್ಲ: ಹಾಸನಾಂಬೆ ದೇವಿಯಲ್ಲಿ ನಾನಾ ಬೇಡಿಕೆ, ಇಷ್ಟಾರ್ಥ, ಆಸೆ–ಕನಸುಗಳನ್ನು ಈಡೇರಿಸು ತಾಯೆ ಎಂದು ಹಲವು ಕೋರಿಕೆ ಪತ್ರಗಳು ಹುಂಡಿ ಸೇರಿದ್ದವು. ಆದರೆ, ಕಳೆದ ಎರಡು ವರ್ಷದ ಹಿಂದೆ ಅವಾಂತರ ಸೃಷ್ಟಿಯಾಗಿದ್ದ ಕಾರಣದಿಂದ ಈ ಬಾರಿ ಯಾವುದೇ ಕೋರಿಕೆ ಪತ್ರಗಳನ್ನು ಬಹಿರಂಗಪಡಿಸದಂತೆ ಉಪ ವಿಭಾಗಾಧಿಕಾರಿ ಮಾರುತಿ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

ಯಾವ ವರ್ಷ ಎಷ್ಟು ಆದಾಯ?

2013	1.21 ಕೋಟಿ ರೂ
2014	1.27 ಕೋಟಿ ರೂ
2015	1.46 ಕೋಟಿ ರೂ
2016	2.67 ಕೋಟಿ ರೂ
2017	4.14 ಕೋಟಿ ರೂ
2018	2.68 ಕೋಟಿ ರೂ
2019	3.06 ಕೋಟಿ ರೂ
2020	22.79 ಲಕ್ಷ ರೂ
2021	1.54 ಕೋಟಿ ರೂ
2022	3.36 ಕೋಟಿ ರೂ
2023	8.72 ಕೋಟಿ ರೂ.

ಶಾಸಕ ಎಚ್.ಪಿ.ಸ್ವರೂಪ್, ಜಿಲ್ಲಾಧಿಕಾರಿ ಸತ್ಯಭಾಮಾ, ಉಪ ವಿಭಾಗಾಧಿಕಾರಿ ಮಾರುತಿ ಅವರ ನೇತೃತ್ವದಲ್ಲಿ ಹುಂಡಿಗಳ ಸೀಲ್ ತೆಗೆದು ಎಣಿಕೆಗೆ ಅನುವು ಮಾಡಿ ಕೊಡಲಾಯಿತು.

ವಿದೇಶಿ ಹಣ: ಚೀನಾ, ಅಮೆರಿಕ, ದುಬೈ, ಥೈಲ್ಯಾಂಡ್ ಸೇರಿದಂತೆ ನಾನಾ ದೇಶದ ಕರೆನ್ಸಿ ಹುಂಡಿಯಲ್ಲಿ ಪತ್ತೆಯಾಗಿದ್ದು, ಅದರ ಮೌಲ್ಯ ಹಾಗೂ ಕರೆನ್ಸಿ ಬದಲಾವಣೆಗೆ ಬ್ಯಾಂಕ್‌ಗೆ ನೀಡಲಾಗಿದೆ ಎಂದು ಹಾಸನ ದೇಗುಲ ಆಡಳಿತಾಧಿಕಾರಿ ಮಾರುತಿ ತಿಳಿಸಿದ್ದಾರೆ.

ಹಾಸನಾಂಬೆ ಕೋಟ್ಯಾಧಿಪತಿ: ಹಾಸನಾಂಬೆ ಕೋಟ್ಯಾಧಿಪತಿ ದೇವರ ಸಾಲಿಗೆ ಸೇರ್ಪಡೆಯಾಗಿದ್ದಾಳೆ. ವರ್ಷದಿಂದ ವರ್ಷಕ್ಕೆ ಭಕ್ತರಷ್ಟೇ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿಲ್ಲ. ಜತೆಗೆ ಆದಾಯ ಕೂಡ ವೃದ್ಧಿಸಿ ರಾಜ್ಯದ 'ಎ' ಗ್ರೇಡ್ ದೇಗುಲದಲ್ಲಿ ಸ್ಥಾನ ಪಡೆದಿದ್ದಾಳೆ.

ಕಮಿಷನ್ ಆಸೆ ತೋರಿಸಿ ಇಬ್ಬರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚನೆ

ಮೈಸೂರು, ನ.16–ಹೋಟೆಲ್‌ಗಳಿಗೆ ರೇಟಿಂಗ್ ನೀಡಿದರೆ ದೊಡ್ಡ ಮೊತ್ತದ ಕಮಿಷನ್ ಪಡೆಯಬಹುದು ಎಂದು ನಂಬಿಸಿ ಮೈಸೂರಿನ ಇಬ್ಬರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ.

ಮೈಸೂರಿನ ಅಶೋಕ ರಸ್ತೆ ನಿವಾಸಿ ನಯೀಂ ಅಹಮದ್(37) ಎಂಬುವರ ವಾಟ್ಸಾಪ್‌ಗೆ ಪಾರ್ಟ್ ಟೈಂ ಜಾಬ್ ಬಗ್ಗೆ ಆಸಕ್ತಿ ಇದೆಯೇ? ಎಂದು ಅಪರಿಚಿತ ಸಂಖ್ಯೆಯಿಂದ ಮೆಸೇಜ್ ರವಾನೆಯಾಗಿದೆ. ಮೆಸೇಜ್‌ಗೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದಾಗ ಅವರನ್ನು ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಿ ಕ್ಲೈಂಟ್ ಐಡಿಯನ್ನು ಕ್ರಿಯೇಟ್ ಮಾಡಿಕೊಟ್ಟು, ಹೋಟೆಲ್‌ಗಳಿಗೆ ರೇಟಿಂಗ್ ನೀಡಿದರೆ ಸಾಕು, ದೊಡ್ಡ ಮೊತ್ತದ ಕಮಿಷನ್ ಸಿಗುತ್ತದೆ ಎಂದು ನಂಬಿಸಲಾಗಿದೆ. ಅವರು ಮಾಡಿದ ಮೊದಲ ರೇಟಿಂಗ್‌ಗೆ 150 ರೂ. ಕಮಿಷನ್ ಅವರ ಖಾತೆಗೆ ಜಮೆ ಮಾಡಲಾಗಿದೆ. ನಂತರ ಹಂತ ಹಂತವಾಗಿ 2,53,750 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಉದಯಗಿರಿ ನಿವಾಸಿ ಅಬ್ದುಲ್ ಷರೀಫ್(40) ಎಂಬುವರಿಗೂ ಕೂಡ ಪಾರ್ಟ್ ಟೈಂ ಜಾಬ್ ಬಗ್ಗೆ ವಾಟ್ಸಾಪ್‌ಗೆ ಮೆಸೇಜ್ ರವಾನಿಸಿದ್ದು, ಅವರನ್ನು ಟೆಲಿಗ್ರಾಂಗೆ ಸೇರಿಸಿ ಹೋಟೆಲ್‌ಗಳಿಗೆ 5 ಸ್ಟಾರ್ ರೇಟಿಂಗ್ ನೀಡಿದರೆ ಕಮಿಷನ್ ಬರುತ್ತದೆ ಎಂದು ನಂಬಿಸಿ, ಮೊದಲಿಗೆ ಅವರ ಖಾತೆ 50 ರೂ. ಜಮೆ ಮಾಡಲಾಗಿದೆ. ನಂತರ ಅವರು ಒಮ್ಮೆ ಸಾವಿರ ರೂ., ಮತ್ತೊಮ್ಮೆ 3 ಸಾವಿರ ರೂ. ವರ್ಗಾಯಿಸಿ ರೇಟಿಂಗ್ ಮಾಡಿದ ಅವರು ಕಮಿಷನ್ ನೀಡಲಾಗಿದೆ. ಹಂತ ಹಂತವಾಗಿ 1.71 ಲಕ್ಷ ರೂ.ಗಳನ್ನು ಅವರು ವರ್ಗಾವಣೆ ಮಾಡಿದ್ದು, ತನ್ನ ಹಣ ಹಾಗೂ ಕಮಿಷನ್ ನೀಡುವಂತೆ ಕೇಳಿದಾಗ ಮತ್ತೆ 6.30 ಲಕ್ಷ ರೂ. ವರ್ಗಾವಣೆ ಮಾಡಿದಾಗ ಮಾತ್ರ ನಿಮ್ಮ ಹಣ ಹಿಂತಿರುಗಿಸಲಾಗುತ್ತದೆ ಎಂದು ಹೇಳುವ ಮೂಲಕ ವಂಚಿಸಲಾಗಿದೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಚಾಮುಂಡಿಬೆಟ್ಟ ದಾಸೋಹ ಭವನದಲ್ಲಿ ಬಿಸಿ ಸಾಂಬಾರ್ ಬಿದ್ದು ಅಡುಗೆ ಸಿಬ್ಬಂದಿಗೆ ಗಾಯ

ಮೈಸೂರು, ನ.16(ಎಂಕೆ)– ಚಾಮುಂಡಿಬೆಟ್ಟದ ದಾಸೋಹ ಭವನದಲ್ಲಿ ಬಿಸಿ ಸಾಂಬಾರ್ ಬಿದ್ದು ಅಡುಗೆ ಸಿಬ್ಬಂದಿ ಗಾಯಗೊಂಡಿರುವ ಘಟನೆ ನಡೆದಿದೆ.

ಇಲ್ಲಿನ ಸಿಬ್ಬಂದಿ ಚಿನ್ನಸ್ವಾಮಿ(29) ಗಾಯಗೊಂಡವರಾಗಿದ್ದು, ಬುಧವಾರ ಮಧ್ಯಾಹ್ನ ಊಟ ಬಡಿಸುವಾಗ ಕಾಲುಗಳ ಮೇಲೆ ಸಾಂಬಾರ್ ಬಿದ್ದಿದೆ. ಬಳಿಕ ಗಾಯಗೊಂಡಿದ್ದ ಚಿನ್ನಸ್ವಾಮಿಯವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಕೆ.ಆರ್.ಠಾಣೆ ಪೊಲೀಸರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜ್ಯಪಾಲರ ಕಾರ್ಯಕ್ರಮಕ್ಕೆ ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ

●ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಕಿಡಿ ●ರಾಷ್ಟ್ರಪತಿಗೆ ಪತ್ರ ಬರೆದು ದೂರು ●ಕೇಂದ್ರ ಸರ್ಕಾರದಿಂದ ಸರ್ವಾಧಿಕಾರ ಧೋರಣೆ ●ರಾಜಕೀಯ ಗಾಳವಾಗಿ ಅಧಿಕಾರಿಗಳ ಬಳಕೆ ●ನಿವೃತ್ತ ಅಧಿಕಾರಿಗಳು ದನಿ ಎತ್ತಬೇಕು



ಗೊತ್ತಿಲ್ಲ..., ಕೇಳಿಲ್ಲ..., ನೋಡಿಲ್ಲ...

ಮೈಸೂರು, ನ.16(ಬಿಎಲ್‌ಯು)– ನನಗೆ ಏನು ಗೊತ್ತಿಲ್ಲ, ನಾನು ಏನು ಕೇಳಿಲ್ಲ, ನಾನು ಏನು ನೋಡಿಲ್ಲ. ವರ್ಗಾವಣೆ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಅವರ ಪುತ್ರ ಡಾ.ಯತೀಂದ್ರ ಮಾತನಾಡಿದ್ದಾರೆಂಬ ವಿಡಿಯೋ ವೈರಲ್ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೀಡಿದ ಪ್ರತಿಕ್ರಿಯೆ ಇದು.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಚಾರವಾಗಿ ನನ್ನ ಏನು ಕೇಳಬೇಡಿ, ನನಗೆ ಏನು ಗೊತ್ತಿಲ್ಲ, ನಾನು ಏನು ಕೇಳಿಲ್ಲ, ನಾನು ಏನು ನೋಡಿಲ್ಲ ಎಂದು ಹೇಳಿದರು. ಸರ್ಕಾರದಲ್ಲಿ ವರ್ಗಾವಣೆ ಎಂಬುದು ಮುಖ್ಯಮಂತ್ರಿಗಳಿಗೆ ಇರುವ ಪರಮೋಚ್ಚ ಅಧಿಕಾರ. ಇದರಲ್ಲಿ ಯಾರೂ ಮೂಗು ತೂರಿಸಬಾರದು ಎಂದು ಹೇಳಿದರು.

ಇದೇ ವಿಚಾರವಾಗಿ ಮತ್ತಷ್ಟು ಪ್ರಶ್ನೆ ಕೇಳಿದಾಗ, ಎಲ್ಲದಕ್ಕೂ ಕಾನೂನು ಇದೆ. ಕಾನೂನಿನ ಪ್ರಕಾರ ಏನು ಆಗಬೇಕೋ ಅದು ಆಗುತ್ತದೆ ಎಂದು ಡಾ.ಮಹದೇವಪ್ಪ ಜಾರಿಕೊಂಡರು.

ಮೈಸೂರು, ನ.16(ಬಿಎಲ್‌ಯು)– ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪಾಲ್ಗೊಂಡಿದ್ದ ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ತಮ್ಮನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಕೇಂದ್ರ ಸರ್ಕಾರದ ಸರ್ವಾಧಿಕಾರ ಧೋರಣೆ ವಿರುದ್ಧ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆಯುವುದಾಗಿ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಈ ರೀತಿಯ ಸರ್ವಾಧಿಕಾರ ಧೋರಣೆ ಅನುಸರಿಸುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಗಣತಂತ್ರ ವ್ಯವಸ್ಥೆಯ ಕತ್ತು ಹಿಸುಕುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಷ್ಟಾಚಾರ ಪಾಲನೆ ಮಾಡಬೇಕು. ಎಲ್ಲಾ ರೀತಿಯ ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ಪಾಲನ್ನು ನೀಡುತ್ತದೆ. ಆದರೆ ರಾಜ್ಯಪಾಲರು ಭಾಗವಹಿಸಿದ್ದ ಮೈಸೂರು ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ತಮ್ಮನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ. ಗಣತಂತ್ರ ವ್ಯವಸ್ಥೆ ಬಲಪಡಿಸುವುದರ ಬದಲು ಅದನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದು ಡಾ.ಮಹದೇವಪ್ಪ ಆರೋಪಿಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆ ಪ್ರತಿಯೊಂದು ಜಿಲ್ಲೆಗೆ ಐಎಎಸ್ ಅಧಿಕಾರಿಗಳನ್ನು ನಿಯೋಜಿಸುತ್ತಿದ್ದಾರೆ. ಜನರ ಬೆಂಬಲ ಸಿಗುತ್ತಿಲ್ಲ ಎಂದು ಮನವರಿಕೆ ಆದ ಮೇಲೆ ಕೇಂದ್ರ ಸರ್ಕಾರದ ಯೋಜನೆಗಳನ್ನು ಪ್ರಚಾರ ಮಾಡುವ ತಂತ್ರಗಾರಿಕೆ ರೂಪಿಸಿದ್ದಾರೆ. ಇದರ ಮೂಲಕ ಕೇಂದ್ರದ ಬಿಜೆಪಿ ಸರ್ಕಾರ ಐಎಎಸ್ ಸೇರಿದಂತೆ ಇತರೆ ಅಧಿಕಾರಿಗಳನ್ನು ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ಯುಪಿಎಸ್‌ಸಿಯಿಂದ ಆಯ್ಕೆಯಾಗುವ ಐಎಎಸ್ ಸೇರಿದಂತೆ ಇತರೆ ಅಧಿಕಾರಿಗಳು ನೇರವಾಗಿ ರಾಷ್ಟ್ರಪತಿಗಳ ವ್ಯಾಪ್ತಿಗೆ ಒಳಪಡುತ್ತಾರೆ. ಆದ ಕಾರಣ ರಾಷ್ಟ್ರಪತಿಗಳ ಮಧ್ಯ ಪ್ರವೇಶ ಮಾಡಿ ಅವ್ಯವಸ್ಥೆ ಸರಿಪಡಿಸುವಂತೆ ಪತ್ರ ಬರೆಯುತ್ತಿದ್ದೇನೆ ಎಂದು ಡಾ.ಮಹದೇವಪ್ಪ ಹೇಳಿದರು.

ಕರ್ನಾಟಕ ಮಾತ್ರವಲ್ಲದೆ ಬಿಜೆಪಿಯೇತರ ಸರ್ಕಾರ ಅಧಿಕಾರದಲ್ಲಿರುವ ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ ಇತರೆ ರಾಜ್ಯಗಳಲ್ಲಿ ಕೂಡ ಇದೇ ಪರಿಸ್ಥಿತಿ ಇದೆ. ಈ ಮೂಲಕ ಕೇಂದ್ರ ಸರ್ಕಾರ ಅಧಿಕಾರಿಗಳನ್ನು ರಾಜಕೀಯ ಗಾಳವಾಗಿ ಬಳಸಿಕೊಳ್ಳುತ್ತಿದೆ ಎಂದು ಆಪಾದಿಸಿದರು. ಬಹಳಷ್ಟು ಪ್ರಾಮಾಣಿಕ, ಸಾಮಾಜಿಕ ಕಳಕಳಿ ಇರುವ ಅಧಿಕಾರಿಗಳಿದ್ದಾರೆ. ಸರ್ಕಾರದ ವ್ಯವಸ್ಥೆಯಲ್ಲಿ ಇವರು ಮಾತನಾಡಲು ಸಾಧ್ಯವಾಗದಿದ್ದರೆ, ನಿವೃತ್ತಿ ಹೊಂದಿರುವ ಅಧಿಕಾರಿಗಳಾದರೂ ದನಿ ಎತ್ತಬೇಕು ಎಂದು ಸಲಹೆ ನೀಡಿದರು.

ತಮಿಳುನಾಡು ಸೇರಿದಂತೆ ಇತರೆ ರಾಜ್ಯಗಳಲ್ಲಿ ಅಲ್ಲಿನ ಆಡಳಿತರೂಢ ಪಕ್ಷದ ಕಾರ್ಯಕರ್ತರು ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಒಳಗೆ ಬಿಟ್ಟುಕೊಳ್ಳುತ್ತಿಲ್ಲ. ಆದರೆ ಕಾಂಗ್ರೆಸ್ ಸಂಸ್ಕೃತಿ ಇರುವ ಪಕ್ಷವಾದ ಕಾರಣ ನಮ್ಮ ಕಾರ್ಯಕರ್ತರು ಆ ಮಟ್ಟಕ್ಕೆ ಹೋಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಇದು ನಮ್ಮ ದೌರ್ಬಲ್ಯ ಎಂದು ಭಾವಿಸಬಾರದು ಎಂದು ಡಾ.ಮಹದೇವಪ್ಪ ಎಚ್ಚರಿಕೆ ನೀಡಿದರು. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪಡಿತರ ಮಾರಾಟ ಮಾಡುವವರ ಪಡಿತರ ಚೀಟಿಯೇ ರದ್ದು

●ಜಿಲ್ಲಾಧಿಕಾರಿ ಡಾ.ರಾಜೇಂದ್ರ ಎಚ್ಚರಿಕೆ ●ಪಡಿತರ ಖರೀದಿ ಪ್ರಕರಣ ಬಯಲಾಗುತ್ತಿದ್ದಂತೆ ಎಚ್ಚೆತ್ತ ಜಿಲ್ಲಾಡಳಿತ





ಮೈಸೂರು, ನ.16(ಎಸ್‌ಬಿಡಿ)– ಸರ್ಕಾರ ನೀಡುವ ಪಡಿತರವನ್ನು ಖರೀದಿಸುವುದಷ್ಟೇ ಅಲ್ಲ ಮಾರಾಟ ಮಾಡುವುದೂ ಶಿಕ್ಷಾರ್ಹ ಅಪರಾಧ. ಅಂತಹವರ ಪಡಿತರ ಚೀಟಿಯೇ ರದ್ದಾಗುತ್ತದೆ ಎಚ್ಚರಿಕೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ 'ಅನ್ನಭಾಗ್ಯ' ಅಕ್ಕಿ ದಂಧೆ ವ್ಯಾಪಕವಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು, ಪತ್ರಿಕಾ ಪ್ರಕಟಣೆ ಮೂಲಕ ಮಾರುವವರು ಹಾಗೂ ಕೊಳ್ಳುವವರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಪ್ರತಿ ತಿಂಗಳು ಸರ್ಕಾರದಿಂದ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡುವ ಆಹಾರ ಧಾನ್ಯಗಳನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಧ್ಯಮದ ಮೂಲಕ ತಿಳಿದು ಬಂದಿದೆ. ಈ ರೀತಿ ಕಾರ್ಡ್‌ದಾರರಿಗೆ ಆಮಿಷ ಒಡ್ಡಿ ಪಡಿತರ ಪದಾರ್ಥಗಳನ್ನು ಖರೀದಿ ಮಾಡುತ್ತಿರುವವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ–1955ರಡಿ ಪ್ರಕರಣ ದಾಖಲು ಮಾಡಲಾಗುತ್ತಿದೆ. ಹಾಗೆಯೇ ಪಡಿತರ ಪದಾರ್ಥಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದೂ ಶಿಕ್ಷಾರ್ಹ ಅಪರಾಧ ಅಂತಹ ಕಾರ್ಡ್‌ದಾರರ ವಿರುದ್ಧ 'ಪಡಿತರ ಚೀಟಿಗಳನ್ನು ಅನಧಿಕೃತವಾಗಿ ಹೊಂದುವುದನ್ನು ತಡೆಗಟ್ಟುವ ಕರ್ನಾಟಕ ಆದೇಶ–1977ರಂತೆ ಕ್ರಮವಹಿಸಲಾಗುವುದು. ಅಂದರೆ ಕಾರ್ಡ್‌ದಾರರಿಗೆ ಯಾವುದೇ ಮುನ್ಸೂಚನೆ ಅಥವಾ ಮಾಹಿತಿ ನೀಡದೆ ಪಡಿತರ ಚೀಟಿಯನ್ನು ರದ್ದುಪಡಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಮೂವರ ವಿರುದ್ಧ ಎಫ್‌ಐಆರ್

ಮೈಸೂರಿನ ಯರಗನಹಳ್ಳಿ ವಾರ್ಡ್(ಸಂಖ್ಯೆ–36)ನಲ್ಲಿ ಸಾರ್ವಜನಿಕರ ಮನೆ ಮನೆಗೆ ತೆರಳಿ ಅನ್ನಭಾಗ್ಯ ಅಕ್ಕಿ ಖರೀದಿಸುತ್ತಿದ್ದವರನ್ನು ಇಲ್ಲಿನ ನಿವಾಸಿಗಳು ಹಿಡಿದು ತರಾಟೆ ತೆಗೆದುಕೊಂಡಿದ್ದ ವಿಡಿಯೋ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿ, ಮೂವರ ವಿರುದ್ಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಆಹಾರ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪಡಿತರ ಕೇಂದ್ರಗಳಲ್ಲಿ ಬಡವರಿಗೆ ನೀಡುತ್ತಿರುವ ಅಕ್ಕಿ ಮತ್ತು ರಾಗಿಯನ್ನು ಕಡಿಮೆ ಬೆಲೆಗೆ ಖರೀದಿಸಿ, ಪಾಲಿಶ್ ನಂತರ ಮತ್ತೆ ಮಾರುಕಟ್ಟೆಗೆ ಬಿಟ್ಟು ಸಾರ್ವಜನಿಕರನ್ನು ವಂಚಿಸುವ ಜಾಲ ಮೈಸೂರಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಪ್ರಭಾವಿಗಳು ಈ ದಂಧೆ ನಡೆಸುತ್ತಿದ್ದಾರೆ ಬಡ ವ್ಯಾಪಾರಿಗಳು ಅದರಲ್ಲೂ ಅಪ್ರಾಪ್ತರ ಮೂಲಕ ಪಡಿತರದಾರರಿಂದ ಅಕ್ಕಿ ಮತ್ತು ರಾಗಿ ಸಂಗ್ರಹಿಸಿ, ಅದನ್ನು ದಾಸ್ತಾನು ಮಾಡುತ್ತಾರೆ. ನಂತರ ಪಾಲಿಶ್ ಮಾಡಿಸಿ, ವಿವಿಧ ಕಂಪನಿಗಳ ಚೀಲದಲ್ಲಿ ತುಂಬಿ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಾರೆ. ಅನುಮಾನ ಬಾರದಂತೆ ಕಂಪನಿ ಅಕ್ಕಿಯೊಂದಿಗೆ ಮಿಶ್ರಣ ಮಾಡಿ, ಸಾರ್ವಜನಿಕರನ್ನು ವಂಚಿಸುತ್ತಿದ್ದಾರೆ ಎಂದು ಜನ ಆರೋಪಿಸಿದ್ದರು.

ಕನ್ನಡ ಉಳಿಸಿ, ಬೆಳೆಸುವ ಹೊಣೆ ವಿದ್ಯಾರ್ಥಿಗಳು, ಯುವಕರದ್ದು

ಸಾಹಿತಿ ಬನ್ನೂರು ರಾಜು ಕಿವಿಮಾತು



ಮೈಸೂರು, ನ.16(ಎಸ್‌ಬಿಡಿ)– ನಮ್ಮ ಕರುಳ ಭಾಷೆ ಕನ್ನಡ, ಪ್ರತಿಯೊಬ್ಬರ ಕೊರಳ ಭಾಷೆಯೂ ಆಗಬೇಕು ಎಂದು ಸಾಹಿತಿ ಬನ್ನೂರು ಕೆ.ರಾಜು ಆಶಯ ವ್ಯಕ್ತಪಡಿಸಿದರು.

ಕನ್ನಡ ರಾಜ್ಯೋತ್ಸವ ಮತ್ತು ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ಸಹಯೋಗದಲ್ಲಿ ಮೈಸೂರಿನ ವಿದ್ಯಾರಣ್ಯಪುರಂ ವಾಣಿ ವಿದ್ಯಾಮಂದಿರದಲ್ಲಿ ಗುರುವಾರ ಆಯೋಜಿಸಿದ್ದ 'ನುಡಿ ಸಂಭ್ರಮ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊರಳ ಭಾಷೆಯಾಗಬೇಕು ಎನ್ನುವ ಮೂಲಕ ಎಲ್ಲೆಡೆ ಕನ್ನಡದ ಬಳಕೆಯನ್ನು ಪ್ರತಿಪಾದಿಸಿದರು.

ಕನ್ನಡ, ವಿಶ್ವದ ಪ್ರಮುಖ ಪ್ರಾಚೀನ ಭಾಷೆಗಳಲ್ಲೊಂದು. ನಮ್ಮ ಭಾಷೆ ಸುಮಾರು ಮೂರು ಸಾವಿರ ವರ್ಷಗಳ ಸುದೀರ್ಘ ಚರಿತ್ರೆ ಹೊಂದಿದೆ. ಕರುಳ ಭಾಷೆಯಾಗಿರುವ ಸುಂದರ ಸುಲಲಿತ ಕನ್ನಡ, ಪ್ರತಿಯೊಬ್ಬರ ಕೊರಳ ಭಾಷೆಯಾಗಬೇಕು. ಜೀವನಕ್ಕಾಗಿ ನಾವು ಎಷ್ಟೇ ಭಾಷೆಗಳನ್ನು ಕಲಿತರೂ ನಮ್ಮ ನೆಲದೊಡಲಿನ ನುಡಿಯೇ ಪ್ರತಿಯೊಬ್ಬರಿಗೂ ಸರ್ವಸ್ವವಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಮುದ್ದಾದ ಅಕ್ಷರಗಳಿಂದ ಲಿಪಿಗಳರಾಣಿ ಎನಿಸಿಕೊಂಡಿರುವ ಕನ್ನಡ, ಕಲಿಯುವವರಿಗೆ ಸುಲಿದ ಬಾಳೆಹಣ್ಣಿನಂತೆ ಅತ್ಯಂತ ಸುಲಭ. ಹೊರರಾಜ್ಯದವರೂ ಬಹುಬೇಗ ಕನ್ನಡವನ್ನು ಕಲಿಯಬಹುದಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ದಾಖಲಾರ್ಹ ಪ್ರತಿಷ್ಠಿತ ಎಂಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂದಿವೆ. ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ಜಾನಪದ, ವಿಜ್ಞಾನ, ಧಾರ್ಮಿಕ, ಕೃಷಿ, ಕ್ರೀಡೆ, ರಾಜಕೀಯ, ವೈದ್ಯಕೀಯ, ತಂತ್ರಜ್ಞಾನ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ನೂರಾರು, ಸಾವಿರಾರು ಸಾಧಕರನ್ನು ನೀಡಿರುವ ಕನ್ನಡ ಅತ್ಯಂತ ಶ್ರೀಮಂತ ಭಾಷೆಯಾಗಿದೆ ಎಂದು ಬಣ್ಣಿಸಿದರು.

ಅನೇಕ ಮಹನೀಯರು, ಪ್ರತಿಭಾ ಸಂಪನ್ನರು ಈಗಾಗಲೇ ಕನ್ನಡ ಭಾಷೆಯ ಶಕ್ತಿಯನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಕನ್ನಡ ಎಂದೂ ನಶಿಸದ ಜೀವಂತ ಭಾಷೆ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಸುವ ಹೊಣೆ ವಿದ್ಯಾರ್ಥಿಗಳು ಮತ್ತು ಯುವಜನರ ಮೇಲಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಕನ್ನಡಿಗರೂ ಕ್ರಿಯಾಶೀಲರಾಗಬೇಕು. ಎಲ್ಲೆಡೆ ಕನ್ನಡ ಬಳಸುವ ಮೂಲಕ ನಮ್ಮ ಭಾಷೆಯ ಮಹತ್ವವನ್ನು ಸಾರಬೇಕು ಎಂದರು.

ಇದಕ್ಕೂ ಮೊದಲು ಕಾರ್ಯಕ್ರಮದ ಉದ್ಘಾಟಿಸಿದ ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾರಾಣಿ ಮಿರ್ಲೆ ಮಾತನಾಡಿ, ಪ್ರತಿಯೊಬ್ಬರೂ ವಿದ್ಯಾರ್ಥಿ ದಿಸೆಯಲ್ಲೇ ಮಾತೃ ಭಾಷಾಭಿಮಾನ ಬೆಳೆಸಿ ಕೊಳ್ಳಬೇಕೆಂದು ಮನವಿ ಮಾಡಿದರು. ಕಾವೇರಿ ಬಳಗದ ಅಧ್ಯಕ್ಷೆ, ನಿವೃತ್ತ ಶಿಕ್ಷಕಿ ಎನ್.ಕೆ.ಕಾವೇರಿಯಮ್ಮ ಕನ್ನಡ ಗೀತೆಗಳನ್ನು ಹಾಡಿದರು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮುಖ್ಯ ಶಿಕ್ಷಕ ಪರಶುರಾಮೇಗೌಡರು ಬಹುಮಾನ ವಿತರಿಸಿ ಅಭಿನಂದಿಸಿದರು. ವೈದ್ಯೆ ಮತ್ತು ಕವಯತ್ರಿ ಡಾ.ಸ್ನೇಹಶ್ರೀ ಅವರನ್ನು ಸನ್ಮಾನಿಸಲಾಯಿತು. ಶ್ರೀವಾಣಿ ವಿದ್ಯಾ ಮಂದಿರದ ಆಡಳಿತಾಧಿಕಾರಿ ಹೆಚ್.ಕೆ.ರಾಘವೇಂದ್ರರಾವ್, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಶಿಕ್ಷಕರಾದ ಶ್ರೀನಿವಾಸರಾವ್, ಎಂ.ಪ್ರಕಾಶ್, ಪವಿತ್ರಾ ಮತ್ತಿತರರು ಉಪಸ್ಥಿತರಿದ್ದರು.

ಯತೀಂದ್ರ ವೀಡಿಯೋ 'ಕಟ್ ಅಂಡ್ ಪೇಸ್ಟ್' ಅಷ್ಟೇ

ಮಂಡ್ಯ, ನ.16– ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಅವರು ಮಾಜಿ ಶಾಸಕರಾಗಿದ್ದು, ಖಾಲಿ ಮನುಷ್ಯ ಅಲ್ಲ. ಉತ್ತಮ ಹಿನ್ನೆಲೆಯಿಂದ ಬಂದಿರುವ ಅವರು, ಮನಬಂದಂತೆ ಮಾತನಾಡುವ ವ್ಯಕ್ತಿಯಲ್ಲ. ಅವರೊಬ್ಬ ಒಳ್ಳೆಯ ವ್ಯಕ್ತಿ ಎಂದು ಯತೀಂದ್ರ ವಿರುದ್ಧ ಬಿಡುಗಡೆಯಾಗಿರುವ ವೀಡಿಯೋ ಕಟ್ ಅಂಡ್ ಪೇಸ್ಟ್ ಮಾಡಲಾಗಿದೆ ಎನ್ನುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಯತೀಂದ್ರ ಪರ ಬ್ಯಾಟ್ ಬೀಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇರೆಯವರು ಅಧಿಕಾರದಲ್ಲಿದ್ದಾಗ ಅವರ ಕುಟುಂಬದವರು ರಾಜಕೀಯ ಮಾಡಿಕೊಂಡು ಓಡಾಡುತ್ತಿರಲಿಲ್ಲವೇ? ಸಿದ್ದರಾಮಯ್ಯ ಅವರು ವರುಣದಲ್ಲಿ ನಿಂತ ಕಾರಣ ಯತೀಂದ್ರ ಸ್ಪರ್ಧಿಸಲು ಸಾಧ್ಯವಾಗಲಿಲ್ಲ. ಮೈಸೂರು ಜಿಲ್ಲೆಯಲ್ಲಿ, ಪಕ್ಷದಲ್ಲಿ ಯತೀಂದ್ರ ಪ್ರಮುಖ ಲೀಡರ್ ಆಗಿದ್ದು, ಸಮಾಜಕ್ಕಾಗಿ ಮಾಜಿ ಶಾಸಕರೊಬ್ಬರು ಮಾಡುವ ಕೆಲಸವನ್ನು ತಪ್ಪು ಎನ್ನುವುದಕ್ಕೆ ಆಗುವುದಿಲ್ಲ ಎಂದರು.

ರಾಜಕೀಯವಾಗಿ ಭಾಗಿಯಾಗುವುದು, ಸಾರ್ವಜನಿಕ ಸೇವೆಯಲ್ಲಿ ಇರುವುದು ಅಪರಾಧವಲ್ಲ. ವರುಣ ಅಲ್ಲ ಇಡೀ ರಾಜ್ಯದಲ್ಲಿ ಯತೀಂದ್ರ ಕೆಲಸ ಮಾಡಲಿ, ಅದರಲ್ಲಿ ತಪ್ಪೇನಿದೆ. ನಮ್ಮ ಕಾಂಗ್ರೆಸ್ ಮುಖಂಡರು ಕೆಲ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದರೆ ಅದು ತಪ್ಪಲ್ಲ. ನಮ್ಮಲ್ಲೂ ಕೆಲ ಕಡೆ ಪಿಡಿಓ ಸರಿ ಇಲ್ಲ ಬೇರೆ ಹಾಕಿ ಅಂತಾರೆ. ಅದನ್ನು ನಾವು ತಪ್ಪು ಎನ್ನುವುದಕ್ಕೆ ಆಗಲ್ಲ. ತಂದೆಗೆ ಸಲಹೆ ಕೊಡುವುದರಲ್ಲಿ ತಪ್ಪೇನಿಲ್ಲ ಎಂದು ಹೇಳಿದರು.

ವೈಎಸ್‌ಟಿ ಟ್ಯಾಕ್ಸ್ ಅಂತಾ ವಿರೋಧ ಪಕ್ಷದವರು ಚುನಾವಣಾ ರಾಜಕೀಯ ಮಾಡುತ್ತಾ ಇದ್ದಾರೆ. ಹಿಂದೆಲ್ಲಾ ಬೇರೆ ಸರ್ಕಾರಗಳು ಮಾಡಿದ್ದು ಯಾವ ದಂಧೆ. ಪಂಚರತ್ನ ಕಾರ್ಯಕ್ರಮಕ್ಕೆ ಎಲ್ಲಿಂದು ಹಣ ಬಂತು. ಅವರಿಗೆಲ್ಲಾ ದಾನ ಮಾಡುವವರು ಇದ್ದಾರಾ? ನಮಗೆ ಯಾರು ದಾನ ಮಾಡುವವರು ಇಲ್ಲ ಇವರೊಬ್ಬರಿಗೆ ಮಾತ್ರ ದಾನ ಮಾಡೋದು ಎಂದು ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಹೆಚ್ಡಿಕೆ ಮನೆಗೆ ಅಕ್ರಮ ವಿದ್ಯುತ್ ಸಂಪರ್ಕದ ಬಗ್ಗೆ ಮಾತನಾಡಿ, ಫಾಸ್ಟ್ ಇಸ್ ಫಾಸ್ಟ್, ನಾವು ಅವರಂತೆ ವಿಚಾರ ಸಿಕ್ಕಿದರೆ ಎಳೆಯಲ್ಲ. ಅದನ್ನ ಬಿಟ್ಟು ಮುಂದೆ ಹೋಗಬೇಕು. ಕುಮಾರಸ್ವಾಮಿ ಎಲ್ಲರನ್ನು ಟೀಕೆ ಮಾಡುತ್ತಾರೆ. ನಾನು, ಹೆಚ್ಡಿಕೆ ಜೊತೆಯಲ್ಲಿ ಇದ್ದವನು. ಕುಮಾರಸ್ವಾಮಿ ಸಹಾಯ ಮಾಡಿದವರನ್ನೇ ಒಂದು ಹೆಜ್ಜೆ ಮುಂದೆ ಹೋಗಿ ಮರೆಯುತ್ತಾರೆ. ಸಹಾಯ ಮಾಡಿದವರನ್ನು ನೆನೆಯುವಂತದ್ದನ್ನು ನಾನು ಅವರಲ್ಲಿ ನೋಡಿಲ್ಲ. ನಾವು ಒಬ್ಬ ಮನುಷ್ಯನನ್ನು ಗೌರವಿಸಬೇಕು, ಪ್ರೀತಿಸಬೇಕು. ಆದರೆ ಅವರು ಸಹ ನಮ್ಮನ್ನು ಪ್ರೀತಿಸಬೇಕು, ಗೌರವಿಸಬೇಕು ಅಂತ ಕಾನೂನಿಲ್ಲ.ಒಬ್ಬರನ್ನು ಗೌರವದಿಂದ ಕಾಣುವುದು ನಮ್ಮ ಸಂಸ್ಕೃತಿ ಎಂದು ಕುಮಾರಸ್ವಾಮಿ ಅವರನ್ನು ಪರೋಕ್ಷವಾಗಿ ಟೀಕಿಸಿದರು.

ಬಿಜೆಪಿ ಕಷ್ಟ ನೋಡಿ ಅಯ್ಯೋ ಪಾಪ ಅನಿಸುತ್ತದೆ. ಬಿಜೆಪಿಗೆ ಯಡಿಯೂರಪ್ಪ ಹಾಗೂ ಅವರ ಮಗ ಅನಿವಾರ್ಯ. ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿ ಸಕ್ಸಸ್ ಆಗಲು ಕಷ್ಟ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆದು ಮಗನಿಗೆ ಅವಕಾಶ ಕೊಡಬೇಕಿತ್ತು, ಕೊಡಲಿಲ್ಲ. 70 ವರ್ಷದವರಿಗೆ ಟಿಕೆಟ್ ಕೊಡಲ್ಲ ಎಂದು ಪಂಚರಾಜ್ಯ ಚುನಾವಣೆಯಲ್ಲಿ 78 ವರ್ಷ ಆಗಿರುವವರಿಗೂ ಕೊಟ್ಟಿದ್ದಾರೆ. ಇವತ್ತು ಯಡಿಯೂರಪ್ಪ ಹಾಗೂ ಅವರ ಕುಟುಂಬ ಬಿಜೆಪಿಗೆ ಅನಿವಾರ್ಯವಾಗಿದೆ ಎಂದು ಲೇವಡಿ ಮಾಡಿದರು.

ಬಿಜೆಪಿಯಲ್ಲಿ ಮನಸ್ಸು ಒಡೆದು ಹೋಗಿದೆ.



> ಇಂತವರು ಲಿಸ್ಟ್ ಆಗಬೇಕು ಎನ್ನುವ ನೇಚರ್ ಯತೀಂದ್ರ ಅವರದ್ದಲ್ಲ. ವಿಡಿಯೋದಲ್ಲಿ ಯಾವ ವಿಚಾರ ಹೇಳಿದರೋ ಏನೋ ಗೊತ್ತಿಲ್ಲ. ಯಾರು ಆ ವಿಡಿಯೋ ಕಟ್ ಅಂಡ್ ಪೇಸ್ಟ್ ಮಾಡಿದ್ದಾರೋ ಗೊತ್ತಿಲ್ಲ. ಸೋಷಿಯಲ್ ಮೀಡಿಯಾದಲ್ಲಿ ಕೆಲವರು ಕಟ್ ಅಂಡ್ ಪೇಸ್ಟ್ ಮಾಡುತ್ತಾರೆ. ಮಾತಾಡಿದ ರೀತಿ ಬೇರೆ ಇರುತ್ತೆ. ತೋರಿಸುವುದು ಬೇರೆ ಇರುತ್ತೆ. ಯತೀಂದ್ರ ಒಬ್ಬ ಒಳ್ಳೆಯ ವ್ಯಕ್ತಿ. ತಂದೆ ಬಳಿ ಯತೀಂದ್ರ ಆ ರೀತಿ ಮಾತನಾಡಿದ್ದು ಎಲ್ಲಿಯೂ ನೋಡಿಲ್ಲ.
> - ಎನ್. ಚಲುವರಾಯಸ್ವಾಮಿ, ಸಚಿವರು.

ಸಂಪೂರ್ಣವಾಗಿ ಅವರು ಡಿಸ್ಟರ್ಬ್ ಆಗಿದ್ದಾರೆ. ಕಳೆದ 6 ತಿಂಗಳಿಂದ ಅವರಿಗೆ ವಿರೋಧ ಪಕ್ಷದ ನಾಯಕರು ಸಿಕ್ಕಿಲ್ಲ. ರಾಜ್ಯಾಧ್ಯಕ್ಷರನ್ನು ಹುಡುಕಿದರೂ ಸಿಗಲಿಲ್ಲ. ಇದೀಗ ಯಡಿಯೂರಪ್ಪ ಅವರ ಮಗನ ಅನಿವಾರ್ಯದ ಪರಿಸ್ಥಿತಿ ರಾಷ್ಟ್ರ, ರಾಜ್ಯ ನಾಯಕರಿಗೆ ಇದೆ. ಕುಮಾರಸ್ವಾಮಿ ಪ್ರೀತಿಯಿಂದ ಬಿಜೆಪಿಗೆ ಹೋಗಿಲ್ಲ ಅನಿವಾರ್ಯದಿಂದ ಹೋಗಿದ್ದಾರೆ. ಅದೇ ರೀತಿ ಬಿಜೆಪಿ ಹೈಕಮಾಂಡ್ ಸಹ ಯಡಿಯೂರಪ್ಪ ಅವರ ಪುತ್ರನನ್ನು ಅನಿವಾರ್ಯವಾಗಿ ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದೆ ಎಂದು ಟೀಕಿಸಿದರು.

ಜೆಡಿಎಸ್–ಬಿಜೆಪಿ ಶಾಸಕರು ಕಾಂಗ್ರೆಸ್‌ಗೆ ಸೇರ್ಪಡೆ ವಿಚಾರದ ಬಗ್ಗೆ ಮಾತನಾಡಿ, ಈಗಾಗಲೇ ಮಂಜುನಾಥ್, ಗೌರಿಶಂಕರ್ ಕಾಂಗ್ರೆಸ್ ಸೇರಿದ್ದಾರೆ. ಅವರಿಗೆ ನಮ್ಮ ಪಕ್ಷಕ್ಕೆ ಸ್ವಾಗತ. ಅನೇಕರು ಕಾಂಗ್ರೆಸ್‌ಗೆ ಬರಲು ತಯಾರಿದ್ದು, ಯಾರು ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿರುತ್ತಾರೋ ಅವರಿಗೆಲ್ಲಾ ಪಕ್ಷಕ್ಕೆ ಸ್ವಾಗತ ಎಂದು ತಿಳಿಸಿದರು.

ಕೆ.ಆರ್.ಪೇಟೆ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಜೀತ ಪದ್ಧತಿ: ಒರಿಸ್ಸಾ ದಂಪತಿ ಟ್ವೀಟ್

ಅಧಿಕಾರಿಗಳಿಂದ ದಂಪತಿ ರಕ್ಷಣೆ, ಅವರ ಸ್ವಗ್ರಾಮಕ್ಕೆ ಕಳಿಸುವ ವ್ಯವಸ್ಥೆ



ಕೆ.ಆರ್.ಪೇಟೆ, ನ.16– ಇಟ್ಟಿಗೆ ಫ್ಯಾಕ್ಟರಿ ಮಾಲೀಕರೊಬ್ಬರು ನಮಗೆ ಸಂಬಳ ಕೊಡದೇ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ನಮ್ಮ ಮೇಲೆ ದೌರ್ಜನ್ಯ ನಡೆಸಿ, ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಒರಿಸ್ಸಾ ಮೂಲದ ದಂಪತಿ ತಾಲೂಕಿನ ಅಂಚೆಮುದ್ದನಹಳ್ಳಿ ಗ್ರಾಮದಿಂದ ಟ್ವೀಟ್ ಮಾಡಿದ್ದಾರೆ.

ಒರಿಸ್ಸಾದ ಬಾಲಂಗೀರ್ ಗ್ರಾಮದ ನಿವಾಸಿಗಳಾದ ನರೇಂದ್ರ ಮಹಾಕೂರ್, ಆತನ ಪತ್ನಿ ನಂದಿನಿ ಮಹಾಕೂರ್ ಕಳೆದ 5 ತಿಂಗಳ ಹಿಂದೆ ಅಂಚೆಮುದ್ದನಹಳ್ಳಿ ಗ್ರಾಮದ ಯೋಗೇಂದ್ರ ಅವರಿಗೆ ಸೇರಿದ ಇಟ್ಟಿಗೆ ಫ್ಯಾಕ್ಟರಿಗೆ ಕೆಲಸಕ್ಕೆ ಸೇರಿದ್ದರು. ತಮ್ಮ 3 ವರ್ಷದ ಹೆಣ್ಣು ಮಗುವಿನೊಂದಿಗೆ ಇಟ್ಟಿಗೆ ಫ್ಯಾಕ್ಟರಿಯಲ್ಲೇ ವಾಸವಿದ್ದರು. ಆದರೆ ಇವರಿಬ್ಬರು ಇಟ್ಟಿಗೆ ಫ್ಯಾಕ್ಟರಿ ಮಾಲೀಕ ಯೋಗೇಂದ್ರ ನಮಗೆ ಸಂಬಳ ಕೊಡದೇ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದಾನೆ. ಅಲ್ಲದೇ ನಮ್ಮ ಮೇಲೆ ದೌರ್ಜನ್ಯ ನಡೆಸಿ ಹಲ್ಲೆ ನಡೆಸಿದ್ದಾನೆ ಎಂದು ಆರೋಪಿಸಿ, ನಮ್ಮನ್ನು ಇಲ್ಲಿಂದ ಬಿಡಿಸುವಂತೆ ಕೈ ಮುಗಿದು ಬೇಡಿಕೊಳ್ಳುತ್ತಿರುವ ವೀಡಿಯೋ ಮಾಡಿ ಅದನ್ನು ಟ್ವೀಟ್ ಮಾಡಿದ್ದರು.

ಈ ಟ್ವೀಟ್ ನೋಡಿದ್ದ ಲೆಸ್ಲಿ ಮಾರ್ಟಿನ್ ಎಂಬುವರು ಈ ದಂಪತಿಯನ್ನು ರಕ್ಷಿಸುವಂತೆ ರಾಜ್ಯ ಸರ್ಕಾರಕ್ಕೆ ಟ್ಯಾಗ್ ಮಾಡಿ ರೀ ಟ್ವೀಟ್ ಮಾಡಿದ್ದರು. ಅಲ್ಲದೇ ವಿಡಿಯೋ ವೈರಲ್ ಆದ ಹಿನ್ನೆಲೆಯಲ್ಲಿ ಪಾಂಡವಪುರ ಎಸಿ ನಂದೀಶ್, ತಹಸೀಲ್ದಾರ್ ನಿಸರ್ಗ ಪ್ರಿಯ, ಕೆ.ಆರ್.ಪೇಟೆ ಗ್ರಾಮಾಂತರ ಠಾಣೆ ಸಿಪಿಐ ಜಗದೀಶ್ ಹಾಗೂ ಕಾರ್ಮಿಕ ಇಲಾಖೆ ಅಧಿಕಾರಿಗಳ ತಂಡ ಯೋಗೇಶ್ ಅವರ ಇಟ್ಟಿಗೆ ಫ್ಯಾಕ್ಟರಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿತು. ಈ ವೇಳೆ ನರೇಂದ್ರ ಹಾಗೂ ನಂದಿನಿ ಮಹಾಕುರ್ ಅವರು ನಾವು ಇಟ್ಟಿಗೆ ಫ್ಯಾಕ್ಟರಿ ಮಾಲೀಕರಿಂದ ಸಂಬಳ ಪಡೆಯುತ್ತಿರುವ ಬಗ್ಗೆ ಮಾಹಿತಿ ನೀಡಿದರು. ಅಲ್ಲದೇ ಇದೇ ವೇಳೆ ಅಲ್ಲಿಯೇ ಕೆಲಸ ಮಾಡುತ್ತಿದ್ದ ಇತರ ಕೆಲಸಗಾರರನ್ನು ವಿಚಾರಿಸಿದ್ದು, ಅವರೆಲ್ಲರೂ ನಮಗೆ ಸರಿಯಾದ ಸಮಯಕ್ಕೆ ಮಾಲೀಕರು ಸಂಬಳ ನೀಡುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭ ಫ್ಯಾಕ್ಟರಿ ಮಾಲೀಕ ಯೋಗೇಂದ್ರ ಅವರನ್ನು ಅಧಿಕಾರಿಗಳ ತಂಡ ವಿಚಾರಣೆ ನಡೆಸಿದ್ದು, ನರೇಂದ್ರ ಹಾಗೂ ನಂದಿನಿ ದಂಪತಿಯನ್ನು ಜೀತದಾಳುವಂತೆ ನಡೆಸಿಕೊಂಡಿಲ್ಲ. ಕಾಲಕಾಲಕ್ಕೆ ಸರಿಯಾಗಿ ಸಂಬಳ ನೀಡಿದ್ದೇನೆ ಎಂದು ತಿಳಿಸಿದರು.

ತಹಸೀಲ್ದಾರ್ ನಿಸರ್ಗಪ್ರಿಯ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಡಾ.ದಿವಾಕರ್ ಮಾತನಾಡಿ, ಒರಿಸ್ಸಾ ಮೂಲದ ನರೇಂದ್ರ ಹಾಗೂ ನಂದಿನಿ ಮಹಾಕುರ್ ಅವರಿಗೆ ಸಂಬಳ ಕೊಡದೆ ಕೆಲಸ ಮಾಡಿಸಿಲ್ಲ ಎಂಬುದು ಸ್ಥಳ ಪರಿಶೀಲನೆ ವೇಳೆ ಕಂಡು ಬಂದಿದೆ. ಇಲ್ಲಿ ಜೀತ ಪ್ರಕರಣ ನಡೆದಿಲ್ಲ. ಮಾಲೀಕ ಕಾಲ ಕಾಲಕ್ಕೆ ಸಂಬಳ ನೀಡಿಯೇ ಕೆಲಸ ಮಾಡಿಸಿದ್ದಾರೆ ಎಂಬುದು ತಿಳಿದು ಬಂದಿದೆ ಎಂದರು. ಅವರ ಮೇಲೆ ಹಲ್ಲೆ, ದೌರ್ಜನ್ಯ ನಡೆಸಿಲ್ಲ. ಕೂಲಿಕಾರ ದಂಪತಿಗಳನ್ನು ಇಟ್ಟಿಗೆ ಫ್ಯಾಕ್ಟರಿಯಿಂದ ಬಿಡುಗಡೆಗೊಳಿಸಿ ಅವರನ್ನು ಅಲ್ಲಿಂದ ಕರೆ ತಂದಿದ್ದೇವೆ. ಅವರು ಒರಿಸ್ಸಾಗೆ ತೆರಳುವುದಾಗಿ ತಿಳಿಸಿದ್ದು, ಅವರ ಆಶಯದಂತೆ ಅವರನ್ನು ಅಲ್ಲಿಗೆ ಕಳಿಸಿ ಕೊಡಲಾಗುವುದು ಎಂದರು.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ, ನ.16– ಗುಡ್ಡೇನಹಳ್ಳಿ ಹಾಗೂ ಬೋಗಾದಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ನ.17 ರಂದು ಬೆಳಗ್ಗೆ 10 ರಿಂದ 6 ರವರೆಗೆ ಚೀಣ್ಯ, ಹೊಣಕೆರೆ, ಬ್ರಹ್ಮದೇವರಹಳ್ಳಿ, ಮಣ್ಣಹಳ್ಳಿ, ಕಾಂತಾಪುರ ಹಾಗೂ ಬೋಗಾದಿ ಗ್ರಾಪಂಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಗರಾಜು ನಿಧನ



ಶ್ರೀರಂಗಪಟ್ಟಣ, ನ.16– ಪಟ್ಟಣದ ಚಿಕ್ಕ ಜೋನಿಗರ ಬೀದಿ ನಿವಾಸಿ ನಾದಸ್ವರ ವಿದ್ವಾನ್ ನಾಗರಾಜು(72) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ನಾಗಮ್ಮ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಎಸ್.ಛತ್ರದಲ್ಲಿ ಅದ್ದೂರಿ ಹುಲಿ ವಾಹನೋತ್ಸವ

ಪಾಂಡವಪುರ, ನ.16– ತಾಲೂಕಿನ ಟಿ.ಎಸ್.ಛತ್ರ ಗ್ರಾಮದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಹುಲಿ ವಾಹನೋತ್ಸವ ಗುರುವಾರ ಮಧ್ಯಾಹ್ನ ಅದ್ದೂರಿಯಾಗಿ ನಡೆಯಿತು.

ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಹುಲಿ ವಾಹನೋತ್ಸವವನ್ನು ವಿವಿಧ ಹೂಗಳಿಂದ ಗ್ರಾಮಸ್ಥರು ಅಲಂಕರಿಸಿ ಪೂಜೆ ಸಲ್ಲಿಸಿದರು. ನಂತರ ಗ್ರಾಮದ ಯುವಕರು ಹುಲಿವಾಹನ ಮೆರವಣಿಗೆ ನಡೆಸಿದರು. ಈ ವೇಳೆ ಹುಲಿ ವಾಹನಕ್ಕೆ ಭಕ್ತರು, ಸಾರ್ವಜನಿಕರು ಕಡಲೆಪುರಿ, ಹಣ್ಣು–ಜವನ ಎಸೆದು ಉಘೇ ಮಾದಪ್ಪ. ಉಘೇ ಮಾದಪ್ಪ ಎಂಬ ಘೋಷಣೆ ಮೊಳಗಿಸಿ ಭಕ್ತಿಭಾವ ಪ್ರದರ್ಶಿಸಿದರು.



ನಂತರ ಟಿ.ಎಸ್.ಛತ್ರ ಗ್ರಾಮದಿಂದ ಮಹದೇಶ್ವರಪುರ ಗ್ರಾಮದ ಮಹದೇಶ್ವರ ದೇವಸ್ಥಾನದವರೆಗೂ ನಡೆದ ಮೆರವಣಿಗೆಯಲ್ಲಿ ಗಾರುಡಿ ಗೊಂಬೆ, ಕೀಲು ಕುದುರೆ, ಆಂಜನೇಯ ವೇಷಧಾರಿ, ಮರಗಾಲು ಮನುಷ್ಯ, ಪೂಜಾ ಕುಣಿತ, ವೀರಗಾಸೆ, ತಮಟೆ, ಮಹಿಳಾ ನೃತ್ಯ ತಂಡ, ಸೋಬಾನೆ ರಾಜೇಶ್ ಅವರ ಕಲಾತಂಡಗಳು, ಡಿಜೆ ನೃತ್ಯ ಎಲ್ಲರ ಗಮನ ಸೆಳೆಯಿತು. ಬಳಿಕ ಮಹದೇಶ್ವರ ದೇವಸ್ಥಾನದ ಬಳಿಯೂ ಅದ್ದೂರಿ ಮೆರವಣಿಗೆ ನಡೆಯಿತು.

ಈ ವೇಳೆ ಮುಖಂಡರಾದ ಡೇರಿ ನಿರ್ದೇಶಕ ವಿಜೇಂದ್ರ, ಗ್ರಾಪಂ ಸದಸ್ಯ ಮಂಜುನಾಥ್, ಮುಖಂಡರಾದ ಚಲುವೇಗೌಡ, ಮಾಯಣ್ಣ, ಶಿವಣ್ಣಗೌಡ, ನಂಜುಂಡ, ಬಸವೇಗೌಡ, ನಾಗಪ್ಪ, ಚಂದ್ರಪ್ಪ, ಕಾರ್ತಿಕ್, ಮಹೇಶ್, ವಿಜೇಂದ್ರ, ಬಸವರಾಜು, ಈರಪ್ಪ, ಬಸಣ್ಣ, ಸ್ವಾಮಣ್ಣ, ಕುಮಾರ, ಹೊನ್ನೇಗೌಡ, ಸಂತೋಷ್, ಸುರೇಶ್, ಲಿಂಗರಾಜು ಸೇರಿದಂತೆ ಹಲವರಿದ್ದರು.

ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ: ಮೂವರ ವಿರುದ್ಧ ಪ್ರಕರಣ ದಾಖಲು

ಶ್ರೀರಂಗಪಟ್ಟಣ, ನ.16– ಗಸ್ತಿನಲ್ಲಿದ್ದ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಕೆಆರ್‌ಎಸ್ ಬೃಂದಾವನ ರಸ್ತೆಯಲ್ಲಿರುವ ರಾಯಲ್ ಪ್ಯಾಲೆಸ್ ಲಾಡ್ಜ್ ಮಾಲೀಕ ಗುಣಶೇಖರ್ ಸೇರಿದಂತೆ ಮೂವರ ವಿರುದ್ಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳವಾರ ರಾತ್ರಿ ಗಸ್ತಿನಲ್ಲಿದ್ದ ಕೆ.ಆರ್.ಸಾಗರ ಪೊಲೀಸ್ ಠಾಣಾ ಸಿಬ್ಬಂದಿ ಸಂತೋಷ್ ಎಂಬುವರನ್ನು ಅವಾಚ್ಯ ಶಬ್ದದಿಂದ ನಿಂದಿಸಿ ಹಲ್ಲೆ ಮಾಡಿದ ಆರೋಪದ ಮೇಲೆ ಗುಣಶೇಖರ್, ಪುತ್ರರಾದ ಲಿಖಿತ್ ಹಾಗೂ ಲೋಹಿತ್ ವಿರುದ್ಧ ಪ್ರಕರಣ ದಾಖಲಾಗಿದೆ. ಇವರು ತಮ್ಮ ರಾಯಲ್ ಪ್ಯಾಲೆಸ್ ಲಾಡ್ಜ್ ಮುಂಭಾಗ ಪಟಾಕಿ ಹೊಡೆಯುತ್ತಿದ್ದರು. ಈ ವೇಳೆ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ ಎಂದು ಗಸ್ತಿನಲ್ಲಿದ್ದ ಪೊಲೀಸ್ ಸಿಬ್ಬಂದಿ ಹಾಗೂ ಹೋಂ ಗಾರ್ಡ್ ಪಟಾಕಿ ಹೊಡೆಯದಂತೆ ಸೂಚಿಸಿದ್ದಾರೆ. ಇದರಿಂದ ಆಕ್ರೋಶಗೊಂಡ ಲಾಡ್ಜ್ ಮಾಲೀಕ ಗುಣಶೇಖರ ಹಾಗೂ ಇಬ್ಬರು ಮಕ್ಕಳಾದ ರೋಹಿತ್, ಲಿಖಿತ್ ಪೊಲೀಸ್ ಸಿಬ್ಬಂದಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಿಪಿಐ ಪುನೀತ್ ಸ್ಥಳ ಪರಿಶೀಲಿಸಿ ನಾಪತ್ತೆಯಾಗಿರುವ ಆರೋಪಿಗಳ ಬಂಧನಕ್ಕೆ ಮುಂದಿನ ತನಿಖೆ ಕೈಗೊಂಡಿದ್ದಾರೆ

ನ.19, ಕನ್ನಡ ಹಬ್ಬ, ನಾಲ್ಕನೇ ಕನ್ನಡ ಅಕ್ಷರ ಜಾತ್ರೆ

ಮಂಡ್ಯ, ನ.16– ಡಾ.ಜೀಶಂಪ ಸಾಹಿತ್ಯ ವೇದಿಕೆ ಮಂಡ್ಯ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ, ಮಂಡ್ಯ ಸಂಯುಕ್ತಾಶ್ರಯದಲ್ಲಿ ನ.19 ರಂದು ಭಾನುವಾರ ಬೆಳಗ್ಗೆ 10.30ಕ್ಕೆ ನಗರದ ಗಾಂಧಿ ಭವನದಲ್ಲಿ ಕರ್ನಾಟಕ ರಾಜ್ಯವೆಂದು ನಾಮಕರಣಗೊಂಡ ಸುವರ್ಣ ಮಹೋತ್ಸವ ಅಂಗವಾಗಿ ಕನ್ನಡ ಚಲನಚಿತ್ರ ರಂಗದ ಮೇರುನಟರಾದ ಡಾ.ರಾಜಕುಮಾರ್, ಡಾ.ವಿಷ್ಣುವರ್ಧನ್ ಹಾಗೂ ಡಾ.ಅಂಬರೀಶ್ ಸ್ಮರಣಾರ್ಥ ಕನ್ನಡ ಹಬ್ಬ, ನಾಲ್ಕನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜೇಗೌಡ ಅವರು ಕನ್ನಡ ಅಕ್ಷರ ಜಾತ್ರೆ ಉದ್ಘಾಟಿಸುವರು. ಬೆಂಗಳೂರಿನ ಕರುನಾಡ ರಾಜ್ಯ ಕಾರ್ಮಿಕರ ಜನಸೇನಾ ರಾಜ್ಯಾಧ್ಯಕ್ಷ ಹೆಚ್.ಕೆ.ಪ್ರತಾಪ್ ಅಧ್ಯಕ್ಷತೆ ವಹಿಸುವರು. ಮಂಡ್ಯ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ.ಹೆಚ್.ಎಸ್. ಮುದ್ದೇಗೌಡ ಸುವರ್ಣ ಕರ್ನಾಟಕ ಕುರಿತು ಪ್ರಧಾನ ಭಾಷಣ ಮಾಡುವರು. ಕವಿ, ವಿಧಾನಪರಿಷತ್ ಸದಸ್ಯ ಡಿ.ಎಸ್.ವೀರಯ್ಯ ಕನ್ನಡ ರತ್ನ ಪ್ರಶಸ್ತಿ ಪ್ರದಾನ ಮಾಡುವರು.

ಮಂಡ್ಯದ ಕವಯತ್ರಿ, ಶಿಕ್ಷಕಿ, ಡಾ.ಪದ್ಮ ಶ್ರೀನಿವಾಸ್ ಅವರನ್ನು ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಬೆಂಗಳೂರಿನ ಸಮಾಜ ಸೇವಕಿ, ಬಹುಮುಖ ಪ್ರತಿಭೆ ಡಾ.ಹೆಚ್.ಆರ್.ಹೇಮಾರೆಡ್ಡಿ ಅವರು ಸಮ್ಮೇಳನಾಧ್ಯಕ್ಷರಿಗೆ ಗೌರವಿಸುವರು. ಮುಖ್ಯ ಅತಿಥಿಗಳಾಗಿ ಮಂಡ್ಯದ ಪವನ್ ಡೆವಲಪರ್ಸ್ ಎಂ.ಡಿ.ಪವನ್, ಬೆಂಗಳೂರಿನ ಕರುನಾಡ ರಾಜ್ಯ ಕಾರ್ಮಿಕರ ಜನಸೇನೆಯ ಮಹಿಳಾ ರಾಜ್ಯಾಧ್ಯಕ್ಷೆ ಮಂಜುಳಾಗೌಡ, ಕವಿ, ಹಾಗೂ ಸಂಘಟಕ, ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ ಉಪಸ್ಥಿತರಿರುವರು. ಡಾ.ಜೀಶಂಪ ಸಾಹಿತ್ಯ ವೇದಿಕೆ ಕಾರ್ಯಾಧ್ಯಕ್ಷ ಲೋಕೇಶ್ ಚಂದಗಾಲು ಪ್ರಾಸ್ತಾವಿಕವಾಗಿ ಮಾತನಾಡುವರು.

ದೇಶದ ಆಂತರಿಕ ಸಂಘರ್ಷ ನಿವಾರಿಸಿಕೊಳ್ಳದಿದ್ದರೆ 2024ರಲ್ಲಿ ಅದು ನಮ್ಮನ್ನು ನುಂಗಲಿದೆ

ಮೋದಿಯವರು ಪ್ರಧಾನಿಯಾದ ಬಳಿಕ ದೇಶ ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿದೆ

ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ

ಮೈಸೂರು,ನ.16(ಪಿಎಂ)– ದೇಶದಲ್ಲಿನ ಆಂತರಿಕ ಸಂಘರ್ಷ ನಿವಾರಿಸಿಕೊಳ್ಳಲಿಲ್ಲವೆಂದರೆ ಇದು 2024ರಲ್ಲಿ ನಮ್ಮನ್ನು ನುಂಗಿ ಭಾರತವನ್ನು ಧ್ವಂಸಗೊಳಿಸುವ ಪ್ರಯತ್ನ ಮಾಡಲಿದೆ ಎಂದು ತಿಳಿಸಿದ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ, ನರೇಂದ್ರ ಮೋದಿ ಪ್ರಧಾನಿ ಆದ ಮೇಲೆ ಅವರು ದೇಶ ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಹಾಕಿದ್ದಾರೆ ಎಂದು ಹೇಳಿದರು.



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಮೋ ಬ್ರಿಗೇಡ್ ಮೈಸೂರು ವತಿಯಿಂದ 'ಇನ್ನೂ ಮಲಗಿದರೆ, ಏಳುವಾಗ ಭಾರತವಿರುವುದಿಲ್ಲ' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಎರಡು ದಿನಗಳ ಉಪನ್ಯಾಸ ಕಾರ್ಯಕ್ರಮದಲ್ಲಿ (ನ.16 ಮತ್ತು 17) ಗುರುವಾರ ಅವರು ಮಾತನಾಡಿದರು. ಮೋದಿ ಪ್ರಧಾನಿಯಾದ ಬಳಿಕ ಇವ್ಯಾಂಜಲಿಸ್ಟ್‌ಗಳಿಗೆ (ಮತಪ್ರಚಾರಕರು) ನಿಧಿಯ ಕೊರತೆ ಎದುರಾಗಿದೆ. ಮಾವೋವಾದಿಗಳನ್ನು ಮಟ್ಟ ಹಾಕಲಾಗಿದೆ. ಮೋದಿ ಪ್ರಧಾನಿ ಆಗುವುದಕ್ಕೂ ಮುನ್ನ ಭಾರತೀಯ ಸಿಆರ್ ಪಿಎಫ್ ಯೋಧರನ್ನು ಮಾವೋವಾದಿಗಳು ಸಿಕ್ಕ ಸಿಕ್ಕಲ್ಲಿ ಹತ್ಯೆ ಮಾಡುತ್ತಿದ್ದರು. ಆದರೆ ಇಂದು ಹುಡುಕಿದರೂ ಸಿಗದೇ ಇರುವ ರೀತಿಯಲ್ಲಿ ಅವರನ್ನು ಮಟ್ಟ ಹಾಕಲಾಗಿದೆ ಎಂದರು.

ಮೋದಿಯವರ ಕ್ರಮಗಳಿಂದಾಗಿ ಪಾಕಿಸ್ತಾನವು ಭಾರತದಲ್ಲಿ ಸಂಚು ನಡೆಸುವ ಕೃತ್ಯಕ್ಕೆ ತಡೆಬಿದ್ದಿದೆ. ನಕಲಿ ನೋಟುಗಳ ತಡೆಯಾದ ಮೇಲೆ ಐಎಸ್‌ಐಗೆ ಸಿಗುತ್ತಿದ್ದ ಹಣವೂ ನಿಂತು ಹೋಗಿದೆ. ದೆಹಲಿಯಲ್ಲಿ ನಡೆದ ರೈತರ ಕದನ ಅತ್ಯಂತ ಕಡಿಮೆ ಖರ್ಚಿನ ಯೋಜನೆ ಎಂದು ಟೀಕಿಸಿದ ಅವರು, 2 ವರ್ಷ ಕಾಲ ರಸ್ತೆಯಲ್ಲಿ ಕುಳಿತುಕೊಳ್ಳಲು ಇವರಿಗೆ ವ್ಯವಸ್ಥೆ ಮಾಡಿಕೊಟ್ಟವರು ಯಾರು? ಎಲ್ಲಿಂದ ಬಂತು ಹಣ? ಅಲ್ಲಿ ಕುಳಿತಿದ್ದವರು ರೈತರೇ? ನಮ್ಮೂರಿನ ರೈತರಿಗೆ ಸಿಟಿಗೆ ಬರಲು ಹಣದ ಕೊರತೆ ಇರುವಾಗ ಎರಡು ವರ್ಷ ರಸ್ತೆಯಲ್ಲಿ ಕೂರಲು ಅವರಿಗೆ ಎಲ್ಲಿಂದ ಬಂತು ಹಣ? ಎಂದು ಪ್ರಶ್ನಿಸಿದರು.

ಸಿಎಂ ವಿರುದ್ಧ ಕಿಡಿ: ವೇದಗಳು ಭಾರತದಲ್ಲೇ ಹುಟ್ಟಿದ್ದು, ಆರ್ಯರು ಹೊರಗಡೆಯಿಂದ ಬಂದವರಲ್ಲ. ಶೇ.100ರಷ್ಟು ಭಾರತೀಯರು ಎಂದು ಇಡೀ ಜಗತ್ತು ಒಪ್ಪಿಕೊಂಡಿದೆ. ಅಲ್ಲದೆ, ಆರ್ಯರು ಭಾರತಕ್ಕೆ ಹೊರಗಿನಿಂದ ಬಂದವರೆಂದು ಇಂಗ್ಲಿಷರು ತಮ್ಮ ಆಡಳಿತ ಅನುಕೂಲಕ್ಕಾಗಿ ಸುಳ್ಳು ಹೇಳಿದ್ದರು ಎಂಬುದು ಗೊತ್ತಾಗಿದೆ. ಹೀಗೆ ವೈಜ್ಞಾನಿಕವಾಗಿ ಸಾಬೀತಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಗೂ ನಾವು ದ್ರಾವಿಡರು ಎನ್ನುವುದನ್ನು ಬಿಟ್ಟಿಲ್ಲ. ಒಟ್ಟಾರೆ ಇವರಿಗೆ ಇರುವ ಸಮಸ್ಯೆಯೆಂದರೆ 'ಭಾರತ ಭಾರತ' ಎಂದು ಹೇಳುವ ನಮ್ಮಂತ–ನಿಮ್ಮಂತ ಹುಚ್ಚರನ್ನು ತಡೆಯದೇ ಹೋದರೆ ಭಾರತವನ್ನು ತಮಗೆ ಬೇಕಾದಂತೆ ವಿಭಾಗಿಸುವುದು ಕಷ್ಟ ಎಂಬುದಾಗಿದೆ ಎಂದು ಟೀಕಿಸಿದರು.

ಚಡಪಡಿಸಿದರು: ನಾವು ಭಾರತ ಭಾರತ ಎಂದು ಹೆಮ್ಮೆ ಪಟ್ಟಾಗಲೆಲ್ಲಾ, ತಾಯಿ ಭಾರತಾಂಬೆಯೇ ತಮಗೆ ಸಮಸ್ಯೆ ಎಂಬುದು ಮತ ಪ್ರಚಾರಕರಿಗೆ ಗೊತ್ತಾಗುತ್ತದೆ. ಅದಕ್ಕಾಗಿಯೇ 'ಇಂಡಿಯಾ' ಪದವನ್ನು 'ಭಾರತ್' ಎಂದಾಗ, ಅವರು ಭಾರೀ ಚಡಪಡಿಸಿದರು. ಏಕೆಂದರೆ 'ಭಾರತ್' ಎಂದಾಕ್ಷಣ ಈ ಪರಂಪರೆಯೊಂದಿಗೆ ತಮ್ಮನ್ನು ಜೋಡಿಸಿಕೊಳ್ಳುತ್ತಾರೆ ಎಂಬುದು ಅವರ ಆತಂಕ. ದೇಶದ ಜನತೆ ಒಂದಾಗುವ ಈ ಪ್ರಕ್ರಿಯೆಯು ಅವರನ್ನು ತುಂಬಾ ಬಾಧಿಸುತ್ತದೆ. ಆದರೂ ಅವರು ಬಿಡದೇ ಒಬ್ಬೊಬ್ಬ ನಾಯಕರನ್ನು ಒಂದೊಂದು ಜಾತಿಗೆ ಸೀಮಿತಗೊಳಿಸಿದ್ದಾರೆ ಎಂದು ದೂರಿದರು.

ಪ್ರಾದೇಶಿಕ ನಾಯಕರ ಸೃಷ್ಟಿ: ಇನ್ನು ವಿಶೇಷವಾಗಿ ಪ್ರಾದೇಶಿಕ ನಾಯಕರನ್ನು ಸೃಷ್ಟಿಸಿದ್ದು, ಇದರಿಂದ ಎಲ್ಲಾ ಮಹನೀಯರು ನಮ್ಮವರೇ ಎಂಬ ಪ್ರಜ್ಞೆ ಕಳೆದು ಹೋಗುತ್ತಿದೆ. ಸಾವರ್ಕರ್ ಬಗ್ಗೆ ಮಾತನಾಡಿದರೆ ಬಿಜೆಪಿಯವರು ಎನ್ನುತ್ತಾರೆ. ಈಗ ಸರ್ಧಾರ್ ವಲ್ಲಭಬಾಯಿ ಪಟೇಲರನ್ನು ಕಾಂಗ್ರೆಸ್ಸಿಗರು ಬಿಜೆಪಿಗೆ ಬಿಟ್ಟುಕೊಟ್ಟಿದ್ದಾರೆ. ಲಾಲ್‌ಬಹದ್ದೂರ್ ಶಾಸ್ತ್ರಿಯವರನಂತೂ ಯಾವಾಗಲೂ ನೀವೇ ಇಟ್ಟುಕೊಳ್ಳಿ ಎಂದು ಕೊಟ್ಟಿದ್ದಾರೆ ಎಂದರು.

ರಾಜ್ಯದಲ್ಲಿ ಬಿಜೆಪಿ ಸೋತಾಗ, 'ದ ಸೌತ್ ರಿಜೆಕ್ಟ್ಸ್ ಬಿಜೆಪಿ' ಎಂಬ ಸಾಲಿರುವ ಚಿತ್ರ ಫೇಸ್‌ಬುಕ್‌ನಲ್ಲಿ ಹರಿದಾಡಿತು. ಇಲ್ಲಿ ಬಿಜೆಪಿ ಗೌಣ. ಆದರೆ ಅಲ್ಲಿದ್ದ ನಕ್ಷೆಯಲ್ಲಿ 'ನಾವು ಸೌತ್‌ನವರು ನಾರ್ತ್‌ಗಿಂತ ವಿಭಿನ್ನ, ನಾವು ಆರ್ಯರಲ್ಲ. ನಾವು ದ್ರಾವಿಡರು, ಹೀಗಾಗಿ ಆರ್ಯರ ಪಾರ್ಟಿ ಧಿಕ್ಕರಿಸಬಲ್ಲೆವು' ಎನ್ನುವ ಹಿಡನ್ ಸಂಗತಿ ಪ್ರತಿಬಿಂಬಿಸಿದ್ದು ಅತ್ಯಂತ ಅಪಾಯಕಾರಿ. ಇದು ಶುರುವಾಗಿದ್ದು ತಮಿಳುನಾಡಿನಲ್ಲಿ. ನಿಧಾನವಾಗಿ ಕೇರಳಕ್ಕೆ ಹಬ್ಬಿ, ನಮಗೆ ಗೊತ್ತಿಲ್ಲದಂತೆ ಈ ಪ್ರಾದೇಶಿಕತೆವಾದ ನಮ್ಮನ್ನು ಆವರಿಸಿಕೊಂಡಿದೆ ಎಂದು ಹೇಳಿದರು.

ಮೂರನೇ ಪುಟದಿಂದ

ನಾನು ಕೊಟ್ಟಿರುವ ನಾಲ್ಕೈದನ್ನು ಮಾತ್ರ ಮಾಡಿ...!

ಅದೆಲ್ಲಾ ಬೇಡ, ನಾನು ಯಾವುದು ನಾಲ್ಕೈದು ಕೊಟ್ಟಿದ್ದೇನೋ ಅಷ್ಟೆ ಮಾಡಿ ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ಕಟ್ಟಾಜ್ಞೆ ಮಾಡಿದ್ದಾರೆ. ಡಾ.ಯತೀಂದ್ರ ಮಾತನಾಡಿರುವ 48 ಸೆಕೆಂಡ್‌ಗಳ ಸಂಭಾಷಣೆಯ ವಿಡಿಯೋ ವೈರಲ್ ಆಗುತ್ತಿದ್ದಂತೆ ಜೆಡಿಎಸ್ ಹಾಗೂ ಬಿಜೆಪಿ, ಸರ್ಕಾರದ ವಿರುದ್ಧ ಮುಗಿಬಿದ್ದಿವೆ. ಸರ್ಕಾರದಲ್ಲಿ ನಡೆಯುತ್ತಿರುವ ವರ್ಗಾವಣೆ ದಂಧೆಗೆ ಇದ ಕ್ಕಿಂತ ಬೇರೆ ಸಾಕ್ಷಿ ಬೇಕೇ ಎಂದು ಹರಿಹಾಯ್ದಿವೆ.

ಬೆಂಗಳೂರಿನಲ್ಲಿ ಈ ಬಗ್ಗೆ ಪತ್ರಕರ್ತರು ಪ್ರತಿಕ್ರಿಯೆ ಕೇಳುತ್ತಿದ್ದಂತೆ ಸಿದ್ದರಾಮಯ್ಯ ಕೆಂಡಾಮಂಡಲರಾದರು. ಐದು ಹೆಸರು ಅಂದರೆ ವರ್ಗ ಏನಯ್ಯ ... ಎಂದು ಖಾರವಾಗಿ ಪ್ರಶ್ನಿಸಿದರು. ಯತೀಂದ್ರ ಜೊತೆ ಮಾತನಾಡಿದ ವಿಚಾರ ವರ್ಗಾವಣೆಗೆ ಸಂಬಂಧಿಸಿದ್ದಲ್ಲ ಎಂದು ಸ್ಪಷ್ಟನೆ ನೀಡಿರುವ ಸಿದ್ದರಾಮಯ್ಯ, ಶಾಲಾ ಕಟ್ಟಡವನ್ನು ಸಿಎಸ್‌ಆರ್ ಫಂಡ್ (ಕಾರ್ಪೋರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಫಂಡ್)ನಿಂದ ರಿಪೇರಿ ಮಾಡಿಸುವ ಬಗ್ಗೆ ಮಾತನಾಡಿದ್ದೇವೆ ಎಂದು ತಿಳಿಸಿದ್ದಾರೆ. ಡಾ.ಯತೀಂದ್ರ ವಿಡಿಯೋ ವೈರಲ್ ವರ್ಗಾವಣೆಗೆ ಸಂಬಂಧಿಸಿದ್ದಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇತರರು ಸಿದ್ದರಾಮಯ್ಯ ಹಾಗೂ ಡಾ.ಯತೀಂದ್ರ ಪರ ಬ್ಯಾಟ್ ಬೀಸಿದ್ದಾರೆ. ಆದರೆ ಇದು ಪಕ್ಕಾ ವರ್ಗಾವಣೆ ದಂಧೆಯ ಮಾತುಕತೆಯ ಸಂಭಾಷಣೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಅಶ್ವಥ್ ನಾರಾಯಣ್ ಆರೋಪಿಸಿದ್ದಾರೆ. ಒಟ್ಟಾರೆ ಡಾ.ಯತೀಂದ್ರ ವಿಡಿಯೋ ವೈರಲ್ ಆಡಳಿತ ಹಾಗೂ ಪ್ರತಿಪಕ್ಷಗಳ ವಾಕ್ಸಮರವನ್ನು ಮತ್ತಷ್ಟು ರಂಗೇರಿಸಿದೆ.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆಗ್ರಹ

ಸಿದ್ದರಾಮಯ್ಯ ಅವರೇ, ನಿಮ್ಮ ಮಗ ಎಷ್ಟು ಪರ್ಸೆಂಟೇಜ್‌ಗೆ ಹುದ್ದೆಗಳನ್ನು ಮಾರಿದ್ದಾರೆ. ಅದರಲ್ಲಿ ನಿಮಗೆಷ್ಟು, ನಿಮ್ಮ ಮಗನಿಗೆಷ್ಟು, ನಿಮ್ಮ ಕಚೇರಿಯ ಪರ್ಸೆಂಟೇಜ್ ಪಟಾಲಂಗೆ ಎಷ್ಟು ಎಂದು ಪ್ರಶ್ನಿಸಿದ್ದಾರೆ. ನಾನು ಹೇಳಿದ್ದನ್ನೆಲ್ಲಾ ಸುಳ್ಳು–ಸುಳ್ಳು ಎನ್ನುತ್ತಿದ್ದೀರಿ, ಸತ್ಯ ಎದುರಿಗೆ ಕೂತಿದೆ, ಏನು ಹೇಳುತ್ತೀರಿ. ವಿಡಿಯೊದಲ್ಲಿರುವ ವಿಷಯ ಸುಳ್ಳೋ–ನಿಜವೋ, ನಾಡಿನ ಜನ ತೀರ್ಮಾನ ಮಾಡುತ್ತಾರೆ. ನಿಮ್ಮಿಂದ ಉತ್ತರವಷ್ಟೇ ಅಲ್ಲ, ನಿಮಗೆ ಮಾನ–ಮರ್ಯಾದೆ ಬಹಳ ಜಾಸ್ತಿ, ಎಲ್ಲರಿಗಿಂತ ನೈತಿಕ ಮೌಲ್ಯಗಳು ನಿಮ್ಮಲ್ಲಿ ದುಪ್ಪಟ್ಟು ಹೌದಲ್ಲವೇ. ಅದಕ್ಕೆ ಬೆಲೆ ಕೊಟ್ಟು ರಾಜೀನಾಮೆ ಕೊಡಿ. ನಿಮಗೆ ಉಳಿದಿರುವುದು ಒಂದೇ ಮಾರ್ಗ, ಮುಖ್ಯಮಂತ್ರಿ ಕಚೇರಿ ಖಾಲಿ ಮಾಡುವುದಷ್ಟೆ ಕೂಡಲೇ ಪದವಿಗೆ ರಾಜೀನಾಮೆ ಕೊಡಿ ಎಂದು ಆಗ್ರಹಿಸುತ್ತೇನೆ.

ಸಾರ್ವಜನಿಕ ಸಮಾರಂಭದಲ್ಲೇ ನಿಮ್ಮ ಪುತ್ರ ದೂರವಾಣಿ ಮೂಲಕ ಹುದ್ದೆಗಳ ವರ್ಗಾವಣೆ ಆದೇಶ ಮಾಡುತ್ತಾರೆ ಎಂದರೆ ನಿಮ್ಮ ಆಡಳಿತದಲ್ಲಿ ದಂಧೆ ಹಾದಿ–ಬೀದಿಯಲ್ಲಿ ನಡೆಯುತ್ತಿರುವುದಕ್ಕೆ ಈ ವಿಡಿಯೊ ಸಾಕ್ಷಿ. ಕರ್ನಾಟಕದ ಕಲೆಕ್ಷನ್ ಕಿಂಗ್ ಅಪ್ಪ, ಕರ್ನಾಟಕದ ಕಲೆಕ್ಷನ್ ಪ್ರಿನ್ಸ್ ಮಗ ಸೇರಿ ಮುಖ್ಯಮಂತ್ರಿ ಕಾರ್ಯಾಲಯವನ್ನು ಸುಲಿಗೆ ಅಡ್ಡೆ ಮಾಡಿಕೊಂಡಿದ್ದಾರೆ ಎನ್ನುವುದಕ್ಕೆ ಇದಕ್ಕಿಂತ ಪುರಾವೆ ಬೇಕಿಲ್ಲ.

ರಾಜ್ಯದ ಮುಖ್ಯಮಂತ್ರಿಗೆ ಧಮ್ಕಿ ಹಾಕಿ, ನಾನು ಹೇಳಿದವರಷ್ಟನ್ನೇ ಮಾಡಿ ಎನ್ನುವ ಈ ವ್ಯಕ್ತಿ ಮುಖ್ಯಮಂತ್ರಿ ಮಗನೋ ಅಥವಾ ಕರ್ನಾಟಕದ ಸೂಪರ್ ಸಿಎಂ, ಇಲ್ಲವೇ ಮಿನಿಸ್ಟರ್ ಫಾರ್ ಕ್ಯಾಷ್ ಫಾರ್ ಪೋಸ್ಟಿಂಗಾ ಅಥವಾ ಒಳಾಡಳಿತದ ಸಚಿವಾಲಯ ಮಾದರಿಯ ಒಳ ವಸೂಲಿ ಸಚಿವಾಲಯದ ಸಚಿವರಾ ಎಂದು ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿಯೇ ಫೋನ್ ಕೊಡುವಷ್ಟು ಪ್ರಭಾವಿಯಾದ ಆ ಭಾರೀ ಆಸಾಮಿ ಯಾರು, ಇಷ್ಟಕ್ಕೂ ಆ ಮಹದೇವ ಎನ್ನುವ ವ್ಯಕ್ತಿ ಯಾರು. ಹಿಂದೊಮ್ಮೆ ನಾನೇ ಸುದ್ದಿಗೋಷ್ಠಿಯಲ್ಲಿ ಪ್ರತಿ ವರ್ಗಾವಣೆಗೆ ತಲಾ 30 ಲಕ್ಷ ರೂ. ವಸೂಲಿ ಮಾಡುತ್ತಿದ್ದ ಗಿರಾಕಿ ಈತ ಎಂದು ತಿಳಿಸಿದ್ದೆ. ಆದರೆ, ನೀವು ಅಂದು 99.99ರಷ್ಟು ಸುಳ್ಳು ಎಂದು ಹಿಟ್ ಅಂಡ್ ರನ್ ಕೇಸ್ ಮಾಡಿದ್ದೀರಿ. ಸಿದ್ದರಾಮಯ್ಯನವರೇ ಈಗ ಏನು ಹೇಳುತ್ತೀರಿ. ನೀವು, ನಿಮ್ಮ ಮಗ ಸೇರಿ ವರ್ಗಾವಣೆ ದಂಧೆಯಲ್ಲಿ ತೊಡಗಿಸಿಕೊಂಡು ಎಷ್ಟು ಹಣ ಸಂಪಾದಿಸಿದ್ದೀರಿ, ಆದಾಯ ತೆರಿಗೆ ಇಲಾಖೆ ದಾಳಿ ಮಾಡಿ ವಸೂಲಿ ಮಾಡಿದ್ದು ಯಾರ ಹಣ ಎಂಬುದು ಈಗ ಜನರಿಗೆ ಗೊತ್ತಾಗಲಿದೆ.

ಆರೋಪ ಸಾಬೀತಾದರೆ ರಾಜಕೀಯ ನಿವೃತ್ತಿ

ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಲೆಗಳನ್ನು ದುರಸ್ತಿ ಮಾಡಲಾಗುತ್ತಿದೆ. ಅದಕ್ಕೆ ಸಿಎಸ್‌ಆರ್ ಫಂಡ್ ಒದಗಿಸುವ ಬಗ್ಗೆ ಮಾತನಾಡಿದ್ದಾರೆ ಹೊರತು ವರ್ಗಾವಣೆ ಬಗ್ಗೆ ಅಲ್ಲ ಎಂದು ಸ್ಪಷ್ಟಪಡಿಸಿದರು. ಐದು ಹೆಸರು ಮಾತ್ರ ಎಂದು ಮೊಬೈಲ್‌ನಲ್ಲಿ ಯತೀಂದ್ರ ಹೇಳಿದ್ದರ ಬಗ್ಗೆ ಕೇಳಿದಾಗ ಐದು ಹೆಸರು ಅಂದರೆ ವರ್ಗಾವಣೆ ಮಾಡುವ ಹೆಸರುಗಳೆಂದು ರ್ಥವೇ, ಇದನ್ನು ಭಾರೀ ದೊಡ್ಡದಾಗಿ ವಿವಾದ ಮಾಡುತ್ತಿದ್ದಾರಷ್ಟೆ ಎಂದರು.

ರಾಜಕೀಯ ನಿವೃತ್ತಿ: ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಯಾವುದೇ ದಂಧೆ, ಹಗರಣಗಳಲ್ಲಿ ಭಾಗಿ ಯಾಗಿಲ್ಲ. ಕುಮಾರಸ್ವಾಮಿ ರಾಜಕೀಯಕ್ಕಾಗಿ ಏನೆಲ್ಲಾ ಆರೋಪ ಮಾಡಬಹುದು, ಮಾಡಿಕೊಳ್ಳಲಿ, ಕುಮಾರಸ್ವಾಮಿ ಆರೋಪಗಳ ಬಗ್ಗೆ ಬೇಕಾದರೆ ತನಿಖೆ ಮಾಡಿಕೊಳ್ಳಲಿ, ನನ್ನ ರಾಜಕೀಯ ಜೀವನದಲ್ಲಿ ವರ್ಗಾವಣೆ ದಂಧೆ ಮಾಡಿಲ್ಲ. ವರ್ಗಾವಣೆ ದಂಧೆ ಮಾಡಿದ್ದು ಸಾಬೀತಾದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದರು.

ಶ್ಯಾಡೋ ಸಿಎಂ: ವರ್ಗಾವಣೆ ದಂಧೆ ವಿಚಾರದಲ್ಲಿ ಮಾತನಾಡಿರುವ ವಿಡಿಯೊ ಎಂದು ಹೇಳಲಾದ ಸಿಎಂ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಮಾತನಾಡಿರುವ ವಿಡಿಯೊ ವ್ಯಾಪಕವಾಗಿ ವೈರಲ್ ಆಗುತ್ತಿದ್ದಂತೆ ಬಿಜೆಪಿ ಟ್ವೀಟ್ ಮೂಲಕ ಸರ್ಕಾರವನ್ನು ಮತ್ತು ಸಿದ್ದರಾಮಯ್ಯನವರನ್ನು ಟೀಕಿಸಿದೆ. ಸಿದ್ದರಾಮಯ್ಯ ನವರು ನಾಮಕಾವಸ್ತೆ ಸಿಎಂ ಅಷ್ಟೆ, ಅವರ ಹೆಸರಿನಲ್ಲಿ ಡಾ ಯತೀಂದ್ರ ಸರ್ಕಾರದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಸರ್ಕಾರದಲ್ಲಿ ವರ್ಗಾವಣೆ ದಂಧೆ ಮಿತಿಮೀರಿದೆ ಎಂದು ಆರೋಪಿಸಿದೆ.

ವಿಮಾನ ನಿಲ್ದಾಣ ಯೋಜನೆಗೆ ಕೂಡಿಗೆ ಬಳಿ ಭೂಮಿ

ಸ್ಥಳಕ್ಕೆ ಭೇಟಿ ನೀಡಿತ್ತು. ಯೋಜನೆಗೆ ಹೆಚ್ಚಿನ ಭೂಮಿ ಅಗತ್ಯವಿದೆ. ಪರ್ಯಾಯ ಭೂ ಪ್ರದೇಶವನ್ನು ಗುರುತಿಸುವಂತೆ ಆದೇಶ ರವಾನಿಸಿತ್ತು. ಪ್ರಸ್ತುತ ಕೂಡಿಗೆ ಸಮೀಪದ ದೊಡ್ಡ ಆಳುವಾರ ಗ್ರಾಮದಲ್ಲಿ 130 ಎಕರೆಗೂ ಹೆಚ್ಚು ಭೂಮಿಯನ್ನು ಜಿಲ್ಲಾಡಳಿತ ಗುರುತಿಸಿದ್ದು, ಈ ಜಮೀನು ಕಂದಾಯ ಇಲಾಖೆಗೆ ಒಳಪಟ್ಟಿದೆ. ಈ ದೊಡ್ಡ ಪಟ್ಟಿಯ ಜಮೀನು ಹಲವಾರು ಸರ್ವೆ ನಂಬರ್‌ಗಳನ್ನು ಒಳಗೊಂಡಿದೆ. ಇಲ್ಲಿ ಸಮಗ್ರವಾಗಿ ಸಮೀಕ್ಷೆ ನಡೆಸಲಾಗಿದೆ. ಈ ಭೂಮಿಯಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವ ಪ್ರಸ್ತಾವನೆಯನ್ನು ಶೀಘ್ರದಲ್ಲೇ ರವಾನಿಸಲಾಗುವುದು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಖಚಿತಪಡಿಸಿದ್ದಾರೆ. ಭೂಮಿಯನ್ನು ಅಂತಿಮಗೊಳಿಸಿದ ನಂತರ ಅದನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಎಸ್‌ಐಐಡಿಸಿ) ಹಸ್ತಾಂತರಿಸಲಾಗುವುದು ಎಂದು ಹೇಳಿದ್ದಾರೆ.

ಭಾರತ–ಆಸ್ಟ್ರೇಲಿಯಾ ವಿಶ್ವಕಪ್‌ಗೆ ಸೆಣಸಾಟ

ಇನ್ನಿಂಗ್ಸ್ ಆರಂಭಿಸಿದ ಟ್ರಾವಿಸ್ ಹೆಡ್ ಹಾಗೂ ಡೇವಿಡ್ ವಾರ್ನರ್ ಮೊದಲ ವಿಕೆಟ್‌ಗೆ 60 ರನ್‌ಗಳ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿಕೊಟ್ಟರು. ಆದರೆ ಡೇವಿಡ್ ವಾರ್ನರ್ 29 ರನ್ ಸಿಡಿಸಿ ಔಟಾದರು. ಇದರ ಬೆನ್ನಲ್ಲೇ ಮಿಚೆಲ್ ಮಾರ್ಶ್ ಡಕೌಟ್ ಆದರು. ಸತತ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ಆಸೀಸ್‌ಗೆ ಟ್ರಾವಿಸ್ ಹೆಡ್ ಹಾಗೂ ಸ್ಟೀವ್ ಸ್ಮಿತ್ 45 ರನ್ ಜೊತೆಯಾಟದ ಮೂಲಕ ಚೇತರಿಕೆ ನೀಡಿದರು. ಆದರೆ ಅರ್ಧಶತಕ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ಹೆಡ್ 48 ಎಸೆತಗಳಲ್ಲಿ 9 ಬೌಂಡರಿ, 2 ಸಿಕ್ಸರ್ ಒಳಗೊಂಡ 62 ರನ್ ಸಿಡಿಸಿ ನಿರ್ಗಮಿಸಿದರು. ಈ ವೇಳೆ 15 ಓವರ್‌ಗಳಿಗೆ 109 ರನ್ ಗಳಿಸಿದ್ದ ಆಸ್ಟ್ರೇಲಿಯಾ ಬ್ಯಾಟ್ಸ್‌ಮನ್‌ಗಳು ಹರಿಣರ ಸ್ಪಿನ್ ದಾಳಿಯಿಂದ ನಿಧಾನಗತಿ ಬ್ಯಾಟಿಂಗ್‌ಗೆ ಮುಂದಾಯಿತು. ನಂತರ ಬಂದ ಮಾರ್ನಸ್ ಲಬುಶಾನೆ 18 ರನ್ ಸಿಡಿಸಿ ಔಟಾದರು. ಬಳಿಕ ಬಂದ ಗ್ಲೆನ್ ಮ್ಯಾಕ್ಸ್‌ವೆಲ್ ಕೇವಲ 1 ರನ್ ಸಿಡಿಸಿ ನಿರ್ಗಮಿಸಿದರು. ಇನ್ನು ಉತ್ತಮವಾಗಿ ಆಡುತ್ತಿದ್ದ ಸ್ಟೀವ್ ಸ್ಮಿತ್ 30 ರನ್ ಸಿಡಿಸಿ ಔಟಾಗುತ್ತಿದ್ದಂತೆ ಆಸ್ಟ್ರೇಲಿಯಾ ತಂಡದ ಒತ್ತಡ ಹೆಚ್ಚಾಯಿತು. ನಂತರ ಬಂದ ಜೋಶ್ ಇಂಗ್ಲಿಸ್ 28 ರನ್ ಸಿಡಿಸಿ ಔಟಾದರು. ಈ ವೇಳೆ ಆಸ್ಟ್ರೇಲಿಯಾ ಕೊನೆ 10 ಓವರ್‌ಗಳಲ್ಲಿ ಗೆಲುವಿಗೆ 20 ರನ್ ಗಳಿಸಬೇಕಿತ್ತು. ಈ ವೇಳೆ ಜೊತೆಯಾದ ಮಿಚೆಲ್ ಸ್ಟಾರ್ಕ್ ಹಾಗೂ ಪ್ಯಾಟ್ ಕಮಿನ್ಸ್ ಕೊನೆವರೆಗೂ ಹೋರಾಡಿ ತಂಡಕ್ಕೆ ಜಯ ತಂದಿತ್ತರು. ಅಂತಿಮವಾಗಿ ಆಸ್ಟ್ರೇಲಿಯಾ 47.2 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಸ್ಟಾರ್ಕ್ ಅಜೇಯ 16 ರನ್ ಹಾಗೂ ಕಮಿನ್ಸ್ ಅಜೇಯ 14 ರನ್ ಸಿಡಿಸಿದರು. ದಕ್ಷಿಣ ಆಫ್ರಿಕಾ ಪರ ಜೆರಾಲ್ಡ್ ಕೋಟ್ಜೆ, ತಬ್ರೈಜ್ ಶಮ್ಸಿ ತಲಾ 2, ಕಾಗಿಸೊ ರಬಾಡ, ಏಡನ್ ಮಾರ್ಕ್ರಮ್, ಕೇಶವ್ ಮಹಾರಾಜ್ ತಲಾ ಒಂದೊಂದು ವಿಕೆಟ್ ಪಡೆದರು. ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ 49.4 ಓವರ್‌ಗಳಲ್ಲಿ 212ರನ್‌ಗಳಿಗೆ ಆಲೌಟಾಯಿತು. ಆಸ್ಟ್ರೇಲಿಯಾ ಬೌಲರ್‌ಗಳ ಮಾರಕ ದಾಳಿಗೆ ತತ್ತರಿಸಿದ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಹೀನಾಯ ಪ್ರದರ್ಶನ ತೋರಿ ಪೆವಿಲಿಯನ್ ಸೇರಿಕೊಂಡರು. ತಂಡದ ಮೊತ್ತ 24 ರನ್ ಆಗುವಷ್ಟರಲ್ಲಿ ಶೂನ್ಯಕ್ಕೆ ನಾಯಕ ತೆಂಬಾ ಬವುಮಾ, 3 ರನ್ ಗಳಿಸಿ ಕ್ವಿಂಟನ್ ಡಿಕಾಕ್, 6 ರನ್ ಗಳಿಸಿ ರಾಸಿ ವಾನ್ ಡೇರ್ ಡುಸ್ಸೆನ್ ಮತ್ತು ಏಡನ್ ಮಾರ್ಕ್ರಮ್ 10 ರನ್ ಗಳಿಸಿ ಔಟಾದರು. ಈ ವೇಳೆ ಜೊತೆಯಾದ ಹೆನ್ರಿಚ್ ಕ್ಲಾಸೆನ್ ಮತ್ತು ಡೇವಿಡ್ ಮಿಲ್ಲರ್ 95 ರನ್ ಜೊತೆಯಾಟವಾಡಿದರು. ಈ ವೇಳೆ ಅರ್ಧಶತಕದ ಅಂಚಿನಲ್ಲಿದ್ದ ಹೆನ್ರಿಚ್ ಕ್ಲಾಸೆನ್ 47 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದೆಡೆ ಇನ್ನಿಂಗ್ಸ್ ಕೊನೆವರೆಗೂ ಏಕಾಂಗಿ ಹೋರಾಟ ನಡೆಸಿದ ಡೇವಿಡ್ ಮಿಲ್ಲರ್ 116 ಎಸೆತಗಳಲ್ಲಿ 5 ಸಿಕ್ಸರ್, 8 ಬೌಂಡರಿ ಒಳಗೊಂಡ 101 ರನ್ ಸಿಡಿಸಿ ನಿರ್ಗಮಿಸಿದರು. ಉಳಿದಂತೆ ಜೆರಾಲ್ಡ್ ಕೋಟ್ಜೆ 19, ಕಾಗಿಸೋ ರಬಾಡ 10 ರನ್ ಗಳಿಸಿದರು. ಆಸೀಸ್ ಪರ ಮಿಚೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮ್ಮಿನ್ಸ್ ತಲಾ 3, ಜೋಶ್ ಹ್ಯಾಜಲ್ವುಡ್ ಮತ್ತು ಟ್ರಾವಿಸ್ ಹೆಡ್ ತಲಾ 2 ವಿಕೆಟ್ ಪಡೆದು ಮಿಂಚಿದರು. ಟ್ರಾವಿಸ್ ಹೆಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು

ನಾನು ಸೇರಿ ನಾಲ್ಕೈದು ಆಕಾಂಕ್ಷಿಗಳಿದ್ದೇವೆ

ಆ ನೇಮಕವನ್ನು ಹೇಗೆ ಘೋಷಿಸಲಾಯಿತು ಎಂದು ನಿಮಗೆ ತಿಳಿದಿದೆ. ಹಾಗೆಯೇ ವಿರೋಧ ಪಕ್ಷದ ನಾಯಕನ ಹುದ್ದೆ ಕೂಡ ಪ್ರಮುಖವಾಗಿದೆ. ಏಕೆಂದರೆ, ಒಬ್ಬರು ಬೂತ್‌ನ ಒಳಗೆ ಮತ್ತು ಇನ್ನೊಬ್ಬರು ವಿಧಾನಸಭೆಯಿಂದ ಹೊರಗೆ ಪಕ್ಷವನ್ನು ಮುನ್ನಡೆಸಬೇಕು ಎಂದರು. ಇದೆಲ್ಲವನ್ನೂ ಗಣನೆಗೆ ತೆಗೆದುಕೊಂಡು ನಾಳೆ ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೇಂದ್ರ ವೀಕ್ಷಕರ ಸಮ್ಮುಖದಲ್ಲಿ ವಿಪಕ್ಷ ನಾಯಕನ ಹೆಸರನ್ನು ಘೋಷಿಸಲಾಗುತ್ತದೆ. ಕೇಂದ್ರದ ನಾಯಕತ್ವವು 2 ತಿಂಗಳ ಹಿಂದೆಯೇ ಶಾಸಕರು ಮತ್ತು ಕೋರ್ ಕಮಿಟಿ ಸದಸ್ಯರ ಅಭಿಪ್ರಾಯವನ್ನು ಸಂಗ್ರಹಿಸಿತ್ತು ಎಂದು ತಿಳಿಸಿದ ಅಶೋಕ್, ಈಗ ಯಾರೇ ಪಕ್ಷದ ಅಧ್ಯಕ್ಷರಾಗಿದ್ದರೂ, ಅದಕ್ಕೆ ಯಾರೊಬ್ಬರದೂ ಅಭ್ಯಂತರವಿಲ್ಲ ಎಂದರು. ವಿಪಕ್ಷ ನಾಯಕನ ಹುದ್ದೆಗೆ ತಮ್ಮ ಅವರ ಹೆಸರೂ ಹರಿದಾಡುತ್ತಿರುವ ಬಗ್ಗೆ ಅರಿವಿದೆ. ನಾನು ಸೇರಿದಂತೆ ನಾಲ್ಕೈದು ಜನ ಆಕಾಂಕ್ಷಿಗಳಿದ್ದು, ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂಬುದಷ್ಟೇ ನಮ್ಮ ಗುರಿ. ಹೀಗಾಗಿ ಯಾವುದೇ ಗೊಂದಲ, ಅಡೆತಡೆಗಳಿಲ್ಲದೆ ಹೊಸ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ನಾನು ನಿನ್ನೆ ವಿ.ಸುನೀಲ್ ಕುಮಾರ್, ಡಾ.ಸಿಎನ್ ಅಶ್ವತ್ಥ್ ನಾರಾಯಣ್ ಅವರೊಂದಿಗೆ ಮಾತನಾಡಿದ್ದೇನೆ. ಯಾರೇ ಆಯ್ಕೆಯಾದರೂ, ನಮ್ಮ ಅಭ್ಯಂತರವಿಲ್ಲ. ಪಕ್ಷ ಶ್ರೇಷ್ಠವಾಗಿದ್ದು, ಮೋದಿ ಮತ್ತೊಮ್ಮೆ ಪ್ರಧಾನಿಯಾಗುವುದೇ ನಮ್ಮ ಆದ್ಯತೆ ಎಂದರು. ರಾಜ್ಯದಲ್ಲಿ ಪ್ರಮುಖ ವಿರೋಧ ಪಕ್ಷವಾಗಿರುವ ಬಿಜೆಪಿ ಇನ್ನೂ ತನ್ನ ಶಾಸಕಾಂಗ ಪಕ್ಷದ ನಾಯಕನನ್ನು ನೇಮಿಸಿಲ್ಲ. ಈ ಹಿಂದೆ ಜುಲೈನಲ್ಲಿ ನಡೆದ ವಿಧಾನಸಭೆ ಅಧಿವೇಶನ ವಿರೋಧ ಪಕ್ಷದ ನಾಯಕರಿಲ್ಲದೇ ನಡೆದಿತ್ತು. ಡಿಸೆಂಬರ್ 4 ರಿಂದ ಬೆಳಗಾವಿಯಲ್ಲಿ ನಡೆಯಲಿರುವ ರಾಜ್ಯ ವಿಧಾನಮಂಡಲದ ಚಳಿಗಾಲದ ಅಧಿವೇಶನಕ್ಕೂ ಮುನ್ನ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಸಭೆ ನಡೆಯುತ್ತಿದೆ.

ಮುಖ್ಯಮಂತ್ರಿಗಳ 2 ದಿನಗಳ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು, ನ.16– ಮುಖ್ಯಮಂತ್ರಿ ಸಿದ್ದರಾಮಯ್ಯನವರು ನ. 17 ಮತ್ತು 18ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು ನ.17 ರಂದು ಮಧ್ಯಾಹ್ನ 12.55 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು.

ಮಧ್ಯಾಹ್ನ 2.30ಕ್ಕೆ ಶ್ರೀ ಕನಕದಾಸ ಸಾರ್ವಜನಿಕ ವಿದ್ಯಾರ್ಥಿನಿಲಯ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಶ್ರೀ ಕನಕದಾಸ ಸಾರ್ವಜನಿಕ ವಿದ್ಯಾರ್ಥಿನಿಲಯದ ನೂತನ ಕಟ್ಟಡದ ಶಂಕುಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 3 ಗಂಟೆಗೆ ನಂಜನಗೂಡು ತಾಲೂಕಿನ ಕಳಲೆ ಗ್ರಾಮದ ಶ್ರೀ ಕಡಲೆ ಮಾಲಮ್ಮನವರ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು.

ನ.18ರಂದು ಬೆಳಗ್ಗೆ 10 ಗಂಟೆಗೆ ದಿವಂಗತ ಪ. ಮಲ್ಲೇಶ್ ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 2:30ಕ್ಕೆ ನಂಜನಗೂಡು ತಾಲೂಕಿನ ಅಡಕನಹಳ್ಳಿ ತಾಂಡ್ಯ ಕೈಗಾರಿಕಾ ವಸಾಹತು ಪ್ರದೇಶದಲ್ಲಿನ ಸ್ಟೇಟ್ ಆಫ್ ದಿ ಆರ್ಟ್ ಮ್ಯಾನುಫ್ಯಾಕ್ಚರಿಂಗ್ ಫೆಸಿಲಿಟೀಸ್ ಆಫ್ ಐಟಿಸಿ ಇಡಿವಿಷನ್ ಲಿಮಿಟೆಡ್‌ನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಸಂಜೆ 4ಕ್ಕೆ ಬೆಳವಾಡಿಯಲ್ಲಿನ ಎಸ್.ವಿ.ಇ.ಐ ವಿದ್ಯಾಸಂಸ್ಥೆಯ ರಜತ ಮಹೋತ್ಸವ ಮತ್ತು ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಸಂಜೆ 4.30ಕ್ಕೆ ಸೋಷಿಯಲ್ ಜಸ್ಟೀಸ್ ಫೌಂಡೇಶನ್ ಮೈಸೂರು ಇವರ ವತಿಯಿಂದ ಕಲಾಮಂದಿರದಲ್ಲಿ ಆಯೋಜಿಸಿರುವ ಡಾ. ಹರೀಶ್‌ಕುಮಾರ್ ಅವರ 'ಆಧುನಿಕ ಭಾರತದ ನಿರ್ಮಾತೃ ಬಾಬು ಜಗಜೀವನ್ ರಾಮ್' ಮತ್ತು 'ಬಾಬೂಜಿ ಚಿತ್ರ ಸಂಪುಟ' ಕೃತಿ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಸಾರಿಗೆ ವಾಹನಗಳಿಗೆ ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಸಿಸ್ಟಂ ಅಳವಡಿಕೆಗೆ ಸಿದ್ಧತೆ

ಮಹಿಳೆಯರ ಸುರಕ್ಷತೆಗೆ ಸಾರಿಗೆ ಇಲಾಖೆಯಿಂದ ಈ ಕ್ರಮ 15 ದಿನದೊಳಗಾಗಿ ಮೈಸೂರಿನ ಆರ್‌ಟಿಓ ಕಚೇರಿ ಸಿಬ್ಬಂದಿಗೆ ತರಬೇತಿ

ಮೈಸೂರು, ನ.16(ಆರ್‌ಕೆ)–ಮಹಿಳೆಯರ ಸುರಕ್ಷತೆ ದೃಷ್ಟಿಯಿಂದ ಸಾರ್ವಜನಿಕ ಸಾರಿಗೆ (Public Transport) ವಾಹನಗಳಿಗೆ ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ (VLT) ಸಿಸ್ಟಂ ಅಳವಡಿಸಲು ಸರ್ಕಾರ ಮುಂದಾಗಿದೆ.

ನಿರ್ಭಯ ಪ್ರಕರಣದ ನಂತರ ಸಾರಿಗೆ ಇಲಾಖೆಯು ರಾಜ್ಯದ ಎಲ್ಲಾ ಹಳದಿ ಬಣ್ಣದ ನೋಂದಣಿ ಫಲಕ (Yellow Board) ಹೊಂದಿರುವ ವಾಹನಗಳಿಗೆ ವಿಎಲ್‌ಟಿ ಉಪಕರಣ ಅಳವಡಿಸಿ ಸಾರ್ವಜನಿಕ ಸಾರಿಗೆ ವಾಹನಗಳ ಚಾಲನೆ ಮೇಲೆ ನಿಗಾ ಇರಿಸಲು ಯೋಜನೆ ರೂಪಿಸಿದೆ.

ಈ ಉದ್ದೇಶಕ್ಕಾಗಿ ರಾಜ್ಯದ ಎಲ್ಲಾ ವಿಭಾಗಗಳ ಪ್ರಾದೇಶಿಕ ಸಾರಿಗೆ ಕಚೇರಿಗಳ ಆರ್‌ಟಿಓ, ಇನ್ಸ್‌ಪೆಕ್ಟರ್‌ಗಳು, ಸಿಬ್ಬಂದಿಗಳಿಗೆ ವಿಭಾಗವಾರು ತರಬೇತಿ ನೀಡಲು ಮುಂದಾಗಿರುವ ಸಾರಿಗೆ ಇಲಾಖೆಯು, ಮೈಸೂರಲ್ಲಿ 15 ದಿನದೊಳಗೆ ತರಬೇತಿ ಕಾರ್ಯಕ್ರಮಕ್ಕೆ ತಯಾರಿ ನಡೆಸುತ್ತಿದೆ.



ಸರ್ಕಾರದ ನಿರ್ದೇಶದಂತೆ ಸಿಬ್ಬಂದಿಗೆ ತರಬೇತಿ ನೀಡಿ ನಂತರ ಸಾರ್ವಜನಿಕ ಸಾರಿಗೆ ವಾಹನಗಳಿಗೆ ವಿಎಲ್‌ಟಿ (ಜಿಪಿಎಸ್ ಮಾದರಿಯಲ್ಲಿ) ಉಪಕರಣ ಅಳವಡಿಸಿ ಟ್ರ್ಯಾಕಿಂಗ್ ಮಾಡಲು ಸರ್ವ ಸಿದ್ಧತೆ ಮಾಡಲಾಗುತ್ತಿದೆ ಎಂದು ಮೈಸೂರಿನ ಪೂರ್ವ ಆರ್‌ಟಿಓ ಸಫಿ ಉದ್ದಿನ್ ಹಾಗೂ ಪಶ್ಚಿಮ ಆರ್‌ಟಿಓ ದೇವಿಕಾ ಅವರು ತಿಳಿಸಿದ್ದಾರೆ.

ಟ್ಯಾಕ್ಸಿ, ಕ್ಯಾಬ್, ಖಾಸಗಿ ಬಸ್ಸು, ಸರ್ಕಾರಿ ಬಸ್, ಸರಕು ಸಾಗಣೆ ಸೇರಿದಂತೆ ಎಲ್ಲಾ ಬಗೆಯ ಹಳದಿ ಬೋರ್ಡ್ ವಾಹನಗಳ ಲೊಕೇಷನ್ ಟ್ರ್ಯಾಕ್ ಮಾಡುವ ಮೂಲಕ ಮಹಿಳೆಯರು, ಮಕ್ಕಳು ಸೇರಿದಂತೆ ಪ್ರಯಾಣಿಕರ ಸುರಕ್ಷತೆಗಾಗಿ ಕ್ರಮ ವಹಿಸಲು ಸರ್ಕಾರ ಮುಂದಾಗಿದೆ.

ವಿಎಲ್‌ಟಿ ಉಪಕರಣ ಅಳವಡಿಸಲು ಸಾರಿಗೆ ಇಲಾಖೆಯು ಅರ್ಹ ಏಜೆನ್ಸಿಗಳಿಂದ 2023ರ ಫೆಬ್ರವರಿ 9ರಂದು ಟೆಂಡರ್ ಆಹ್ವಾನಿಸಿತ್ತು. 13 ಸಂಸ್ಥೆಗಳು ಐಎಸ್‌ಓ–140 ಮಾದರಿಯ ಉಪಕರಣ ಅಳವಡಿಸಲು ಅಂತಿಮವಾಗಿದ್ದು, ಈ ಯೋಜನೆ ಅನುಷ್ಠಾನಗೊಳಿಸಲು ಇಲಾಖೆಯು ಸರ್ಕಾರದ ಅನುಮತಿಗಾಗಿ ನಿರೀಕ್ಷಿಸುತ್ತಿದೆ.

ಒಮ್ಮೆ ಈ ಉಪಕರಣ ಅಳವಡಿಸಿದರೆ, ಆ ವಾಹನಗಳು ಎಲ್ಲಿ ಚಲಿಸುತ್ತಿವೆ ಎಂಬುದನ್ನು ತಿಳಿಯಬಹುದಲ್ಲದೆ, ಅಪಘಾತವಾದರೆ, ಸಂಚಾರ ನಿಯಮ ಉಲ್ಲಂಘಿಸಿದರೆ, ದಾಖಲಾತಿ ಇಲ್ಲದೆ ಓಡಾಡಿದರೆ ತಕ್ಷಣ ಸಂಬಂಧಪಟ್ಟ ಇಲಾಖಾ ಕಚೇರಿಗೆ ಮಾಹಿತಿ ತಲುಪುತ್ತದೆ. ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರು ಪ್ಯಾನಿಕ್ ಬಟನ್ ಒತ್ತಿದಲ್ಲಿ ಕಮಾಂಡ್ ಸೆಂಟರ್‌ಗೆ ಸಂದೇಶ ರವಾನೆಯಾಗಿ ಅಧಿಕಾರಿಗಳು, ಆಂಬುಲೆನ್ಸ್, ಪೋಲೀಸರು ತಕ್ಷಣ ಸ್ಥಳಕ್ಕೆ ಧಾವಿಸಲು ಸಹಾಯವಾಗುತ್ತದೆ.

ನಾಳೆ ಬಾಬು ಜಗಜೀವನ್ ರಾಮ್ ಕುರಿತ ಕೃತಿ ಬಿಡುಗಡೆ



ಮೈಸೂರು,ನ16(ಜಿಎ)–ಗಾಂಧಿ ವಿಚಾರ ಪರಿಷತ್ತು ಆಯೋಜಿಸಿರುವ ಕಾರ್ಯಕ್ರಮದಲ್ಲಿ ಡಾ.ಹರೀಶ್ ಅವರು ರಚಿಸಿರುವ 'ಆಧುನಿಕ ಭಾರತದ ನಿರ್ಮಾತೃ ಬಾಬು ಜಗಜೀವನ ರಾಮ್' ಮತ್ತು 'ಬಾಬೂಜಿ ಚಿತ್ರ ಸಂಪುಟ' ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನ.18ರಂದು ಬಿಡುಗಡೆಗೊಳಿಸಲಿದ್ದಾರೆ ಎಂದು ಪರಿಷತ್ತು ಖಜಾಂಚಿ ಈ.ಧನಂಜಯ ಎಲಿಯೂರು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮೈಸೂರಿನ ಕಲಾಮಂದಿರದಲ್ಲಿ ಸಂಜೆ 4 ಗಂಟೆಗೆ ಮುಖ್ಯಮಂತ್ರಿಗಳು ಕೃತಿಗಳನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ದಿಕ್ಸೂಚಿ ಭಾಷಣ ಮಾಡಲಿದ್ದು, ಕೃತಿ ಕುರಿತು ಸಾಹಿತಿ ಪ್ರೊ.ಸಿ.ನಾಗಣ್ಣ ಮಾತನಾಡಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ನಿವೃತ್ತ ಪ್ರಾಧ್ಯಾಪಕಿ ಪ್ರೊ.ಪಿ.ಎಂ.ಅನುರಾಧ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕೃತಿ ಲೇಖಕ ಡಾ.ಹರೀಶ್‌ಕುಮಾರ್, ಕಾಂಗ್ರೆಸ್ ಮುಖಂಡ ಶಿವಪ್ರಸಾದ್, ಮುಖಂಡರಾದ ನಾರಾಯಣ್ ಮತ್ತಿತರರು ಉಪಸ್ಥಿತರಿದ್ದರು.



ಇತ್ತೀಚೆಗೆ ನಿಧನರಾದ ಪತ್ರಿಕಾ ವಿತರಕ ಸುಬ್ಬಣ್ಣ ಅವರಿಗೆ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಹೋಮದೇವ, ಕಾರ್ಯದರ್ಶಿ ರವಿ, ಸದಸ್ಯರಾದ ಶ್ರೀಕಾಂತ್, ಚಂದ್ರಶೇಖರ್, ನಾಗರಾಜ್, ಜಂಬುಚಂದ್ರ, ಶಿವಣ್ಣ ಉಪಸ್ಥಿತರಿದ್ದರು.



ಇತ್ತೀಚೆಗೆ ನಡೆದ ಅಂತರ ಶಾಲಾ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಇಲವಾಲದ ಸೆಂಟ್ ಜೋಸೆಫ್ ಸೆಂಟ್ರಲ್ ವಿದ್ಯಾರ್ಥಿಗಳಾದ ಪುಣ್ಯ, ಶ್ರೀಯಾ, ಆಯುಷಿ ಅಮರ್, ಪ್ರಗತಿ, ಲಹರಿ, ರೋಶ್ಮಿತ, ಏಂಜಲ್, ಅನನ್ಯ, ಲೀಲಮ್, ಚಿನ್ಮಯಿ ಮತ್ತು ಇಂಚರ–ವಿದ್ಯಾರ್ಥಿನಿಯರು ಭಾಗವಹಿಸಿ ಪ್ರಥಮ ಬಹುಮಾನ ಪಡೆದಿದ್ದಾರೆ. ಶಾಲೆ ಆಡಳಿತ ಮಂಡಳಿ ಸಿಇಓ ಜಯಶ್ರೀ ಎಸ್.ಮೂರ್ತಿ, ಪ್ರಾಂಶುಪಾಲರಾದ ಶೋಭ, ಉಪಪ್ರಾಂಶುಪಾಲರಾದ ಕಾವ್ಯಶ್ರೀ ಬಸಪ್ಪ, ಮುಖ್ಯ ಶಿಕ್ಷಕಿ ಬಿಂದುಶ್ರೀ, ವಿದ್ಯಾರ್ಥಿನಿಯರು ಇದ್ದಾರೆ.

ಸ್ಪಿರಿಟ್ ಆಫ್ ಟ್ಯಾಲೆಂಟ್ ವತಿಯಿಂದ ಮಕ್ಕಳ ದಿನಾಚರಣೆ



ಮೈಸೂರು,ನ.16– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಸ್ಪಿರಿಟ್ ಆಫ್ ಟ್ಯಾಲೆಂಟ್ ವತಿಯಿಂದ ನ.14ರಂದು ಮಕ್ಕಳ ದಿನವನ್ನು ಆಚರಿಸಲಾಯಿತು.

ಮಕ್ಕಳಿಗೆ ಪುಷ್ಪಗುಚ್ಛ ನೀಡಿ, ಕೇಕ್ ಕತ್ತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕಲಾವಿದೆ ಶ್ರೀನಿಧಿ ಸಿ.ವಿ ಮಾತನಾಡುತ್ತಾ, ಮಾಜಿ ಪ್ರಧಾನಿ ಜವಹರಲಾಲ್ ನೆಹರು ಅವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಜೊತೆಗೆ ಇಂದು ದೀಪಾವಳಿ ಹಬ್ಬವು ಆಗಿರುವುದರಿಂದ ಅಜ್ಞಾನದಿಂದ ಜ್ಞಾನದೆಡೆಗೆ ಪಸರಿಸುವ ಕೆಲಸವು ಕೂಡ ನಡೆಯಬೇಕಾಗಿದೆ. ಇಂದಿನ ಮಕ್ಕಳೇ ಮುಂದಿನ ದಿನಗಳಲ್ಲಿ ದೇಶವನ್ನು ನಡೆಸುವ ಸತ್ಪ್ರಜೆಗಳು. ಆದ್ದರಿಂದ ಮಕ್ಕಳನ್ನು ವಿದ್ಯಾವಂತರನ್ನಾಗಿ, ಬುದ್ಧಿವಂತರನ್ನಾಗಿ ಮಾಡುವುದು ಪೋಷಕರಾದ ನಮ್ಮೆಲ್ಲರ ಕರ್ತವ್ಯ. ನೆಹರು ಅವರು ಹೇಳಿದಂತೆ ಭಾರತದ ಭವಿಷ್ಯವನ್ನು ನೋಡುವಾಗ ಯಾವುದೇ ನಕ್ಷತ್ರ ಗ್ರಹಗಳನ್ನು ನೋಡುವುದಿಲ್ಲ. ಮುದ್ದು ಮಕ್ಕಳ ಹೊಳೆಯುವ ಕಣ್ಣುಗಳನ್ನು ನೋಡುತ್ತೇನೆ. ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ, ಉಲ್ಲಾಸವಿದ್ದರೆ ದೇಶದ ಭವಿಷ್ಯ ಉಜ್ವಲವಾಗುತ್ತದೆ ಎಂದಿದ್ದಾರೆ. ಇದನ್ನು ಪೋಷಕರು ಅರಿತು ಮಕ್ಕಳಿಗೆ ಮೊಬೈಲ್, ಟಿವಿ ಎಲೆಕ್ಟ್ರಾನಿಕ್ಸ್‌ನಂತಹ ಅತ್ಯಾಧುನಿಕ ಉಪಕರಣಗಳಿಂದ ದೂರವಿರಿಸಿ ಅಗತ್ಯಕ್ಕೆ ಅನುಗುಣವಾಗಿ ಬಳಸಲು ಪ್ರೇರೇಪಿಸಬೇಕೆಂದು ತಿಳಿಸಿದರು.

ಮಕ್ಕಳಿಗಾಗಿ ಏರ್ಪಡಿಸಿದ್ದ ಭರತನಾಟ್ಯ, ಶ್ಲೋಕ, ನೃತ್ಯ ವಿವಿಧ ಆಟೋಟಗಳಲ್ಲಿ ಮೈಸೂರಿನ ವಿವಿಧ ಶಾಲೆಯ ಮಕ್ಕಳು ಭಾಗವಹಿಸಿ ಬಹುಮಾನ ಪಡೆದರು.



ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್ ಪಡೆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರನ್ನು ಅವರ ಪತ್ನಿ ರ್‍ಯಾಲಿ ಗಣಪತಿ ಅವರೊಂದಿಗೆ ಮೈಸೂರಿನ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಪಾಲಂದಿರ ಸೋಮಣ್ಣ, ಉಪಾಧ್ಯಕ್ಷ ಕುಟ್ಟಿಮಡ ಕಾರ್ಯಪ್ಪ, ಕಾನೂನು ಸಲಹೆಗಾರ ಮುಕ್ಕಾಟಿರ ಬೆಳ್ಳಿಯಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬೊಳ್ಳೆಯಂಡ ನಂಜಪ್ಪ, ನಿರ್ದೇಶಕರಾದ ಶ್ರೀಮತಿ ತಂಬುಕುತ್ತಿರ ಪಾವನ, ಮಲಚಿರ ಪೊನ್ನಪ್ಪ, ಮಾಚಿಮಂಡ ಸುಬ್ರಮಣಿ, ಆದೇಂಗಡ ಸೋಮಣ್ಣ ಉಪಸ್ಥಿತರಿದ್ದರು.

ಪಿಜಿ ಡಿಪ್ಲೊಮಾ ಇನ್ ಜಿಐಎಸ್ ಪ್ರವೇಶಕ್ಕೆ ದಿನಾಂಕ ವಿಸ್ತರಣೆ

ಮೈಸೂರು, ನ.16–ಮೈಸೂರು ವಿಶ್ವವಿದ್ಯಾನಿಲಯವು PG Diploma in Geographical Information Systems (PGDGIS) ಕೋರ್ಸ್‌ಗೆ ಅರ್ಹ ಅಭ್ಯರ್ಥಿಗಳಿಂದ ಪ್ರವೇಶಾತಿಯನ್ನು ಪಡೆಯಲು ದಿನಾಂಕವನ್ನು ವಿಸ್ತರಿಸಿದ್ದು, 18.11.2023 ಕೊನೆಯ ದಿನಾಂಕವಾಗಿರುತ್ತದೆ. ಶೇ.45 (ಪ.ಜಾ./ಪ.ವ.–ಶೇ.40) ಅಂಕ ಗಳಿಸಿದ ಯಾವುದೇ ಪದವಿ ಪಡೆದ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸಲು ಇಚ್ಛಿಸುವವರು www.uni-mysore.ac.in ಮುಖಾಂತರ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಶುಲ್ಕ 500 ರೂ. D.D.ಗಳೊಂದಿಗೆ (Finance Officer, University of Mysore, Mysuru ಅವರಿಗೆ). ಸಲ್ಲಿಸುವುದು. ಪ್ರವೇಶಾತಿಯ ಹೆಚ್ಚಿನ ವಿವರಗಳಿಗೆ www.uni-mysore.ac.in ಯನ್ನು ನೋಡಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಡಾ.ರಾಮು, ಸಂಯೋಜನಾಧಿಕಾರಿ (ಮೊ. 9880112252).

ಹಿರಿಯರ ಕ್ರೀಡಾಕೂಟದಲ್ಲಿ ಐದು ಚಿನ್ನದ ಪದಕ

ಮೈಸೂರು,ನ.16–ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ ಮುಕ್ತ ರಾಷ್ಟ್ರೀಯ ಹಿರಿಯ ಕ್ರೀಡಾಕೂಟದಲ್ಲಿ ಮೈಸೂರಿನ ವಿವೇಕಾನಂದನಗರದ ಶ್ರೀ ಮಂಜುನಾಥ ಡಿಸ್ ಟ್ರ್ಯಾ ಮಾಲೀಕ ಬಸಪ್ಪ ಸುಂದರರಾವ್ ಅವರು 5 ಚಿನ್ನದ ಪದಕ ಪಡೆದಿದ್ದಾರೆ. ಅವರು 100 ಮೀಟರ್ ಫ್ರೀ ಸ್ಟೈಲ್, 50 ಮೀಟರ್ ಫ್ರೀ ಸ್ಟೈಲ್, 50 ಮೀಟರ್ ಬ್ರೆಸ್ಟ್ ಸ್ಟ್ರೋಕ್, 100 ಮೀಟರ್ ಬ್ಯಾಕ್ ಸ್ಟ್ರೋಕ್ ಮತ್ತು 50 ಮೀಟರ್ ಬ್ಯಾಕ್ ಸ್ಟ್ರೋಕ್ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.



ವಿಶೇಷಚೇತನರ ದಿನ: ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ

ಮೈಸೂರು,ನ.16–2023ರ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ನ.21ರಂದು ಬೆಳಗ್ಗೆ 9 ಗಂಟೆಗೆ 'ಅಂಧ ಹಾಗೂ ಕಿವುಡು ಮಕ್ಕಳ ಸರ್ಕಾರಿ ಪಾಠಶಾಲೆ' ತಿಲಕ್‌ನಗರದಲ್ಲಿ ಏರ್ಪಡಿಸಲಾಗಿದೆ. ಆಸಕ್ತ ವಿಕಲಚೇತನರು ನ.20ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಮಾಹಿತಿಗಾಗಿ ದೂ.ಸಂ: 0821–2490333 ಅನ್ನು ಸಂಪರ್ಕಿಸಬಹುದು

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರುನ.16–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕರ್ನಾಟಕ ಲೋಕಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ನ.24ರ ಒಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4:30 ಗಂಟೆವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ದೂ.ಸಂ:08212515944 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಕೆ.ಎಲ್.ಎನ್.ಮೂರ್ತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೇವಾ ಮನೋಭಾವನೆಯಿಂದ ಶಾಂತಿ, ಅಹಿಂಸೆ ಸ್ಥಾಪಿಸಲು ಸಾಧ್ಯ



ಮೈಸೂರು, ನ. 16– ವಿವಿಧ ರಾಜ್ಯ, ಧರ್ಮಗಳ ಜನರಿಂದ ಕೂಡಿದ ದೇಶ ನಮ್ಮದಾಗಿದ್ದು, ಗಾಂಧೀಜಿಯವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಸೇವೆಯನ್ನೇ ಪ್ರಮುಖ ಧ್ಯೇಯವಾಗುಳ್ಳ ರಾಷ್ಟ್ರೀಯ ಸೇವಾ ಯೋಜನೆ 1969ರಿಂದ ಜಾರಿಗೆ ಬಂದಿತು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಡಾ. ಎನ್.ಆರ್.ಚಂದ್ರೇಗೌಡ ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಆಯೋಜಿಸಿದ್ದ ರಾ.ಸೇ.ಯೋ ಕಾರ್ಯಚಟುವಟಿಕೆಗಳ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ಗಾಂಧೀಜಿ ಸ್ವಾರ್ಥ ಬಿಟ್ಟು ದೇಶಕ್ಕಾಗಿ ಅಹಿಂಸೆ ಮತ್ತು ಶಾಂತಿಯ ಹಿನ್ನೆಲೆಯಲ್ಲಿ ಹೋರಾಟ ಮಾಡಿ ಸ್ವಾತಂತ್ರ್ಯ ತಂದುಕೊಟ್ಟರು. ಪ್ರಸ್ತುತ ಜಗತ್ತು, ಯುದ್ಧ ಪೀಡಿತವಾಗಿದ್ದು ಎಲ್ಲೆಲ್ಲೂ ಹಿಂಸೆ ತಾಂಡವವಾಡುತ್ತಿದೆ. ಇವೆಲ್ಲವನ್ನು ಮೀರಿದ್ದು ಮಾನವೀಯತೆ, ಈ ಕಾರಣಕ್ಕಾಗಿ ಜಗತ್ತಿಗೆ ಪ್ರಸ್ತುತ ಗಾಂಧಿ ಬೇಕಾಗಿದ್ದಾರೆ.

ವಿವಿಧ ದೇಶಗಳ ನಾಯಕರು ಗಾಂಧೀಜಿಯನ್ನು ಗೌರವಿಸುತ್ತಿದ್ದಾರೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಪಠ್ಯ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆ ಸಾಧ್ಯವಿಲ್ಲ. ಆದುದರಿಂದ ಪಠ್ಯೇತರ ಚಟುವಟಿಕೆಗಳು ಪ್ರಮುಖವಾದದ್ದು. ಅಮೇರಿಕಾದಂತಹ ರಾಷ್ಟ್ರ ರಾ.ಸೇ.ಯೋ. ಅನ್ನು ಕಡ್ಡಾಯಗೊಳಿಸಿದೆ. ಶಿಸ್ತು, ಸೇವೆ, ಜೀವನಮೌಲ್ಯಗಳನ್ನು ಕಲಿಸುವ ಉದ್ದೇಶವನ್ನು ಒಳಗೊಂಡಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಎಸ್.ಮರೀಗೌಡ, ರಾ.ಸೇ.ಯೋ. ಸಂಯೋಜನಾಧಿಕಾರಿ ಪ್ರೊ.ಎಸ್.ಸಿದ್ಧರಾಜು, ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಭಾಗವಹಿಸಿದ್ದ ಕಾರ್ಯಕ್ರಮವನ್ನು ಪ್ರೊ. ವತ್ಸಲ ನಿರೂಪಿಸಿ, ಪ್ರೊಚೈತ್ರ ವಂದಿಸಿದರು.

ಫೆ.19ರಿಂದ ಖಗೋಳ ವಿಜ್ಞಾನ ಒಲಂಪಿಯಾಡ್ ಎಕ್ಸ್‌ಪೋಷರ್ ಶಿಬಿರ

ಮೈಸೂರು,ನ.16–ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ (TIFR), ಮುಂಬೈನ ಭಾಗವಾದ ಹೋಮಿ ಬಾಬಾ ವಿಜ್ಞಾನ ಶಿಕ್ಷಣ ಕೇಂದ್ರವು (HBCSE), ಭಾರತೀಯ ಖಗೋಳ ಭೌತ ವಿಜ್ಞಾನ ಸಂಸ್ಥೆ (IIA), ಬೆಂಗಳೂರು, ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ (COSMOS), ಮೈಸೂರು, ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (SVYM) ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯ, ಕಾಲೇಜಿನ ವಿಜ್ಞಾನ ಉಪನ್ಯಾಸಕರು, ವಿಜ್ಞಾನ ಶಿಕ್ಷಕರು, ಹವ್ಯಾಸಿ ಖಗೋಳ ಶಾಸ್ತ್ರಜ್ಞರು, ತಾರಾಲಯಗಳ ಮತ್ತು ವಿಜ್ಞಾನ ವಸ್ತು ಸಂಗ್ರಹಾಲಯಗಳ ಸಿಬ್ಬಂದಿಗೆ ಮುಂದಿನ ಫೆಬ್ರವರಿ 19ರಿಂದ 22ರವರೆಗೆ ಖಗೋಳ ವಿಜ್ಞಾನ ಒಲಂಪಿಯಾಡ್ ಎಕ್ಸ್‌ಪೋಷರ್ ಶಿಬಿರವನ್ನು ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ.

ಈ ಶಿಬಿರದ ಪ್ರಾಥಮಿಕ ಉದ್ದೇಶವು ಖಗೋಳ ವಿಜ್ಞಾನದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಒಲಂಪಿಯಾಡ್ ಕಾರ್ಯಕ್ರಮ ಜಾಗೃತಿ ಮೂಡಿಸುವುದು ಮತ್ತು ಖಗೋಳ ವಿಜ್ಞಾನದ ಒಲಂಪಿಯಾಡ್ ಕುರಿತ ಶೈಕ್ಷಣಿಕ ಮತ್ತು ಸಾಂಸ್ಥಿಕ ಅಂಶಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗುವುದು. ಈ ಶಿಬಿರವು ಶಿಕ್ಷಕ ಸಮುದಾಯದೊಳಗೆ ಉತ್ತಮ ಸಂವಹನ ವೇದಿಕೆಯಾಗಿಯೂ ಕಾರ್ಯನಿರ್ವಹಿಸಲಿದೆ. ಭಾಗವಹಿಸುವ ಎಲ್ಲಾ ಶಿಬಿರಾರ್ಥಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಅರ್ಹ ಶಿಬಿರಾರ್ಥಿಗಳಿಗೆ ಪ್ರಯಾಣ ಭತ್ಯೆಯನ್ನು ನೀಡಲಾಗುವುದು. https://bit.ly/teachers_camp ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ನ.25 ಕೊನೆಯ ದಿನಾಂಕವಾಗಿದೆ.



ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಅಧಿಕಾರ ಸ್ವೀಕಾರ ಹಿನ್ನೆಲೆಯಲ್ಲಿ ಬಿಜೆಪಿಯ ವಾರ್ಡ್ ನಂ.24ರ ಕಾರ್ಯಕರ್ತರು ಜೀವಧಾರ ರಕ್ತ ನಿಧಿ ಕೇಂದ್ರದ ಮುಂಭಾಗ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು. ಈ ವೇಳೆ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೇಬಲ್ ವಿಜಿ, ಗಣೇಶ್, ಕೆಂಪಣ್ಣ, ಉಮೇಶ್, ಸೂರಜ್, ಕಾರ್ತಿಕ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೇಮಾ ಸಂತೋಷ್, ರವಿ ಇನ್ನಿತರರಿದ್ದರು.

ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಸಾವು

ಮೈಸೂರು, ನ.16–ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ದ್ವಿಚಕ್ರ ವಾಹನ ಸವಾರರು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಗೌಸಿಯಾನಗರ ನಿವಾಸಿ ಮುಹೀಬ್ ಅಹಮ್ಮದ್(49) ಎಂಬುವರು ನ.13ರಂದು ರಾತ್ರಿ 9.10ರ ಸುಮಾರಿನಲ್ಲಿ ಹೀರೋಹೊಂಡಾ ಸ್ಪ್ಲೆಂಡರ್ ಬೈಕ್‌ನಲ್ಲಿ (ಕೆಎ 11 ಇಹೆಚ್ 0549) ಮೈಸೂರಿನಿಂದ ಪಾಂಡವಪುರಕ್ಕೆ ತೆರಳುತ್ತಿದ್ದ ವೇಳೆ ಮಣಿಪಾಲ್ ಆಸ್ಪತ್ರೆ ಸರ್ಕಲ್‌ನಲ್ಲಿ ರಿಂಗ್ ರಸ್ತೆಯ ಪುಷ್ಪಾಶ್ರಮ ಕಡೆಯಿಂದ ಉನ್ನತೀನಗರದ ಕಡೆಗೆ ತೆರಳುತ್ತಿದ್ದ ಲಾರಿ (ಕೆಎ 01 ಎಎಲ್ 0888) ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮುಹೀಬ್ ಅಹಮ್ಮದ್ ಸಾವನ್ನಪ್ಪಿದ್ದಾರೆ. ಈ ಸಂಬಂಧ ಎನ್.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮೈಸೂರು ತಾಲೂಕು ಚಿಕ್ಕಳ್ಳಿ ಗ್ರಾಮದ ದರ್ಶನ್ (18) ಎಂಬ ಯುವಕ ನ.13ರಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ಬಜಾಜ್ ಸಿಟಿ–100 ಬೈಕ್ (ಕೆಎ 55 ಇಸಿ 3977)ನಲ್ಲಿ ಮೈಸೂರು ನಗರದಿಂದ ಚಿಕ್ಕಳ್ಳಿ ಕಡೆಗೆ ತೆರಳುತ್ತಿದ್ದಾಗ ಪ್ರಕೃತಿ ಬಡಾವಣೆ ಬಳಿ ಆತನ ನಿಯಂತ್ರಣ ತಪ್ಪಿ ಬೈಕ್ ರಸ್ತೆಯ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಆತ ಸಾವನ್ನಪ್ಪಿದ್ದಾನೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಟೋಗೆ ಜೀಪು ಡಿಕ್ಕಿ: ಟಿಬೆಟಿಯನ್ ಭೌದ್ಧ ಭಿಕ್ಕು ಸಾವು

ಬೈಲುಕುಪ್ಪೆ, ನ.16–ಆಟೋಗೆ ಬೊಲೆರೋ ಜೀಪ್ ಡಿಕ್ಕಿ ಹೊಡೆದ ಪರಿಣಾಮ ಟಿಬೆಟಿಯನ್ ಬೌದ್ಧ ಭಿಕ್ಕು ಸಾವನ್ನಪ್ಪಿದ ಘಟನೆ ಬೈಲುಕುಪ್ಪೆ–ಪಿರಿಯಾಪಟ್ಟಣ ಮುಖ್ಯ ರಸ್ತೆಯ ಕೊಪ್ಪ ಗ್ರಾಮದ ವೇ ಬ್ರಿಡ್ಜ್ ಬಳಿ ಸಂಭವಿಸಿದೆ.

ಬೈಲುಕುಪ್ಪೆ ಟಿಬೆಟಿಯನ್ ಕ್ಯಾಂಪ್‌ನಲ್ಲಿ ವಾಸವಿದ್ದ ಭೌದ್ಧ ಭಿಕ್ಕು ತೆಂಜಿನ್ ನ್ಯಾಮಗೆಲ್ ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಮತ್ತೋರ್ವ ಭೌದ್ಧ ಭಿಕ್ಕು ಆಯುಷ್ ನೇಗಿ ಅವರೊಂದಿಗೆ ನ.14ರಂದು ಆಟೋ (ಕೆಎ 12 ಸಿ 1216)ದಲ್ಲಿ ಕೊಪ್ಪ ಗ್ರಾಮಕ್ಕೆ ಹೋಗಿದ್ದು, ಹಿಂತಿರುಗುತ್ತಿದ್ದ ವೇಳೆ ಅಲ್ಲಿನ ವೇ ಬ್ರಿಡ್ಜ್ ಬಳಿ ಫುಟ್‌ಪಾತ್‌ನಲ್ಲಿ ಆಟೋವನ್ನು ಪಾರ್ಕ್ ಮಾಡಿಸಿ ಅಲ್ಲಿನ ಹೋಟೆಲ್‌ನಲ್ಲಿ ಊಟ ತರಲು ಆಯುಷ್ ನೇಗಿ ತೆರಳಿದ್ದಾರೆ. ಈ ವೇಳೆ ಕುಶಾಲನಗರದ ಕಡೆಯಿಂದ ವೇಗವಾಗಿ ಬಂದ ಬೊಲೆರೋ ಜೀಪ್ (ಕೆಎ 21 ಎನ್ 4680) ಇವರ ಆಟೋಗೆ ಡಿಕ್ಕಿ ಹೊಡೆದಿದ್ದಲ್ಲದೇ ಆಟೋ ಮುಂದೆ ನಿಂತಿದ್ದ ಲಾರಿಗೂ ಅಪ್ಪಳಿಸಿದೆ. ಇದರ ಪರಿಣಾಮವಾಗಿ ಆಟೋ ಮಗುಚಿ ಬಿದ್ದು ಅದರಲ್ಲಿದ್ದ ಭೌದ್ಧ ಭಿಕ್ಕು ತೆಂಜಿನ್ ನ್ಯಾಮಗಲ್ ಸಾವನ್ನಪ್ಪಿದ್ದಾರೆ. ಈ ಅಪಘಾತದಲ್ಲಿ ಆಟೋ ಚಾಲಕ ಹರೀಶ್ ಹಾಗೂ ಬೊಲೆರೋ ಜೀಪ್‌ನ ಚಾಲಕ ಹಾಗೂ ಅದರಲ್ಲಿದ್ದ ಮಹಿಳೆ ಗಾಯಗೊಂಡಿದ್ದಾರೆ.

ಮುಡಾ ವ್ಯಾಪ್ತಿ ಗ್ರಾಮಾಭಿವೃದ್ಧಿಗೆ ನೀಡಿದ್ದ ಒನ್ ಟೈಂ ಗ್ರಾಂಟ್‌ನಲ್ಲಿ ಉಳಿದ 44 ಕೋಟಿ ಬಳಕೆಗೂ ಸಂಪುಟ ಅಸ್ತು

ಮೈಸೂರು, ನ.16–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ವ್ಯಾಪ್ತಿಗೊಳಪಡುವ ಗ್ರಾಮಗಳ ಅಭಿವೃದ್ಧಿಗಾಗಿ ನೀಡಲಾಗಿದ್ದ ಒಂದು ಬಾರಿ ಅನುದಾನ (ಒನ್ ಟೈಂ ಗ್ರಾಂಟ್) 371 ಕೋಟಿ ರೂ.ಗಳಲ್ಲಿ ಉಳಿದಿರುವ 44 ಕೋಟಿ ರೂ.ಗಳನ್ನು ಸರ್ಕಾರ ಹಿಂದಕ್ಕೆ ಪಡೆಯದೆ ಅದನ್ನು ಕೂಡ ಮುಡಾ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಬಳಸಿಕೊಳ್ಳಲು ಸಚಿವ ಸಂಪುಟ ಅನುಮತಿ ನೀಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಹೇಳಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇಂದು ಪಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಸರ್ಕಾರದಿಂದ ಬಿಡುಗಡೆ ಯಾಗುವ ಒನ್ ಟೈಂ ಗ್ರಾಂಟ್‌ನಲ್ಲಿ ಖರ್ಚಾಗದೇ ಉಳಿದ ಹಣವನ್ನು ಸರ್ಕಾರಕ್ಕೆ ಹಿಂಪಡೆಯಲಾಗುತ್ತದೆ. ಆದರೆ ಮುಡಾದಲ್ಲಿ ಉಳಿದಿರುವ ಹಣವನ್ನು ಹಿಂಪಡೆಯದೆ ಮುಡಾ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಬಳಸಲು ಅನುಮತಿ ನೀಡಲಾಗಿದೆ ಎಂದರು.

ಸಂಪುಟ ಸಭೆಯಲ್ಲಿ 16 ವಿಷಯಗಳನ್ನು ಪರಿಶೀಲಿಸಲಾಯಿತು. ಕರ್ನಾಟಕ ನಾಗರಿಕ ಸೇವಾ ನಿಯಮ 16ಎ ತಿದ್ದುಪಡಿ ಮಾಡುವ ಬಗ್ಗೆ ಚರ್ಚೆ ನಡೆದಿದೆ. ಅದರಂತೆ ಗ್ರೂಪ್ ಸಿ, ಡಿ ಹುದ್ದೆಗಳು ಅಂತರ ಜಿಲ್ಲಾ ವರ್ಗಾವಣೆ ಆದಾಗ ಈಗ ಇರುವ ನಿಯಮದಂತೆ ಅವರ ಸೇವಾ ಹಿರಿತನದಿಂದ ಹಿಂದಕ್ಕೆ ಹೋಗಬೇಕಾಗುತ್ತದೆ. ಆದರೆ ಅಂತರ ಜಿಲ್ಲಾ ವರ್ಗಾವಣೆಯಾದರೂ ಸೇವಾ ಹಿರಿತನ ಮುಂದುವರೆಸಬೇಕು ಎಂಬ ಬೇಡಿಕೆಯಿತ್ತು. ಆದರೆ ಇದರ ಬಗ್ಗೆ ಯಾವುದೇ ನಿರ್ಣಯವಾಗಿಲ್ಲ ಎಂದರು. ಅಕ್ರಮ ಗಣಿಗಾರಿಕೆ ಸಂಬಂಧ ರಚಿಸಲಾಗಿದ್ದ ವಿಶೇಷ ತನಿಖಾ ತಂಡದ ಕಾರ್ಯ ವೈಖರಿ ಬಗ್ಗೆ ಸಭೆಯಲ್ಲಿ ಅಸಮಾಧಾನ ವ್ಯಕ್ತವಾಯಿತು. ಕಳೆದ 5 ವರ್ಷದಲ್ಲಿ ದಾಖಲಾಗಿರುವ 172 ಪ್ರಕರಣಗಳಲ್ಲಿ ಈವರೆಗೆ ಪ್ರಾಥಮಿಕ ತನಿಖೆ ಕೂಡ ಆಗಿಲ್ಲ. ಅದರ ಮೌಲ್ಯಮಾಪನ ವರದಿ ಕೂಡ ಸಲ್ಲಿಕೆಯಾಗಿಲ್ಲ. 10 ಕ್ರಿಮಿನಲ್ ಪ್ರಕರಣಗಳ ತನಿಖೆ ಬಾಕಿಯಿದೆ. ಈ ಹಿನ್ನೆಲೆ ಯಲ್ಲಿ ವಿಶೇಷ ತನಿಖಾ ತಂಡದ ಅವಧಿಯನ್ನು 2024ರ ಜೂನ್‌ವರೆಗೆ ವಿಸ್ತರಿಸಲಾಗಿದೆ ಎಂದರು.

ಬಿಬಿಎಂಪಿ ಹೊರತುಪಡಿಸಿ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್ ಕಾಮಗಾರಿ, ಕೆಟಿಪಿಪಿ ಕಾಯ್ದೆಯ ಕಲಂ 4ಜಿ ವಿನಾಯಿತಿ ನೀಡಲಾಗಿದೆ. ಬಿಬಿಎಂಪಿ ಹೊರತುಪಡಿಸಿ ಬೆಂಗಳೂರು ನಗರದ ಇತರ ಕಡೆಗಳಲ್ಲೂ ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡುವ ತೀರ್ಮಾನ ಕೈಗೊಳ್ಳಲಾಗಿದ್ದು, ಮೊದಲ ಹಂತದಲ್ಲಿ ನಿರ್ಮಿಸಲಾದ ವಿಧಾನದ ಮಾದರಿಯಲ್ಲಿ ಅನುಮೋದಿತ ವಿನ್ಯಾಸದಲ್ಲಿ ಕ್ಯಾಂಟೀನ್ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದ್ದು, 154 ಕೋಟಿ ರೂ. ವೆಚ್ಚದಲ್ಲಿ 188 ಇಂದಿರಾ ಕ್ಯಾಂಟಿನ್ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದೆ ಎಂದರು. ಆಹಾರ ಇಲಾಖೆಯ ಗೋದಾಮುಗಳಿಗೆ ಸಿಸಿ ಕ್ಯಾಮರಾ ಅಳವಡಿಸಲು ಸಂಪುಟ ಸಭೆ ನಿರ್ಣಯ ಕೈಗೊಂಡಿದ್ದು ಅದಕ್ಕಾಗಿ 12.24 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು.

ಬೇಕರಿ, ಹೋಟೆಲ್, ಬಿರಿಯಾನಿ ಸೆಂಟರ್‌ಗಳ ಮೇಲೆ ನಗರಸಭೆ ಸ್ಥಾಯಿ ಸಮಿತಿ ದಿಢೀರ್ ದಾಳಿ

ಅಶುಚಿತ್ವ, ಗುಣಮಟ್ಟದ ಪದಾರ್ಥ ಬಳಸದ ವ್ಯಾಪಾರಿಗಳಿಗೆ ದಂಡ



ಮಡಿಕೇರಿ, ನ.16– ಬಣ್ಣ, ಪರಿಮಳ ಮತ್ತು ರುಚಿಗೆ ಮಾರುಹೋಗುತ್ತಿರುವ ಗ್ರಾಹಕರ ಆರೋಗ್ಯ ಮತ್ತು ಹಿತ ಕಾಪಾಡುವಲ್ಲಿ ನಗರದ ಕೆಲವು ಬೇಕರಿಗಳು, ಹೋಟೆಲ್‌ಗಳು, ಬಿರಿಯಾನಿ ಸೆಂಟರ್‌ಗಳು ವಿಫಲವಾಗಿವೆ ಎಂಬ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಮಡಿಕೇರಿ ನಗರಸಭೆ ಸ್ಥಾಯಿ ಸಮಿತಿ ಮತ್ತು ಅಧಿಕಾರಿ ವರ್ಗ ದಿಢೀರ್ ದಾಳಿ ನಡೆಸಿ ಪರಿಶೀಲನೆ ನಡೆಸಿತು.

ಈ ವೇಳೆ ಅಶುಚಿತ್ವ, ಗುಣಮಟ್ಟದ ಪದಾರ್ಥಗಳನ್ನು ಬಳಸದಿರುವುದು, ಫ್ರಿಜ್‌ಗಳಲ್ಲಿ ವ್ಯವಸ್ಥಿತವಾಗಿ ಆಹಾರ ವಸ್ತುಗಳನ್ನು ಸಂಗ್ರಹಿಸದಿರುವುದು ಕಂಡು ಬಂತು. ಅಶುಚಿತ್ವ ಕಂಡು ಅಸಮಾಧಾನ ವ್ಯಕ್ತಪಡಿಸಿದ ಸ್ಥಾಯಿ ಸಮಿತಿ ಹಲವರಿಗೆ ಸ್ಥಳದಲ್ಲೇ 5 ಸಾವಿರ ರೂ. ದಂಡ ವಿಧಿಸಿತು. ಕೆಲವು ಕಡೆ ನಿಯಮ ಮೀರಿ ಪ್ಲಾಸ್ಟಿಕ್ ಬಳಸುತ್ತಿದ್ದ ಹಿನ್ನೆಲೆಯಲ್ಲಿ ಅವುಗಳನ್ನು ನಗರಸಭೆ ಸಿಬ್ಬಂದಿಗಳು ವಶಕ್ಕೆ ಪಡೆದರು.

ನಗರಸಭೆ ಸ್ಥಾಯಿ ಸಮಿತಿಯ ಅಧ್ಯಕ್ಷ ಎಸ್.ಸಿ. ಸತೀಶ್ ಅವರ ನೇತೃತ್ವದಲ್ಲಿ ಸದಸ್ಯರ ತಂಡ ಸರ್ಕಾರಿ ಬಸ್ ನಿಲ್ದಾಣ, ಇಂದಿರಾಗಾಂಧಿ ವೃತ್ತ ಮತ್ತು ಹಳೆಯ ಖಾಸಗಿ ಬಸ್ ನಿಲ್ದಾಣ ವ್ಯಾಪ್ತಿಯ ಹೋಟೆಲ್, ಬೇಕರಿ, ಬಿರಿಯಾನಿ ಸೆಂಟರ್‌ಗಳಿಗೆ ದಾಳಿ ನಡೆಸಿತು. ಶುಚಿತ್ವ ಕಾಪಾಡದಿದ್ದರೆ ಉದ್ಯಮಕ್ಕೆ ನಗರಸಭೆಯಿಂದ ನೀಡಲಾಗಿರುವ ಪರವಾನಗಿ ರದ್ದುಗೊಳಿಸುವುದಾಗಿ ಎಚ್ಚರಿಕೆ ನೀಡಲಾಯಿತು. ಪರಿ ಶೀಲನೆ ಸಂದರ್ಭ ಕೆಲವು ವ್ಯಾಪಾರಿಗಳು ಶುಚಿತ್ವಕ್ಕೆ ಆದ್ಯತೆ ನೀಡಿರುವುದಕ್ಕೆ ಸಮಿತಿ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ನಗರಸಭಾ ಸದಸ್ಯರುಗಳಾದ ಶ್ವೇತ ಪ್ರಶಾಂತ್, ಚಂದ್ರಶೇಖರ್, ನಗರಸಭೆಯ ಆರೋಗ್ಯ ಅಧಿಕಾರಿ ಸುರೇಶ್, ಇಂಜಿನಿಯರ್ ಸೌಮ್ಯ ಮತ್ತಿತರರು ಹಾಜರಿದ್ದರು.

ಬಾಳುಗೋಡಲ್ಲಿ ಕೊಡವ ನಮ್ಮೆಗೆ ವರ್ಣರಂಜಿತ ಚಾಲನೆ

4 ದಿನಗಳ ಪಂದ್ಯಾವಳಿಯಲ್ಲಿ 12 ಕೊಡವ ಸಮಾಜಗಳು ಭಾಗಿ



ಮಡಿಕೇರಿ, ನ.16– ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ಬಾಳುಗೋಡುವಿನಲ್ಲಿ ಆಯೋಜಿಸಲಾಗಿದ್ದ 11ನೇ ವರ್ಷದ ಕೊಡವ ನಮ್ಮೆಗೆ ವರ್ಣರಂಜಿತ ಚಾಲನೆ ದೊರೆತಿದೆ.

ಬಾಳುಗೋಡುವಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕೊಡವ ಸಾಂಸ್ಕೃತಿಕ ಕೇಂದ್ರ ಹಾಗೂ ಜನರಲ್ ತಿಮ್ಮಯ್ಯ ಕ್ರೀಡಾ ಕೇಂದ್ರದಲ್ಲಿ ನ.19ರವರೆಗೆ ನಡೆಯಲಿರುವ ಕೊಡವ ನಮ್ಮೆಗೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕೊಡವ ಸಾಂಸ್ಕೃತಿಕ ಕೇಂದ್ರದಲ್ಲಿ ಗುರುಕಾರೋಣರಿಗೆ, ಕೊಡಗಿನ ಕುಲದೇವಿ ಮಾತೆ ಕಾವೇರಿಗೆ ಹಾಗೂ ಇಗ್ಗುತ್ತಪ್ಪ ದೇವರಿಗೆ ಪೂಜೆ ಸಲ್ಲಿಸಲಾಯಿತು. ಕೊಡವ ಸಾಂಸ್ಕೃತಿಕ ಸಮುಚ್ಚಯದಲ್ಲಿರುವ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಪಂದ್ಯಾವಳಿ ಯಶಸ್ವಿಯಾಗಿ ನಡೆಯಲೆಂದು ಪ್ರಾರ್ಥಿಸಿ, ಮೈದಾನದಲ್ಲಿ ಪೂಜೆ ಸಲ್ಲಿಸಲಾಯಿತು.

ಪಂದ್ಯಾವಳಿ ಉದ್ಘಾಟನೆ: ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಹಾಕಿ ಸ್ಟಿಕ್‌ನಲ್ಲಿ ಚೆಂಡನ್ನು ತಳ್ಳುವ ಮೂಲಕ ಕೊಡವ ಸಮಾಜಗಳ ನಡುವಿನ ಹಾಕಿ ಪಂದ್ಯಾವಳಿಗೆ ಚಾಲನೆ ನೀಡಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಕೊಡವ ಸಮಾಜಗಳ ಒಕ್ಕೂಟದಿಂದ ಕಳೆದ 11 ವರ್ಷಗಳಿಂದ ಕೊಡವ ನಮ್ಮೆಯನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ. 2020 ಮತ್ತು 2021ರಲ್ಲಿ ಕೊರೊನಾದಿಂದಾಗಿ 2 ವರ್ಷ ಕೊಡವ ನಮ್ಮೆಯನ್ನು ಆಯೋಜಿಸಲಾಗಿರಲಿಲ್ಲ. 2022ರಲ್ಲಿ ಮತ್ತೇ ಕೊಡವ ನಮ್ಮೆಯನ್ನು ಆಚರಿಸಲಾಗಿದ್ದು, ಈ ವರ್ಷ ಅದ್ಧೂರಿಯಾಗಿ ನಾಲ್ಕು ದಿನಗಳ ಕಾಲ ಕೊಡವ ನಮ್ಮೆಯನ್ನು ಆಚರಿಸಲಾಗುತ್ತಿದೆ. 12 ಕೊಡವ ಸಮಾಜಗಳು ಹಾಕಿ ಪಂದ್ಯಾವಳಿಯಲ್ಲಿ ಪಾಲ್ಗೊಂಡಿವೆ ಎಂದರು.

ಎಲ್ಲಾ ಕೊಡವ ಸಮಾಜಗಳು ಒಂದೇ ವೇದಿಕೆಯಡಿ ಇರಬೇಕೆಂಬ ಉದ್ದೇಶದಿಂದ ಕೊಡವ ಸಮಾಜಗಳ ಒಕ್ಕೂಟವನ್ನು ಸ್ಥಾಪನೆ ಮಾಡಲಾಯಿತು. ಜಿಲ್ಲೆಯ 24 ಕೊಡವ ಸಮಾಜಗಳು ಹಾಗೂ ಹೊರ ಜಿಲ್ಲೆಯ 9 ಕೊಡವ ಸಮಾಜಗಳು ಸೇರಿದಂತೆ ಒಟ್ಟು 33 ಕೊಡವ ಸಮಾಜಗಳು ಒಕ್ಕೂಟದ ಸದಸ್ಯತ್ವ ಪಡೆದುಕೊಂಡಿವೆ. ಕೊಡವ ಸಮಾಜಗಳ ಒಕ್ಕೂಟಕ್ಕೆ ಅಂದಿನ ಕಂದಾಯ ಸಚಿವರಾಗಿದ್ದ ಶ್ರೀಕಂಠಯ್ಯ ಅವರು, 15 ಎಕರೆ ಜಾಗವನ್ನು ಮಂಜೂರು ಮಾಡಿದ್ದರು. ಜಾಗದ ನೋಂದಣಿಗೆ ಹಣವಿಲ್ಲದ ಸಂದರ್ಭ ಮುಲ್ಲೇಂಗಡ ದಾದ ಬೆಳ್ಯಪ್ಪ ಅವರು ಹಣವನ್ನು ಒದಗಿಸುವ ಮೂಲಕ ಜಾಗವನ್ನು ನೋಂದಣಿ ಮಾಡಲಾಯಿತು. ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪ ಅವರು 2 ಕೋಟಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ 3 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿದ್ದು, ಉಳಿದ 5 ಕೋಟಿಗಳನ್ನು ಒಕ್ಕೂಟದಿಂದ ಭರಿಸುವ ಮೂಲಕ ಸುಮಾರು 10 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಸಂಸದ ಪ್ರತಾಪ್ ಸಿಂಹ ಅವರು ನೀಡಿದ 40 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಟದ ಮೈದಾನವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ವಿವರಿಸಿದರು.

ಅನುದಾನ ಬಿಡುಗಡೆಗೆ ಮನವಿ: ಕೊಡವ ಅಭಿವೃದ್ಧಿ ನಿಗಮಕ್ಕೆ ಸರಕಾರ 10 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಗೊಳಿಸಿದೆ. ಇದರಲ್ಲಿ ಬಾಳುಗೋಡುವಿನ ಕೊಡವ ಸಾಂಸ್ಕೃತಿಕ ಕೇಂದ್ರದ ಅಭಿವೃದ್ಧಿಗೆ 6 ಕೋಟಿ, ಭಾಗಮಂಡಲದಲ್ಲಿ ಕೊಡವ ಸಮುದಾಯ ಭವನ ನಿರ್ಮಾಣಕ್ಕೆ 1 ಕೋಟಿ ಮತ್ತು 30 ಕೊಡವ ಸಮಾಜಗಳಿಗೆ ತಲಾ 10 ಲಕ್ಷದಂತೆ 3 ಕೋಟಿ ರೂಪಾಯಿಗಳನ್ನು ನೀಡಬೇಕಿದೆ. ಜಿಲ್ಲಾಧಿಕಾರಿಗಳ ಖಾತೆಯಲ್ಲಿರುವ ಅನುದಾನವನ್ನು ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ಜಿಲ್ಲೆಯ ರಾಜಕೀಯ ಧುರೀಣರು ಕ್ರಮವಹಿಸುವಂತೆ ವಿಷ್ಣು ಕಾರ್ಯಪ್ಪ ಮನವಿ ಮಾಡಿದರು.

ವೇದಿಕೆಯಲ್ಲಿ ಕೊಡವ ಸಮಾಜಗಳ ಒಕ್ಕೂಟದ ಕಾರ್ಯದರ್ಶಿ ವಾಟೇರಿರ ಶಂಕರಿ ಪೊನ್ನಪ್ಪ ಊಟೋಪಚಾರ ಸಮಿತಿ ಅಧ್ಯಕ್ಷ ಕುಂಬೇರ ಮನುಕುಮಾರ್, ಆಟೋಟ ಸಮಿತಿ ಅಧ್ಯಕ್ಷ ತಂಬುಕುತ್ತಿರ ಮಧು ಮಂದಣ್ಣ, ಸಂಚಾಲಕ ಕಂಬಿರಂಡ ಕಿಟ್ಟು ಕಾಳಪ್ಪ, ಪಂದ್ಯಾಟದ ತಾಂತ್ರಿಕ ಸಮಿತಿ ನಿರ್ದೇಶಕ ಅಚ್ಚಕಾಳೇರ ಪಳಂಗಪ್ಪ, ಸದಸ್ಯ ಪಟ್ಟಡ ಮನು ರಾಮಚಂದ್ರ, ಸಾಂಸ್ಕೃತಿಕ ಸಮಿತಿ ಸಂಚಾಲಕ ಬೊಳಿಯಂಗಡ ದಾದು ಪೂವಯ್ಯ ಸೇರಿದಂತೆ ವಿವಿಧ ಕೊಡವ ಸಮಾಜಗಳ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂಕಷ್ಟದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು

• ಸಮಸ್ಯೆ ಬಗೆಹರಿಸುವಂತೆ ಸರ್ಕಾರ, ಜನಪ್ರತಿನಿಧಿಗಳಲ್ಲಿ ಮನವಿ • ಹಳೇ ವಿದ್ಯಾರ್ಥಿಗಳ ಸಂಘದ ಸಭೆಯಲ್ಲಿ ಭಾರಿ ಚರ್ಚೆ



ಮಡಿಕೇರಿ, ನ.16– ನಗರದ ಫೀಲ್ಡ್ ಮಾರ್ಷಲ್ ಕೆ.ಎಂ ಕಾರ್ಯಪ್ಪ ಕಾಲೇಜು ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಕೊಡಗು ವಿಶ್ವವಿದ್ಯಾನಿಲಯ ನಡುವೆ ಸಿಲುಕಿ ಸಂಕಷ್ಟದಲ್ಲಿದೆ. ಈ ಸಮಸ್ಯೆ ಸರ್ಕಾರದ ಮಟ್ಟದಲ್ಲಿ ಪರಿಹಾರವಾಗಬೇಕಿದ್ದು, ಜನಪ್ರತಿನಿಧಿಗಳು ಈ ವಿಚಾರವಾಗಿ ಸಹಕರಿಸಬೇಕೆಂದು ಕೊಡಗು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ. ಅಶೋಕ್ ಸಂಗಪ್ಪ ಅಲೂರ್ ಮನವಿ ಮಾಡಿದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆ ಹಾಗೂ ಸಂತೋಷ ಕೂಟ ಇತ್ತೀಚೆಗೆ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕೊಡಗು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಅಶೋಕ್ ಸಂಗಪ್ಪ ಅಲೂರ್, ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ ಕ್ರಿಯಾಶೀಲವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೊಡಗು ವಿಶ್ವ ವಿದ್ಯಾನಿಲಯದಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಯಾವುದೇ ತೊಡಕಾಗದಂತೆ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ನಡೆಸಲಾಗುತ್ತಿದೆ. ಮಂಗಳೂರು ವಿ.ವಿ, ಕೊಡಗು ವಿ.ವಿ ಮತ್ತು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜುಗಳ ನಡುವೆ ಕೆಲವು ತಾಂತ್ರಿಕ ಬಿಕ್ಕಟ್ಟುಗಳಿದ್ದು, ಅವುಗಳು ಸರಕಾರದ ಮಟ್ಟದಲ್ಲಿ ಬಗೆಹರಿಯಬೇಕಿದೆ. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಸರಕಾರದ ಗಮನ ಸೆಳೆಯಬೇಕು ಎಂದು ಮನವಿ ಮಾಡಿದರು.

ಕಾಲೇಜಿನ ಪ್ರಾಂಶುಪಾಲ ಮೇಜರ್ ಡಾ.ರಾಘವ ಮಾತನಾಡಿ, ಹಳೆ ವಿದ್ಯಾರ್ಥಿ ಸಂಘ ಕಾಲೇಜಿನ ಚಟುವಟಿಕೆಗಳಿಗೆ ಅತ್ಯುತ್ತಮ ಬೆಂಬಲ ನೀಡುತ್ತಿದೆ. ಕಾಲೇಜಿನಲ್ಲಿ ಪ್ರಸ್ತುತ ಇರುವ ಸಮಸ್ಯೆಗಳಿಗೆ ಸರ್ಕಾರದಿಂದ ಸಿಗಬೇಕಿರುವ ಸವಲತ್ತು, ನೆರವು ಬರದಿರುವುದು ಬೇಸರದ ವಿಚಾರ ಎಂದು ವಿಷಾದ ವ್ಯಕ್ತಪಡಿಸಿದರು. ಕಾಲೇಜಿನಲ್ಲಿ ಈ ಹಿಂದೆ ಇದ್ದಂತಹ ಉಪನ್ಯಾಸಕರನ್ನು ವರ್ಗಾವಣೆಗೊಳಿಸಲಾಗಿದ್ದು, ಕಾಲೇಜಿಗೆ ಉಪನ್ಯಾಸಕರ ಕೊರತೆ ಕಾಡುತ್ತಿದೆ. ಆದರೆ ಇರುವ ಉಪನ್ಯಾಸಕರನ್ನು ಬಳಸಿಕೊಂಡು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ನಡೆಸಲಾಗುತ್ತಿದೆ ಎಂದು ಹೇಳಿದರು.

ನಿವೃತ್ತ ಪ್ರಾಂಶುಪಾಲರು ಹಾಗೂ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಪಾರ್ವತಿ ಅಪ್ಪಯ್ಯ ಮಾತನಾಡಿ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು 75 ವರ್ಷಗಳನ್ನು ಪೂರೈಸಿದೆ. ಇತ್ತೀಚೆಗೆ ಕಾಲೇಜಿನಲ್ಲಿ ಬಹಳಷ್ಟು ಸಮಸ್ಯೆಗಳು ಉದ್ಭವಿಸಿದ್ದು, ಸರ್ಕಾರದ ಮಟ್ಟದಲ್ಲಿ ಸಮಸ್ಯೆಗಳ ಪರಿಹಾರದ ಕುರಿತಂತೆ ಮಾತುಕತೆ ನಡೆಯುತ್ತಿದೆ. ಕಾಲೇಜಿನ ಸಮಸ್ಯೆಗಳ ಕುರಿತು ವಿವರವಾದ ಮಾಹಿತಿಯನ್ನು ಸರಕಾರಕ್ಕೂ ನೀಡಲಾಗಿದೆ. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ನೂತನ ಪ್ರಾಂಶುಪಾಲರು ಹಾಗೂ ಉಪಕುಲಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭ ರ‍್ಯಾಂಕ್ ಪಡೆದ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು. ರಸಪ್ರಶ್ನೆ ವಿಜೇತರು ಹಾಗೂ ಸೊಡರು ಪುಸ್ತಕ ವಿಮರ್ಶೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ನೀಡಲಾಯಿತು. ಹಳೇ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಬೊಳ್ಳಜಿರ ಅಯ್ಯಪ್ಪ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರವನ್ನು ಮಂಡಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಹಳೆ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

ಸುಂಟಿಕೊಪ್ಪದಲ್ಲಿ ಸರಣಿ ಕಳವು

ಸುಂಟಿಕೊಪ್ಪ, ನ.16– ಕಾಫಿ ಪುಡಿ ಅಂಗಡಿ ಹಾಗೂ ವಾಹನ ತರಬೇತಿ ಕೇಂದ್ರದ ಬೀಗ ಮುರಿದು ನುಗ್ಗಿ ನಗದು ಹಾಗೂ ಮೊಬೈಲ್ ದೋಚಿ ಪರಾರಿಯಾಗಿರುವ ಪ್ರಕರಣ ವರದಿಯಾಗಿದೆ.

ಸುಂಟಿಕೊಪ್ಪ ಉಲುಗುಲಿ ರಸ್ತೆಯ ಶ್ರೀ ಚಾಮುಂಡೇಶ್ವರಿ ಕಾಫಿ ವರ್ಕ್ಸ್‌ಗೆ ಬುಧವಾರ ರಾತ್ರಿ ವೇಳೆ ಬೀಗವನ್ನು ಮುರಿದು ಒಳ ನುಸುಳಿದ ಕಳ್ಳರು ನಗದು ಪೆಟ್ಟಿಗೆಯಲ್ಲಿದ್ದ 5 ಸಾವಿರ ರೂ ನಗದು ಹಾಗೂ ಅದರಲ್ಲಿದ್ದ ಬ್ಯಾಂಕ್ ಖಾತೆ ಪುಸ್ತಕಗಳನ್ನು ಅಪಹರಿಸಿದ್ದಾರೆ. ನಂತರ ಅಲ್ಲಿಂದ ತೆರಳಿದ ಕಳ್ಳರು ಅದೇ ರಸ್ತೆಯಲ್ಲಿದ್ದ ವೇದಾ ಮೋಟಾರ್ಸ್ ಡ್ರೈವಿಂಗ್ ಸ್ಕೂಲ್‌ಗೆ ತೆರಳಿ ಬೀಗವನ್ನು ಮುರಿದು ಗಲ್ಲಾಪೆಟ್ಟಿಗೆಯನ್ನು ತೆರೆಯಲಾಗದೆ ಅಲ್ಲಿದ್ದ ಮೊಬೈಲ್‌ನ್ನು ಕದ್ದೊಯ್ದಿದ್ದಾರೆ.

ಎಂದಿನಂತೆ ಬೆಳಗ್ಗೆ ಅಂಗಡಿ ಮಾಲೀಕರು ಮಳಿಗೆ ತೆರೆಯಲು ಮುಂದಾದಾಗ ಬೀಗ ಮುರಿದಿರುವುದು ಗೋಚರಿಸಿದೆ. ಅಂಗಡಿ ಮಾಲೀಕರು ದೂರು ನೀಡಿದ ಹಿನ್ನೆಲೆ ಸುಂಟಿಕೊಪ್ಪ ಪೊಲೀಸರು ಅಂಗಡಿಯನ್ನು ಪರಿಶೀಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರವಾಸೋದ್ಯಮ ಇಲಾಖೆಯ ನೂತನ ಡಿಡಿ ಅನಿತಾ ಭಾಸ್ಕರ್

ಮಡಿಕೇರಿ, ನ.16– ಕೊಡಗು ಜಿಲ್ಲೆ ಪ್ರವಾಸೋದ್ಯಮ ಇಲಾಖೆಯ ನೂತನ ಉಪ ನಿರ್ದೇಶಕರಾಗಿ ಅನಿತಾ ಭಾಸ್ಕರ್ ಅವರು ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಕಚೇರಿ ದೂರವಾಣಿ ಸಂಖ್ಯೆ 08272–200519 ಅನ್ನು ಸಂಪರ್ಕಿಸಬಹುದು ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಕೊಟ್ಟಿಗೆ ಗೊಬ್ಬರದ ಉಂಡೆಯಿಂದ ಹೊಡೆದಾಡಿಕೊಂಡ ಜನರು

ಗುಮಟಾಪುರದಲ್ಲಿ ಸಂಭ್ರಮ, ಸಡಗರದಿಂದ ಗೊರೆ ಹಬ್ಬ ಆಚರಣೆ



ಚಾಮರಾಜನಗರ, ನ.16– ಜಿಲ್ಲೆಯ ಗಡಿ ಹಾಗೂ ತಮಿಳುನಾಡಿನ ತಾಳವಾಡಿ ತಾಲೂಕು ವ್ಯಾಪ್ತಿಯ ಕನ್ನಡಿಗರೇ ಬಹುಸಂಖ್ಯೆಯಲ್ಲಿರುವ ಗುಮಟಾಪುರ ಗ್ರಾಮದಲ್ಲಿ ಗೊರೆ ಹಬ್ಬವು ಸಡಗರ, ಸಂಭ್ರಮದೊಂದಿಗೆ ನೆರವೇರಿತು.

ಕೊಟ್ಟಿಗೆ ಗೊಬ್ಬರವನ್ನು ಕಲೆಸಿ, ಉಂಡೆ ಮಾಡಿ ಪರಸ್ಪರ ಹೊಡೆದಾಡಿಕೊಳ್ಳುವುದು ಹಾಗೂ ಮನ ಬಂದಂತೆ ನಿಂದಿಸುವುದು ಈ ಹಬ್ಬದ, ಆಚರಣೆಯ ವಿಶೇಷ.

ಪ್ರತಿ ವರ್ಷದಂತೆಯೇ ಈ ಬಾರಿಯೂ ಸಂಭ್ರಮದೊಂದಿಗೆ ಹಬ್ಬ ನಡೆಯಿತು. ಗ್ರಾಮದಲ್ಲಿ ದೀಪಾವಳಿ ಹಬ್ಬದ ಬಲಿ ಪಾಡ್ಯಮಿಯ ಮಾರನೆ ದಿನ ಮಕ್ಕಳು, ಯುವಕರೆಲ್ಲ ಸೇರಿ ಗೊರೆಹಬ್ಬದಲ್ಲಿ ಭಾಗಿಯಾಗುವುದು ಇದರ ವೈಶಿಷ್ಟ್ಯ. ಅದರಂತೆ ಸಗಣಿಯಿಂದ ಹೊಡೆದಾಡಿಕೊಂಡರು.

ಹಬ್ಬದ ಅಂಗವಾಗಿ ಇಡೀ ಗ್ರಾಮ ತಳಿರು, ತೋರಣಗಳಿಂದ ಶೃಂಗಾರಗೊಂಡಿತ್ತು. ಈ ಸಂದರ್ಭದಲ್ಲಿ ಗ್ರಾಮದ ತುಂಬ ಉತ್ಸಾಹ ನೆಲೆಸಿತ್ತು. ಸಾವಿರಾರು ಮಂದಿ ಈ ಆಚರಣೆಗೆ ಸಾಕ್ಷಿಯಾದರು.

ಹಬ್ಬದ ಆಚರಣೆ ಹೇಗೆ: ಗ್ರಾಮದಲ್ಲಿರುವ ಗೋವುಗಳಿಂದ ಕಲೆ ಹಾಕಿದ ಸಗಣಿಯನ್ನು ತಂದು ದೇವಸ್ಥಾನದ ಬಳಿ ಸುರಿಯಲಾಗಿತ್ತು. ಮಕ್ಕಳು ಬೇರೆ ಮನೆಗಳಿಂದ ಬೇಡಿ ತಂದ ಎಣ್ಣೆಯಿಂದ ಪೂಜೆ ಸಲ್ಲಿಸಲಾಯಿತು. ಬಳಿಕ ಕಾರಪ್ಪ ದೇವರಿಗೆ ಪೂಜೆ ಸಲ್ಲಿಸುವುದು, ನಂತರ ಎರಡು ಕತ್ತೆಗಳಲ್ಲಿ ತಲಾ ಒಬ್ಬೊಬ್ಬರನ್ನು ಕೂರಿಸಿ ಗ್ರಾಮದ ಸುತ್ತ ಮೆರವಣಿಗೆ ಮಾಡುವುದು ವಾಡಿಕೆಯಾಗಿದ್ದು, ಅದರಂತೆ ಆಚರಣೆ ನಡೆಯಿತು.

ಕತ್ತೆ ಮೇಲೆ ಕೂರುವವರಿಗೆ ಕೊಂಡಿಕೆಕಾರ ಎಂದು ಹೆಸರಿಸಿ, ಆತನಿಗೆ ಹುಲ್ಲಿನಲ್ಲಿ ಮೀಸೆ, ಗಡ್ಡವನ್ನು ಕಟ್ಟಿ ಬೀರೇಶ್ವರನ ಗುಡಿವರೆಗೂ ಮೆರವಣಿಗೆಯಲ್ಲಿ ಕರೆತರಲಾಯಿತು. ಈ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಅಶ್ಲೀಲ ಪದಗಳಿಂದ ಮನಸೋಇಚ್ಛೆ ನಿಂದಿಸಿದ. ಇದು ಸಹ ಇಲ್ಲಿನ ವಿಶೇಷ. ನಂತರ ಹುಲ್ಲಿನ ಮೀಸೆಯನ್ನು ಸಗಣಿ ರಾಶಿಯಲ್ಲಿ ನೆಟ್ಟು, ಬೀರೇಶ್ವರನಿಗೆ ಪೂಜೆ ಸಲ್ಲಿಸಿ ಸಗಣಿಯಾಟವನ್ನು ಶುರು ಮಾಡಲಾಯಿತು.


ಈ ಆಚರಣೆ ಏಕೆ? ಗುಮಟಾಪುರ ತಮಿಳುನಾಡಿಗೆ ಸೇರಿದ್ದರೂ ಚಾ.ನಗರಕ್ಕೆ ಸಮೀಪದಲ್ಲಿದೆ. ಅಲ್ಲಿರುವ ಬಹುತೇಕ ಮಂದಿ ಕನ್ನಡಿಗರು. ಈ ಗ್ರಾಮದಲ್ಲಿ ಶತಮಾನಗಳ ಹಿಂದೆ ಗ್ರಾಮದ ಗೌಡನ ಮನೆಗೆ ಬೇರೆ ಗ್ರಾಮದ ವ್ಯಕ್ತಿಯೊಬ್ಬ ಕೆಲಸಕ್ಕೆ ಬರುತ್ತಾನೆ. ಕೆಲ ದಿನಗಳಲ್ಲೇ ಆತ ಮೃತಪಡುತ್ತಾನೆ. ಅವನ ಅಂತ್ಯಕ್ರಿಯೆ ನಂತರ ಆತನ ಜೋಳಿಗೆಯನ್ನು ತಿಪ್ಪೆಗೆ ಎಸೆಯಲಾಗುತ್ತದೆ. ಗೌಡನ ಎತ್ತಿನಗಾಡಿಯ ಚಕ್ರ ಆ ಜೋಳಿಗೆ ಮೇಲೆ ಹರಿಯುತ್ತದೆ. ತಕ್ಷಣ ಪಕ್ಕದಲ್ಲಿಯೇ ಇದ್ದ ಶಿವಲಿಂಗದಿಂದ ರಕ್ತ ಬರುತ್ತದೆ. ಅಂದು ರಾತ್ರಿ ದೇವರು ಕನಸಿನಲ್ಲಿ ಬಂದು ಈ ದೋಷ ಪರಿಹಾರಕ್ಕಾಗಿ ಗುಡಿ ಕಟ್ಟಿಸಬೇಕು. ದೀಪಾವಳಿ ಹಬ್ಬದ ಮರುದಿನ ಸಗಣಿ ಹಬ್ಬ ಆಚರಿಸಬೇಕು ಎಂದು ಗೌಡನಿಗೆ ಹೇಳಿತಂತೆ. ನಂತರದ ವರ್ಷದಿಂದ ಈ ಆಚರಣೆ ಶುರುವಾಯಿತು ಎಂಬುದು ಪ್ರತೀತಿ.

ದಾಸರಹುಂಡಿಯಿಂದ ಯುವಕ ನಾಪತ್ತೆ

ಚಾಮರಾಜನಗರ, ನ.16– ಚಾಮರಾಜನಗರ ತಾಲೂಕಿನ ದಾಸರಹುಂಡಿ ಗ್ರಾಮದ ನಿರಂಜನ್ (23) ಎಂಬ ಯುವಕ ಕಾಣೆಯಾಗಿದ್ದು, ಪ್ರಕರಣ ದಾಖಲಾಗಿದೆ. ಸುಳಿವು ಸಿಕ್ಕವರು ಚಾ.ನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ದೂ.ಸಂ. 08226–222243, ಚಾ.ನಗರ ಪೂರ್ವ ಪೊಲೀಸ್ ಠಾಣೆ ದೂ.ಸಂ. 08226–222058, ಮೊ.ಸಂ 9480804648, ಚಾಮರಾಜನಗರ ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ. 08226–222383 ಸಂಪರ್ಕಿಸುವಂತೆ ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಕರಿಕಲ್ಲು ಉದ್ಯಮಿ ಹೊನ್ನಳ್ಳಿ ಪಟೇಲ್ ಪುಟ್ಟಮಾದಯ್ಯ ನಿಧನ

ಚಾಮರಾಜನಗರ, ನ.16– ತಾಲೂಕಿನ ಹೊನ್ನಳ್ಳಿ ಗ್ರಾಮದ ವೀರಶೈವ ಮುಖಂಡರು ಹಾಗೂ ಕರಿಕಲ್ಲು ಉದ್ಯಮಿಗಳು ಆಗಿದಂತಹ ಪಟೇಲ್ ಪುಟ್ಟಮಾದಯ್ಯರವರು(79) ಅನಾರೋಗ್ಯದಿಂದ ಗುರುವಾರ ರಾತ್ರಿ ನಿಧನರಾಗಿದ್ದಾರೆ.



ಮೃತರು ಉಸಿರಾಟದ ತೊಂದರೆಯಿಂದ ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ರಾತ್ರಿ ಸುಮಾರು 9.30ರಲ್ಲಿ ಅವರು ನಿಧನರಾಗಿದ್ದಾರೆ. ಮೃತರು ಪುತ್ರರಾದ ಬಿಜೆಪಿ ಮುಖಂಡರಾದ ವೃಷಬೇಂದ್ರಸ್ವಾಮಿ ಹಾಗೂ ಪುತ್ರಿ ರಾಣಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಚಾಮರಾಜನಗರ ತಾಲೂಕು ಹೊನ್ನಳ್ಳಿ ಗ್ರಾಮದಲ್ಲಿ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೀರಯ್ಯನಪುರದ ವ್ಯಕ್ತಿ ನಾಪತ್ತೆ

ಚಾಮರಾಜನಗರ, ನ.16– ವೀರಯ್ಯನಪುರ ಗ್ರಾಮದ ನಿವಾಸಿಯಾದ ಕಿರಣ್ ಕುಮಾರ್ (33) ಅವರು ಕಾಣೆಯಾಗಿದ್ದು, ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಇವರ ಸುಳಿವು ದೊರೆತಲ್ಲಿ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ದೂ.ಸಂ. 08226–222243, ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ದೂ.ಸಂ. 08226–222058, 9480804648, ಚಾಮರಾಜನಗರ ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ. 08226–222383 ಸಂಪರ್ಕಿಸುವಂತೆ ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಗುಣಮಟ್ಟದ ಕಾಮಗಾರಿ ನಡೆಸಬೇಕು

ಲೋಕೋಪಯೋಗಿ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಸತೀಶ ಜಾರಕಿಹೊಳಿ ಸೂಚನೆ



ಚಾಮರಾಜನಗರ, ನ.16– ಚಾಮರಾಜನಗರ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಗುಣಮಟ್ಟದ ಕಾಮಗಾರಿ ನಡೆಯಬೇಕು. ಮುತುವರ್ಜಿಯಿಂದ ಕಾಮಗಾರಿ ನಿರ್ವಹಿಸಬೇಕು. ಅಭಿವೃದ್ಧಿ ಕಾಮಗಾರಿಗಳು ತ್ವರಿತವಾಗಿ ಆಗಬೇಕು ಎಂದು ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಲೋಕೋಪಯೋಗಿ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿ ಕುರಿತು ವಿವರವಾಗಿ ಪರಾಮರ್ಶಿಸಿದ ಸಚಿವರು ಇಲಾಖೆ ವತಿಯಿಂದ 2023–24ನೇ ಸಾಲಿನಲ್ಲಿ ನಿರ್ವಹಿಸಲಾಗಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಕುರಿತು ವಿಸ್ತೃತವಾಗಿ ವಿವರ ಪಡೆದರು.

ಹೆಲಿಪ್ಯಾಡ್, ರಸ್ತೆ ಅಭಿವೃದ್ಧಿ, ಕಟ್ಟಡ, ಸೇತುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯನ್ನು ಸಚಿವರು ಪರಿಶೀಲಿಸಿದರು. ಎಸ್.ಎಚ್.ಡಿ.ಪಿ ಕಾಮಗಾರಿ ಕೈಗೊಂಡಿರುವ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ಪ್ರಸ್ತುತ ಆಗಿರುವ ಪ್ರಗತಿಯನ್ನು ಪರಾಮರ್ಶಿಸಿದರು. ಮಲೆ ಮಹದೇಶ್ವರ ಬೆಟ್ಟದಲ್ಲಿ ಇಲಾಖೆ ವತಿಯಿಂದ ನಿರ್ವಹಿಸಲಾಗಿರುವ ಕಾರ್ಯಗಳ ಕುರಿತು ಪರಿಶೀಲಿಸಿದರು.

ಜಿಲ್ಲೆಯಲ್ಲಿ ಆಗಬೇಕಿರುವ ಹೊಸ ಕಾಮಗಾರಿಗಳ ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮಂಡಿಸಿದರು. ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿದ ಸಚಿವರು ಈ ನಿಟ್ಟಿನಲ್ಲಿ ಅಗತ್ಯ ಸೂಚನೆಗಳನ್ನು ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಮಾತನಾಡಿ, ಜಿಲ್ಲೆಯ ಪ್ರಮುಖ ಯಾತ್ರಾ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ರಸ್ತೆ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಪ್ರಸ್ತಾವ ಸಲ್ಲಿಸಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಎಚ್.ಎಂ. ಗಣೇಶ್ ಪ್ರಸಾದ್ ಅವರು ಸಹ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಬೇಕಿರುವ ರಸ್ತೆ, ಸೇತುವೆ ಇನ್ನಿತರ ಅಭಿವೃದ್ಧಿ ಕಾರ್ಯಗಳ ಸಂಬಂಧ ಸಚಿವರಲ್ಲಿ ಮನವಿ ಮಾಡಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಎಂಜಿನಿಯರ್ ವಿನಯ್ ಕುಮಾರ್, ಎಸ್.ಎಚ್.ಡಿ.ಪಿ ಅಧೀಕ್ಷಕ ಎಂಜಿನಿಯರ್ ಕೇಶವ ಪ್ರಸಾದ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಎಸ್.ಪಿ. ಮಹೇಶ್, ಗುಣನಿಯಂತ್ರಕ ಕಾರ್ಯಪಾಲಕ ಎಂಜಿನಿಯರ್ ಕೀರ್ತಿ, ತಾಂತ್ರಿಕ ಸಹಾಯಕರಾದ ಜಿ. ರಾಮಸ್ವಾಮಿ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸದಾಶಿವ ಮೂರ್ತಿ, ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ ಅವರು, ಆದ್ಯತೆ ಮೇರೆಗೆ ಇಲಾಖೆ ವತಿಯಿಂದ ಕಾಮಗಾರಿ ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ. ರಸ್ತೆ ದುರಸ್ತಿ ಕಾರ್ಯ ಪ್ರಗತಿಯಲ್ಲಿದ್ದು ಗುಂಡಿ ಮುಚ್ಚುವ ಕಾರ್ಯ ನಡೆಯುತ್ತಿದೆ. ಈ ತಿಂಗಳ ಅಂತ್ಯದೊಳಗೆ ಪ್ಯಾಚಪ್ ಕೆಲಸ ಪೂರ್ಣವಾಗಲಿದೆ ಎಂದರು. ಮಲೆ ಮಹದೇಶ್ವರ ಬೆಟ್ಟದ ರಸ್ತೆ, ಕಾಡಂಚಿನ ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಚರ್ಚಿಸಲಾಗಿದ್ದು, ಇದಕ್ಕೆ ಕ್ರಮ ವಹಿಸಲಾಗುವುದು. ವಿವಿಧ ಕಾರ್ಯಕ್ರಮದಡಿ ರಸ್ತೆ ಕಾಮಗಾರಿ ಕೈಗೊಳ್ಳಲಾಗುವುದು. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವಿವಿಧೆಡೆ ವಿಳಂಬವಾಗಿರುವುದು ಗಮನಕ್ಕೆ ಬಂದಿದೆ ಎಂದು ಅವರು ತಿಳಿಸಿದರು.

ಕನ್ನಡ ಉಳಿಸಿ– ಬೆಳೆಸುವುದು ನಮ್ಮೆಲ್ಲರ ಕರ್ತವ್ಯ: ಡಿಸಿ ಶಿಲ್ಪಾನಾಗ್



ಚಾಮರಾಜನಗರ, ನ.16– ಜಿಲ್ಲೆಯ ಅಭಿವೃದ್ಧಿ ಜನರ ಅಭಿವೃದ್ಧಿಯಾಗಿದ್ದು, ಜಿಲ್ಲೆಯ ಅಭಿವೃದ್ಧಿಯಲ್ಲಿ ಸಂಘ–ಸಂಸ್ಥೆಗಳು, ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದರು.

ನಗರದ ರೋಟರಿ ಭವನದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ಕರ್ನಾಟಕ ಏಕೀಕರಣ ಮಹೋತ್ಸವ ಮತ್ತು ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮ ಅಂಗವಾಗಿ ರಾಷ್ಟ್ರಕವಿ ಕುವೆಂಪು ಅವರ ಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ರಾಜ್ಯದಲ್ಲಿ ಸೇವೆ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯವಾಗಿದೆ. ನಮ್ಮ ಜಿಲ್ಲೆ, ನಮ್ಮ ಹೆಮ್ಮೆಯಾಗಿದ್ದು, ಜಿಲ್ಲೆಯ ಅಭಿವೃದ್ಧಿ ಯೋಜನೆ ರೂಪಿಸಲಾಗಿದೆ. ನನ್ನ ಅವಧಿಯಲ್ಲಿ ಜಿಲ್ಲೆಯನ್ನು ಮುಂದುವರಿದ ಜಿಲ್ಲೆಯಾಗಿಸಲು ಚಿಂತಿಸಲಾಗಿದೆ. ಜಿಲ್ಲೆಯಲ್ಲಿ ಒಳ್ಳೆಯ ವಾತಾವರಣವಿದ್ದು, ಜಿಲ್ಲೆಗೆ ರಾಜ್ಯ ಮಟ್ಟದ ಉನ್ನತ ಅಧಿಕಾರಿಗಳನ್ನು ಆಹ್ವಾನಿಸಲಾಗುತ್ತಿದೆ. ಎಲ್ಲ ಸಮಸ್ಯೆಗಳಿಗೂ ದೂರ ಗ್ರಾಮಗಳಿಂದ ನಮ್ಮ ಬಳಿ ಬರಬಾರದು. ಸ್ಥಳೀಯ ಮಟ್ಟದಲ್ಲಿ ಜನರ ಸಮಸ್ಯೆ ಬಗೆಹರಿಯಬೇಕು. ಚಾಮರಾಜನಗರ ಅಭಿವೃದ್ಧಿ ಜನರ ಅಭಿವೃದ್ಧಿಯಾಗಬೇಕು ಎಂದರು.

ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಕರ್ನಾಟಕ ಏಕೀಕರಣ ಹೋರಾಟಗಾರರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ. ಎಂ.ಆರ್.ಗಂಗಾಧರ್ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ಗೌರವಾಧ್ಯಕ್ಷ ಶಾ.ಮುರಳಿ ಪ್ರಶಸ್ತಿ ಪತ್ರ ವಿತರಿಸಿದರು. ಅಬ್ಕಾರಿ ಉಪ ಆಯುಕ್ತ ಆರ್.ನಾಗಶಯನ ವಿಚಾರ ಮಂಡನೆ ಮಾಡಿದರು. ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಾಣಿಜ್ಯ ಮತ್ತು ಗ್ರಾಮೀಣ ಕೈಗಾರಿಕೆ ಇಲಾಖೆ ಉಪನಿರ್ದೇಶಕ ಕೆ.ಎ.ರಾಜೇಂದ್ರಪ್ರಸಾದ್, ಪೌರಾಯುಕ್ತ ಎಸ್.ವಿ.ರಾಮದಾಸ್, ರೋಟರಿ ಸಂಸ್ಥೆ ಅಧ್ಯಕ್ಷ ಸಿ.ಎಸ್. ಚಂದ್ರಪ್ರಭಾಜೈನ್, ನಗರಸಭಾ ಮಾಜಿ ಸದಸ್ಯ ಗಣೇಶ್ ದೀಕ್ಷಿತ್, ಬಸವಾಪುರ ರಾಜಶೇಖರ್, ಸುರೇಶ್ ಗೌಡ, ಪುಟ್ಟಸ್ವಾಮಿಗೌಡ, ಕಾರ್ಯದರ್ಶಿ ಅಬ್ದುಲ್‌ಅಜೀಜ್ ದೀನಾ, ಮಹಾಸಭಾ ಪ್ರಧಾನ ಕಾರ್ಯದರ್ಶಿ ಚಾ.ವೆಂ.ರಾಜ್‌ಗೋಪಾಲ್, ಸಹ ಕಾರ್ಯದರ್ಶಿ ಪಣ್ಯದಹುಂಡಿ ರಾಜು, ಚಾ.ಹ.ರಾಮು, ನಿಜಧ್ವನಿ ಗೋವಿಂದರಾಜು, ಪ್ರಕಾಶ್ ಮೂಡ್ಲುಪುರ, ನಂಜುಂಡಸ್ವಾಮಿ, ತಾಂಡವಮೂರ್ತಿ, ಲಿಂಗರಾಜು, ರಾಜಪ್ಪ, ಚಾ.ಸಿ.ಸಿದ್ದರಾಜು ಇತರರು ಹಾಜರಿದ್ದರು.

ಜಮೀನಿನಲ್ಲಿ ಆಟೋ ಡಿಕ್ಕಿ: ರೈತ ಸಾವು

ಚಾಮರಾಜನಗರ, ನ.16– ಜಮೀನಿನಲ್ಲಿ ಟೊಮೆಟಾ ತುಂಬಿದ್ದ ಆಟೋ ಡಿಕ್ಕಿ ಹೊಡೆದು ರೈತ ಮೃತಪಟ್ಟಿರುವ ಘಟನೆ ತಾಲೂಕಿನ ತಮ್ಮಡಹಳ್ಳಿ ಗ್ರಾಮದಲ್ಲಿ ಗುರುವಾರ ಸಾಯಂಕಾಲ ನಡೆದಿದೆ.

ತಮ್ಮಡಹಳ್ಳಿ ಗ್ರಾಮದ ಕಡೆಹಟ್ಟಿ ಬಸವಣ್ಣ (70) ಮೃತಪಟ್ಟ ರೈತ. ಬಸವಣ್ಣ ತಮ್ಮ ಜಮೀನಿನಲ್ಲಿ ಬೆಳೆದಿದ್ದ ಟೊಮೆಟಾ ಅನ್ನು ಆಟೋಗೆ ತುಂಬಿಸುತ್ತಿದ್ದರು ಎನ್ನಲಾಗಿದೆ. ಈ ವೇಳೆ ಆಕಸ್ಮಿಕವಾಗಿ ಹಿಂಬದಿಯಿಂದ ಆಟೋ ಡಿಕ್ಕಿ ಹೊಡೆದಿದ್ದರಿಂದ ಬಸವಣ್ಣ ತೀವ್ರವಾಗಿ ಗಾಯಗೊಂಡರು ಎನ್ನಲಾಗಿದೆ. ತಕ್ಷಣವೇ ಅವರನ್ನು ನಗರದ ನೀಮ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಫಲಕಾರಿಯಾಗದೆ ಸಂಜೆ ಮೃತಪಟ್ಟರು.

ಮೃತರು ಪತ್ನಿ, ಪುತ್ರ ತಮ್ಮಡಹಳ್ಳಿ ರವಿಶಂಕರ್ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ತಮ್ಮಡಹಳ್ಳಿ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ ವಶಕ್ಕೆ ಪಡೆದ ಮುಡಾ

ಮೀನಾಮೇಷ ಎಣಿಸುತ್ತಿದ್ದ ಮುಡಾ ಮತ್ತೊಂದು 'ವಿವಾದ'ಕ್ಕೆ ಗುರಿಯಾಗುವುದರಿಂದ ಪಾರು



ಮೈಸೂರು, ನ.16– 51.64 ಲಕ್ಷ ರೂ. ಗುತ್ತಿಗೆ ಹಣ ಪಾವತಿಸದೇ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಗುತ್ತಿಗೆದಾರನಿಂದ ಮೈಸೂರಿನ ಹೆಬ್ಬಾಳ್‌ನ ಡಾ. ಅಂಬರೀಷ್ ರಸ್ತೆಯಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ ಅನ್ನು ಮುಡಾ ಅಧಿಕಾರಿಗಳು ತಮ್ಮ ವಶಕ್ಕೆ ಪಡೆದಿದ್ದಾರೆ.

ಮುಡಾದಿಂದ 5.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಈ ಕನ್ವೆನ್ಷನ್ ಹಾಲ್ ಅನ್ನು 2019ರ ಮಾರ್ಚ್ 17ರಂದು ವಾರ್ಷಿಕ 36 ಲಕ್ಷ ರೂ. ಪಾವತಿಸುವಂತೆ ಬೆಂಗಳೂರಿನ ಮೆ॥ ಸರ್ಕಾರ್ ಕನ್‌ಸ್ಟ್ರಕ್ಷನ್ಸ್ ಮಾಲೀಕ ಎಸ್.ಸಿದ್ದರಾಜಪ್ಪ ಗುತ್ತಿಗೆಗೆ ಪಡೆದಿದ್ದರು. ಒಂದು ವರ್ಷದ ಗುತ್ತಿಗೆ ಹಣವನ್ನು ಅವರು ಪಾವತಿಸಿದ್ದರಾದರೂ, 2020–21 ಮತ್ತು 2021–22ರ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕದಿಂದ ತನಗೆ ನಷ್ಟ ಉಂಟಾಗಿರುವ ಕಾರಣ ಸದರಿ ಸಾಲಿನ ಗುತ್ತಿಗೆ ಹಣ ಮನ್ನಾ ಮಾಡುವುದರ ಜೊತೆಗೆ ಗುತ್ತಿಗೆ ಅವಧಿಯನ್ನು ಮತ್ತೆ ಎರಡು ವರ್ಷ ವಿಸ್ತರಿಸುವಂತೆ ಮುಡಾಗೆ ಮನವಿ ಸಲ್ಲಿಸಿದ್ದರು.

ಅವರ ಮನವಿಗೆ ಸ್ಪಂದಿಸಿದ ಮುಡಾ 2022ರ ಜೂನ್ 22ರ ಸಭೆಯಲ್ಲೂ 2 ವರ್ಷದ ಗುತ್ತಿಗೆ ಹಣ ಮನ್ನಾ, ಜೊತೆಗೆ ಗುತ್ತಿಗೆಯನ್ನು ಮತ್ತೆ 2 ವರ್ಷ ವಿಸ್ತರಿಸಿತ್ತು. ಆದರೆ ಆನಂತರ ಸಿದ್ದರಾಜಪ್ಪ ಕನ್ವೆನ್ಷನ್ ಹಾಲ್‌ನಿಂದ ಕೋಟ್ಯಾಂತರ ರೂ. ಸಂಪಾದನೆ ಮಾಡುತ್ತಿದ್ದರೂ ಕೂಡ ಮುಡಾಗೆ ಗುತ್ತಿಗೆ ಹಣ ಪಾವತಿಸಿರಲಿಲ್ಲ. ಗುತ್ತಿಗೆ ಬಾಕಿ 40,85,378 ರೂ. ಹಾಗೂ ಬಡ್ಡಿ 10,78,907 ರೂ. ಸೇರಿದಂತೆ ಒಟ್ಟು 51,64,385 ರೂ. ಪಾವತಿಸುವಂತೆ ಮುಡಾ ವಲಯ ಕಚೇರಿ–4ರ ಅಧಿಕಾರಿ ಸಂಪತ್ ಕುಮಾರ್ ಅವರು ಹಲವು ಬಾರಿ ನೋಟಿಸ್ ನೀಡಿದರೂ, ಪ್ರಭಾವಿಯಾಗಿರುವ ಸಿದ್ದರಾಜಪ್ಪ, ಮುಡಾಗೆ ಹಣ ಪಾವತಿಸದೇ ಚಳ್ಳೆಹಣ್ಣು ತಿನ್ನಿಸುತ್ತಿದ್ದ. ಸಂಪತ್ ಕುಮಾರ್ ಅವರು ಕೊನೆಯದಾಗಿ ನವೆಂಬರ್ 6ರಂದು ನೋಟಿಸ್ ನೀಡಿ, ಗುತ್ತಿಗೆ ಬಾಕಿ ಹಣ ಪಾವತಿಸದಿದ್ದರೆ ಕನ್ವೆನ್ಷನ್ ಹಾಲ್ ಅನ್ನು ವಶಕ್ಕೆ ಪಡೆಯುವುದಾಗಿ ಎಚ್ಚರಿಕೆ ನೀಡಿದ್ದರು. ಆದರೂ ಕೂಡ ಸಿದ್ದರಾಜಪ್ಪ ಹಣ ಪಾವತಿಸದೇ ತನ್ನ ವರಸೆಯನ್ನು ತೋರಿದ್ದರು. ಈ ಸಂಬಂಧ ನವೆಂಬರ್ 16ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದೇ ದಿನ ಮುಡಾ ಆಯುಕ್ತ ಟಿ.ಜಿ.ದಿನೇಶ್ ಕುಮಾರ್ ನಿರ್ದೇಶನದಂತೆ ಮುಡಾ ವಲಯ ಕಚೇರಿ–4ರ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಂಪತ್ ಕುಮಾರ್ ನೇತೃತ್ವದಲ್ಲಿ ವಿಶೇಷ ತಹಸೀಲ್ದಾರ್ ರಾಜಶೇಖರ್, ರೆವಿನ್ಯೂ ಇನ್ಸ್‌ಪೆಕ್ಟರ್ ಮಂಜುನಾಥ್, ಅಸಿಸ್ಟೆಂಟ್ ಇಂಜಿನಿಯರ್ ಪವಿತ್ರಾ, ಸಿಬ್ಬಂದಿಗಳಾದ ಪ್ರವೀಣ್, ಪಾಪಣ್ಣ ಅವಿನಾಶ್, ಲೋಕೇಶ್ ಅವರು ಕನ್ವೆನ್ಷನ್ ಹಾಲ್‌ಗೆ ಬೀಗ ಮುದ್ರೆ ಹಾಕಿ ಮುಡಾ ವಶಕ್ಕೆ ಪಡೆದುಕೊಂಡರು.



ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಿ.ವೈ.ವಿಜಯೇಂದ್ರ ಅವರನ್ನು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿಗಳಾದ ಕಿರಣ್, ಜಯರಾಮೇಗೌಡ, ಹರೀಶ್ ಎಲೆಕ್ಟ್ರಿಕಲ್, ಶೇಖರ್ ಇಟ್ಟಿಗೆಗೂಡು ಇನ್ನಿತರರು ಅಭಿನಂದಿಸಿದರು.

ಮಾಜಿ ಶಾಸಕ ಡಾ. ಭಾರತಿಶಂಕರ್‌ಗೆ ಮಾತೃ ವಿಯೋಗ



ಮೈಸೂರು, ನ.16–ಮಾಜಿ ಶಾಸಕ ಡಾ. ಭಾರತಿಶಂಕರ್ ಅವರ ತಾಯಿ ಶ್ರೀಮತಿ ಎಂ.ಸರೋಜಮ್ಮ(85) ಅವರು ಇಂದು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ನಿವೃತ್ತ ಅಸಿಸ್ಟೆಂಟ್ ಕಮಿಷ್ನರ್ ದಿವಂಗತ ಎನ್.ಲಿಂಗಯ್ಯ ಅವರ ಪತ್ನಿ ಹಾಗೂ ಮಾಜಿ ಸಚಿವ ದಿವಂಗತ ಎಂ.ಮಲ್ಲಿಕಾರ್ಜುನಸ್ವಾಮಿಯವರ ಸಹೋದರಿಯೂ ಆದ ಸರೋಜಮ್ಮ ಅವರು, ಪುತ್ರರಾದ ಡಾ. ಭಾರತಿ ಶಂಕರ್, ಡಾ. ರಾಜೇಂದ್ರ ಕುಮಾರ್, ಡಾ. ಸುರೇಶ್ ಕುಮಾರ್, ರವೀಂದ್ರ ಕುಮಾರ್, ಪುತ್ರಿಯರಾದ ಪ್ರೇಮ ಕುಮಾರಿ, ಸ್ವರ್ಣ ಕುಮಾರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ರಾಜೇಂದ್ರನಗರದ ಕಾರ್ಪೋರೇಷನ್ ಸಮುದಾಯ ಭವನದ ಎದುರಿನಲ್ಲಿರುವ ಮನೆ ಸಂಖ್ಯೆ 45ರಲ್ಲಿ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇಡಲಾಗಿದೆ. ಎನ್.ಆರ್.ಮೊಹಲ್ಲಾದ ಹಿಂದೂ ರುದ್ರಭೂಮಿಯಲ್ಲಿ ನಾಳೆ (ನ.17) ಮಧ್ಯಾಹ್ನ 12 ಗಂಟೆಯ ನಂತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರಿನ ವಾರ್ಡ್ ಸಂಖ್ಯೆ 6ರ ಗೋಕುಲಂ ಬಡಾವಣೆಯ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅವರು ಪೌರ ಕಾರ್ಮಿಕರೊಂದಿಗೆ ವಾರ್ಡ್‌ನ ಸ್ವಚ್ಛತೆ ಬಗ್ಗೆ ಚರ್ಚಿಸಿದ್ದಲ್ಲದೆ, ಅವರೊಂದಿಗೆ ಉಪಾಹಾರ ಸೇವಿಸಿದರು. ಈ ವೇಳೆ ಮೇಸ್ತ್ರಿಗಳಾದ ಬಾಬು, ಕಮಲ್ ಇನ್ನಿತರರಿದ್ದರು.

ನ.19 ರಂದು ರಾಜ್ಯಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆ ಪ್ರಕ್ರಿಯೆ

ಮೈಸೂರು, ನ.16(ಎಂಕೆ)– ಬಾಗಲಕೋಟೆಯಲ್ಲಿ ನ.24 ಮತ್ತು 25ರಂದು ನಡೆಯುವ 14ನೇ ರಾಜ್ಯಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ಗೆ ಮೈಸೂರು ಜಿಲ್ಲೆ ಪ್ರತಿನಿಧಿಸುವ ಸೈಕ್ಲಿಸ್ಟ್‌ಗಳ ಆಯ್ಕೆಗಾಗಿ ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ವತಿಯಿಂದ ನ.19 ರಂದು ಬೆಳಗ್ಗೆ 9.30ಕ್ಕೆ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ದೇವಸ್ಥಾನದ ಬಳಿ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಚಾಂಪಿಯನ್‌ಶಿಪ್‌ನಲ್ಲಿ 14, 16 ಮತ್ತು 18 ವರ್ಷದೊಳಗಿನ ಬಾಲಕ–ಬಾಲಕಿಯರು ಹಾಗೂ 23 ವರ್ಷದೊಳಗಿನ ಪುರುಷ ಹಾಗೂ ಮಹಿಳಾ ಸೈಕ್ಲಿಸ್ಟ್‌ಗಳು ಭಾಗವಹಿಸಲು ಅವಕಾಶವಿದ್ದು, ಆಸಕ್ತ ಸೈಕ್ಲಿಸ್ಟ್‌ಗಳ ನ.18ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ನಂ.8884851538, ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಮೊ.ನಂ.9986973280 ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾನಸ ಗಂಗೋತ್ರಿಯ ಪಾರಂಪರಿಕ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಆವರಣದಲ್ಲಿ ಸಿನಿಮಾ ಚಿತ್ರೀಕರಣ ವೇಳೆ ಅವಾಂತರ

ರಸ್ತೆಯಲ್ಲೆಲ್ಲಾ ಮಣ್ಣು ಸುರಿದು, ಗಂಧದಮರಗಳನ್ನು ಕತ್ತರಿಸಿದ ಚಿತ್ರತಂಡದ ವಿರುದ್ಧ ಮೈಸೂರು ವಿವಿ, ಪರಿಸರ ಪ್ರೇಮಿಗಳಿಂದ ಅರಣ್ಯ ಇಲಾಖೆಗೆ ಪ್ರತ್ಯೇಕ ದೂರು





ಮೈಸೂರು, ನ.16(ಆರ್‌ಕೆ)– ಚಲನ ಚಿತ್ರವೊಂದರ ಚಿತ್ರೀಕರಣಕ್ಕಾಗಿ ಚಿತ್ರ ತಂಡವು ಮೈಸೂರಿನ ಮಾನಸ ಗಂಗೋತ್ರಿಯ ಪಾರಂಪರಿಕ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಆವರಣದಲ್ಲಿ ಮಣ್ಣು ಸುರಿದು, ಅಲ್ಲಿ ಬೆಳೆದಿದ್ದ 3 ಗಂಧದ ಮರಗಳನ್ನು ಕತ್ತರಿಸಿ, ಪರಿಸರ ಹಾಳು ಮಾಡಿದೆ.

ಇದರಿಂದ ಸಿಟ್ಟಿಗೆದ್ದ ಪರಿಸರ ಪ್ರೇಮಿಗಳು ಚಿತ್ರತಂಡದವರನ್ನು ತರಾಟೆ ತೆಗೆದುಕೊಂಡಿದ್ದಲ್ಲದೆ, ಅರಣ್ಯ ಇಲಾಖೆಗೆ ಲಿಖಿತ ದೂರು ನೀಡಿದ್ದಾರೆ. ಅಲ್ಲದೆ ಮೈಸೂರು ವಿಶ್ವ ವಿದ್ಯಾನಿಲಯದ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಅರಣ್ಯ ಇಲಾಖೆಗೆ ಪ್ರತ್ಯೇಕ ದೂರು ನೀಡಿ, ಕ್ರಮಕ್ಕೆ ಆಗ್ರಹಿಸಿದ್ದಾರೆ.

'ಪ್ರಚಂಡ ತರುಣಂ ಕಾಂಟಿನ್ಯ ಕಾವ್ಯಂ' ಚಿತ್ರದ ಶೂಟಿಂಗ್‌ಗೆ ಈ ಜಾಗವನ್ನು ಬಾಡಿಗೆಗೆ ಪಡೆದಿದ್ದ ಚಿತ್ರತಂಡವು, ಮನಸೋ ಇಚ್ಛೆ ಕೆಂಪು ಮಣ್ಣಿನ ರಾಶಿಯನ್ನು ಪಾರಂಪರಿಕ ಕಟ್ಟಡದ ಆವರಣ ಹಾಗೂ ರಸ್ತೆ ಮೇಲೆಲ್ಲಾ ಹರಡಿ ಕುಸ್ತಿ ಅಖಾಡವಾಗಿ ಪರಿವರ್ತಿಸಿಕೊಂಡಿತ್ತು. ಅಲ್ಲದೆ ಅಲಂಕಾರಕ್ಕಾಗಿ ಗಂಧದಮರಗಳು ಹಾಗೂ ಇನ್ನಿತರ ಮರದ ರೆಂಬೆಗಳನ್ನು ಕತ್ತರಿಸಿ ಪರಿಸರ ಹಾಳು ಮಾಡಿದ್ದು, ವಾಯು ವಿಹಾರಿಗಳು, ಪರಿಸರ ಪ್ರೇಮಿಗಳು ಹಾಗೂ ಪಾರಂಪರಿಕ ತಜ್ಞರ ಕೆಂಗಣ್ಣಿಗೆ ಗುರಿಯಾಗಿದೆ.

ಶುಕ್ರವಾರ ಬೆಳಗ್ಗೆ ವಾಯು ವಿಹಾರಕ್ಕೆ ತೆರಳಿದ್ದ ಪಾರಂಪರಿಕ ತಜ್ಞ ಪ್ರೊ.ಎನ್.ಎಸ್. ರಂಗರಾಜು, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಮಾಸ್ಟರ್ ಅಥ್ಲೆಟ್ ಎಂ.ಯೋಗೇಂದ್ರ ಮಾಜಿ ಕಾರ್ಪೋರೇಟರ್ ಆರ್.ದೇವರಾಜ್ ಹಾಗೂ ಇತರರು, ಇಂದು ಬೆಳಗ್ಗೆ 7 ಗಂಟೆ ವೇಳೆಗೆ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಬಳಿ ಕೆಂಪು ಮಣ್ಣಿನ ರಾಶಿ ಕಂಡು ಕೆಂಡಾಮಂಡಲವಾದರು.

ಡಾಂಬರ್ ರಸ್ತೆ ಮೇಲೂ ಮಣ್ಣು ಹರಡಿ ಕುಸ್ತಿ ಅಖಾಡವನ್ನಾಗಿ ಮಾಡಿದ್ದ ಚಿತ್ರೀಕರಣ ತಂಡವು ಅಲ್ಲಿನ ಗಂಧದ ಮರಗಳನ್ನೂ ಕತ್ತರಿಸಿ ಮಣ್ಣಿನ ಸುತ್ತ ಅಲಂಕಾರಕ್ಕೆ ನೆಟ್ಟಿರುವುದನ್ನು ಕಂಡು ತೀವ್ರ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಪಾರಂಪರಿಕ ಕಟ್ಟಡದ ಗೇಟ್‌ಗೆ ಬೀಗ ಜಡಿದರು.

ನಂತರ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ವಿ.ಆರ್.ಶೈಲಜಾ, ಕಾರ್ಯಪಾಲಕ ಇಂಜಿನಿಯರ್, ತೋಟಗಾರಿಕಾ ವಿಭಾಗದ ಸಹಾಯಕ ನಿರ್ದೇಶಕ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಮಾನಸ ಗಂಗೋತ್ರಿಯ ಸೌಂದರ್ಯ ಹಾಳು ಮಾಡಿರುವ ಚಿತ್ರತಂಡದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರಲ್ಲದೇ, ಅರಣ್ಯಾಧಿಕಾರಿಗಳನ್ನು ಕರೆಸಿಕೊಂಡು ಶ್ರೀಗಂಧದ ಮರ ಕಡಿದಿರುವ ಬಗ್ಗೆ ಲಿಖಿತ ದೂರು ನೀಡಿ ತಪ್ಪಿತಸ್ಥರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸುವಂತೆ ಒತ್ತಾಯಿಸಿದರು. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಗಂಧದಮರಗಳನ್ನು ವಶಪಡಿಸಿಕೊಂಡರು.

ಷರತ್ತುಗಳು ಕಾಗದಕ್ಕೆ ಸೀಮಿತ: ಚಿತ್ರೀಕರಣಕ್ಕಾಗಿ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಆವರಣಕ್ಕೆ ನವೆಂಬರ್ 15ರಿಂದ 18ರವರೆಗೆ ಬೆಳಗ್ಗೆ 6 ರಿಂದ ಸಂಜೆ 6 ಗಂಟೆವರೆಗೆ ಹಾಗೂ ನವೆಂಬರ್ 27ರಿಂದ 30ರವರೆಗೆ ಸಂಜೆ 6 ರಿಂದ ಮುಂಜಾನೆ 2 ಗಂಟೆವರೆಗೆ 35,000 ರೂ. ದಿನವಹಿ ಬಾಡಿಗೆ ಪಡೆದು ಮೈಸೂರು ವಿಶ್ವವಿದ್ಯಾನಿಲಯವು ಬೆಂಗಳೂರಿನ ಶ್ರೀ ಹರ್ಷಿತಾ ಮೂವೀಸ್ ಸಂಸ್ಥೆಗೆ 19 ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿದೆ. ಆದರೆ ಷರತ್ತುಗಳೆಲ್ಲಾ ಕಾಗದಕ್ಕೆ ಸೀಮಿತವಾದಂತಿದೆ. ಚಿತ್ರತಂಡವು ಷರತ್ತುಗಳನ್ನು ಉಲ್ಲಂಘಿಸಿದೆ. ಚಿತ್ರೀಕರಣಕ್ಕಾಗಿ ಗಂಗೋತ್ರಿಯ ಸೌಂದರ್ಯವನ್ನು ಹಾಳು ಮಾಡಿ ಆಸ್ತಿಗಳಿಗೂ ಹಾನಿ ಉಂಟು ಮಾಡಿರುವುದರಿಂದ ಸಂಬಂಧಪಟ್ಟವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ವಾಯುವಿಹಾರಿಗಳು ಒತ್ತಾಯಿಸಿದ್ದಾರೆ.

ಕಳೆದ ರಾತ್ರಿಯೇ ಮಣ್ಣು ಸುರಿದು ಕುಸ್ತಿ ಅಖಾಡದ ದೃಶ್ಯ ಚಿತ್ರೀಕರಿಸಿದ್ದ ತಂಡವು, ಇಂದು ಬೆಳಗ್ಗೆಯೂ ಶೂಟಿಂಗ್ ಮಾಡಲು ತಯಾರಿ ನಡೆಸುತ್ತಿತ್ತಾದರೂ, ಪ್ರತಿಭಟನಾಕಾರರನ್ನು ಕಂಡು ಸಿನಿಮಾ ಉಪಕರಣಗಳೊಂದಿಗೆ ಸಿಬ್ಬಂದಿಗಳು ಅಲ್ಲಿಂದ ಕಾಲ್ಕಿತ್ತರು. ವಿವಾದ ಉಂಟಾದ ಹಿನ್ನೆಲೆಯಲ್ಲಿ ಇಂದಿನ ಚಿತ್ರೀಕರಣವನ್ನು ರದ್ದುಪಡಿಸಿ ತಂಡವು ಜಾಗ ಖಾಲಿ ಮಾಡಿದರು. ಅಲ್ಲದೆ ಅಲ್ಲಿ ಹರಡಿದ್ದ ಮಣ್ಣಿನ ರಾಶಿ ತೆರವುಗೊಳಿಸಿ ಸ್ಥಳವನ್ನು ಸ್ವಚ್ಛಗೊಳಿಸಿದರು. ಮಾನಸ ಗಂಗೋತ್ರಿ ಆವರಣ ವಿರೂಪಗೊಂಡಿರುವುದು ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲೇ ಇದೇ ಮೊದಲನೆಯದು ಎಂದು ಪ್ರತಿಭಟನಾಕಾರರು ತೀವ್ರ ಬೇಸರ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆಗೆ ದೂರು; ಅನುಮತಿ ರದ್ದು



"ಸಿನೆಮಾ ಚಿತ್ರೀಕರಣಕ್ಕಾಗಿ ಆಸ್ತಿ–ಪಾಸ್ತಿಗೆ ಹಾನಿ ಉಂಟು ಮಾಡಬಾರದು, ಪರಿಸರ, ಸೌಂದರ್ಯಕ್ಕೆ ಧಕ್ಕೆಯಾಗಬಾರದು ಎಂಬುದೂ ಸೇರಿದಂತೆ 19 ಷರತ್ತುಗಳನ್ನು ವಿಧಿಸಿ ಅನುಮತಿ ನೀಡಲಾಗಿತ್ತು. ಆದರೆ ಸಂಸ್ಥೆಯು ಷರತ್ತು ಉಲ್ಲಂಘಿಸಿ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಪಾರಂಪರಿಕ ಕಟ್ಟಡದ ಸೌಂದರ್ಯಕ್ಕೆ ಧಕ್ಕೆ ಉಂಟು ಮಾಡಿದ್ದಲ್ಲದೆ, ಶ್ರೀಗಂಧದ ಮರ ಕಡಿದಿರುವುದರಿಂದ ಅವರ ವಿರುದ್ಧ ದೂರು ದಾಖಲಿಸಲಾಗಿದೆ. ಅವರಿಗೆ ನೀಡಿದ್ದ ಅನುಮತಿ ರದ್ದುಪಡಿಸಿ, ಪಾವತಿಸಿದ್ದ ಬಾಡಿಗೆ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಮಣ್ಣನ್ನು ತೆರವುಗೊಳಿಸಿ ಸ್ವಚ್ಛಗೊಳಿಸಲಾಗಿದೆಯಲ್ಲದೆ, ಉಂಟಾಗಿರುವ ನಷ್ಟ ಭರಿಸುವಂತೆ ನೋಟಿಸ್ ಜಾರಿ ಮಾಡಲಾಗಿದೆ.

- ಪ್ರೊ. ಎನ್.ಕೆ.ಲೋಕನಾಥ್,
ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ

ರಾಜ್ಯಮಟ್ಟದ ಕರಾಟೆ ಪಟುಗಳಿಗೆ ಬಹುಮಾನ ವಿತರಣೆ



ಮೈಸೂರು, ನ.16(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಪದವಿ ಪೂರ್ವ ಕಾಲೇಜಿನಲ್ಲಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಸಹಯೋಗದಲ್ಲಿ ನಡೆದ ರಾಜ್ಯ ಮಟ್ಟದ ಬಾಲಕ, ಬಾಲಕಿಯರ ಕರಾಟೆ ಪಂದ್ಯಾವಳಿಯಲ್ಲಿ ವಿಜೇತ ಕರಾಟೆ ಪಟುಗಳಿಗೆ ಗುರುವಾರ ಬಹುಮಾನ ವಿತರಿಸಿ, ಅಭಿನಂದಿಸಲಾಯಿತು.

ಬಾಲಕಿಯರ 64 ಕೆ.ಜಿ ವಿಭಾಗದಲ್ಲಿ ಮೈಸೂರಿನ ಇಶಾ ಷಣ್ಮುಗಂ ದ್ವಿತೀಯ, 60 ಕೆ.ಜಿ ವಿಭಾಗದಲ್ಲಿ ಕಾಶ್ವಿ ಸುರೇಶ್ ತೃತೀಯ 68 ಕೆ.ಜಿ ವಿಭಾಗದಲ್ಲಿ ಬಿ.ಎಸ್.ವರ್ಷಿಣಿ ತೃತೀಯ, ಬಾಲಕರ 45 ಕೆ.ಜಿ ವಿಭಾಗದಲ್ಲಿ ತರುಣ್‌ಕುಮಾರ್ ದ್ವಿತೀಯ, 50 ಕೆ.ಜಿ ವಿಭಾಗದಲ್ಲಿ ಎಲ್.ಸುಪ್ರೀತ್ ದ್ವಿತೀಯ, 66 ಕೆ.ಜಿ ವಿಭಾಗದಲ್ಲಿ ಎಂ.ಗುಣಶೇಖರ್ ತೃತೀಯ, 70 ಕೆ.ಜಿ ವಿಭಾಗದಲ್ಲಿ ಮೊಹಮ್ಮದ್ ಉಸ್ಮಾನ್ ದ್ವಿತೀಯ, 74 ಕೆ.ಜಿ ವಿಭಾಗದಲ್ಲಿ ವೈ.ಶ್ರೇಯಸ್ ದ್ವಿತೀಯ ಬಹುಮಾನ ಜಯಿಸಿದರು.

ಹಾಗೆಯೇ ವಿವಿಧ ವಿಭಾಗಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಭಾಗವಹಿಸಿದ್ದ ಕರಾಟೆ ಪಟುಗಳು ಬಹುಮಾನ ಗೆದ್ದು ಸಂಭ್ರಮಿಸಿದರು. ಕಡೆಯಲ್ಲಿ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಪ್ರಭಾರ ಉಪ ನಿರ್ದೇಶಕ ಮೋಹನ್ ಕುಮಾರ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಮೈಸೂರು ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಕಾರ್ಯದರ್ಶಿ ಎಸ್.ಸೋಮಶೇಖರ್, ಎ.ಸಿ.ಮಂಜೇಗೌಡ, ವಿಜಯ ವಿಠಲ ಶಿಕ್ಷಣ ಸಂಸ್ಥೆ ಟ್ರಸ್ಟಿ ಕೆ.ಎನ್.ಪ್ರಸಾದ್, ವಿಜಯ ವಿಠಲ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಸತ್ಯಪ್ರಸಾದ್ ಮತ್ತಿತರರಿದ್ದರು.

ಕೌಟುಂಬಿಕ ಕಲಹದಿಂದ ಪತಿ ಆತ್ಮಹತ್ಯೆ




ನಂಜನಗೂಡು, ನ.16–ಕೌಟುಂಬಿಕ ಕಲಹದಿಂದ ಪತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ತಾಲೂಕಿನ ವರುಣ ಕ್ಷೇತ್ರದ ಹದಿನಾರುಮೋಳೆ ಗ್ರಾಮದಲ್ಲಿ ನಡೆದಿದೆ.


ಗ್ರಾಮದ ಮಾದೇಶ್(34) ಆತ್ಮಹತ್ಯೆ ಮಾಡಿಕೊಂಡಿದ್ದು, ಪತಿ ಮತ್ತು ಪತ್ನಿ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು ಇಬ್ಬರ ನಡುವೆ ಸಾಮರಸ್ಯ ಇರಲಿಲ್ಲ. ಇದರಿಂದ ಮನನೊಂದು ಮಾದೇಶ್ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪಿಎಸ್‌ಐ ಕೆ.ಗೋಪಾಲ್ ಕೃಷ್ಣ, ಸಿಬ್ಬಂದಿ ಬರ್ಮಪ್ಪ, ನಾಗೇಶ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮಿಳ್ನಾಡಿಗೆ ನೀರು ಬಿಡದಿದ್ದರೆ; ಜಲಾಶಯದ ನೀರನ್ನು ಕುಡಿಯಲು ಮೀಸಲಿಟ್ಟರೆ

ಮೈಸೂರಿಗೆ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇಲ್ಲ

● ಮೋಹನ್ ಕಾಯಕ





ಮೈಸೂರು, ನ.16– ಬರಗಾಲದಿಂದಾಗಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗುತ್ತಿದ್ದು, ಮೈಸೂರಿಗರು ಕುಡಿಯುವ ನೀರನ್ನು ಮಿತವಾಗಿ ಬಳಸಿದರೆ ಮಾತ್ರವೇ ಮುಂದಿನ ವರ್ಷದ ಜೂನ್ ತಿಂಗಳವರೆಗೆ ಸಮಸ್ಯೆ ಇಲ್ಲ...!

ಹೌದು! ಪ್ರಸಕ್ತ ವರ್ಷದ ಮುಂಗಾರು ಹಾಗೂ ಹಿಂಗಾರು ಮಳೆ ಕೊರತೆಯಿಂದಾಗಿ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಕೆಆರ್‌ಎಸ್ ಹಾಗೂ ಕಬಿನಿಯಲ್ಲಿರುವ ನೀರನ್ನು ಕುಡಿಯಲಷ್ಟೇ ಬಳಕೆ ಮಾಡಿದರೆ, ಮುಂದಿನ ವರ್ಷದ ಮಳೆಗಾಲ ಆರಂಭದವರೆಗೂ ಕುಡಿಯುವ ನೀರಿಗೆ ತೊಂದರೆ ಎದುರಾಗುವುದಿಲ್ಲ. ಆದರೆ, ಇದರ ನಡುವೆ ಕೃಷಿಗೆ ಹಾಗೂ ತಮಿಳುನಾಡಿಗೆ(ಕಾವೇರಿಯಿಂದ) ನೀರು ಹರಿಸಿದರೆ ಪರಿತಪಿಸಬೇಕಾಗುತ್ತದೆ.

ಸದ್ಯ 10 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರತಿನಿತ್ಯ ಬೆಳಗೊಳ ಜಲಸಂಗ್ರಹಣಾ ಘಟಕದಿಂದ 45 ಎಂಎಲ್‌ಡಿ (ಮಿಲಿಯನ್ ಲೀಟರ್ ಪರ್ ಡೇ), ಹೊಂಗಳ್ಳಿ 2ನೇ ಹಂತದಿಂದ 44 ಎಂಎಲ್‌ಡಿ, ಹೊಂಗಳ್ಳಿ 3ನೇ ಹಂತದಿಂದ 65 ಎಂಎಲ್‌ಡಿ, ಮೇಳಾಪುರದಿಂದ 98 ಎಂಎಲ್‌ಡಿ, ಕಬಿನಿಯಿಂದ 65 ಎಂಎಲ್‌ಡಿ ಸೇರಿ ಒಟ್ಟು 317 ಎಂಎಲ್‌ಡಿ ನೀರನ್ನು ಸಂಗ್ರಹಣೆ ಮಾಡಲಾಗುತ್ತಿದೆ. ಅದರಲ್ಲಿ ಮಾರ್ಗಮಧ್ಯದಲ್ಲಿ ಬರುವ 57 ಹಳ್ಳಿಗಳಿಗೆ 9 ಎಂಎಲ್‌ಡಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ.

ಹಾಗೆಯೇ ಹೂಟಗಳ್ಳಿ, ವಿಶ್ವೇಶ್ವರನಗರ ಸೇರಿದಂತೆ ಇನ್ನಿತರೆ ಮೈಸೂರು ಸುತ್ತಲಿನ ಕೈಗಾರಿಕಾ ಪ್ರದೇಶಕ್ಕೆ 14 ಎಂಎಲ್‌ಡಿ, ಚಾಮುಂಡಿಬೆಟ್ಟಕ್ಕೆ 0.5 ಎಂಎಲ್‌ಡಿ (ಅರ್ಧ), ಕೇಂದ್ರಸರ್ಕಾರದ ಆರ್‌ಎಂಪಿ ಕ್ವಾಟ್ರರ್ಸ್ ಮತ್ತು ಪ್ಲಾಂಟ್‌ಗೆ 2.05 (ಎರಡೂವರೆ) ಎಂಎಲ್‌ಡಿ, ಕೆಹೆಚ್‌ಬಿ ಹೂಟಗಳ್ಳಿಗೆ 3 ಎಂಎಲ್‌ಡಿ, ವಿಜಯ ನಗರ 3 ಮತ್ತು 4ನೇ ಹಂತ ಸೇರಿದಂತೆ ಮುಡಾ(ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಅಭಿವೃದ್ಧಿಪಡಿಸಿರುವ ಬಡಾವಣೆಗಳಿಗೆ 9.05(ಒಂಬತ್ತೂವರೆ) ಎಂಎಲ್‌ಡಿ ಸೇರಿ ಒಟ್ಟು 38.05(ಮೂವತ್ತೆಂಟೂವರೆ) ಎಂಎಲ್‌ಡಿ ನೀರನ್ನು ಪಾಲಿಕೆ ವ್ಯಾಪ್ತಿಯ ಹೊರಗಿನ ಪ್ರದೇಶಗಳಿಗೆ ಹರಿಸಲಾಗುತ್ತಿದೆ. ಲೀಕೇಜ್ ಮತ್ತು ನೀರಿನ ಕಳವುನಿಂದಾಗಿ ಸುಮಾರು 20 ಎಂಎಲ್‌ಡಿ ನೀರು ಖರ್ಚಾಗುತ್ತಿದ್ದು, ಉಳಿದ 237.5 ಎಂಎಲ್‌ಡಿ ನೀರನ್ನು ಮೈಸೂರು ನಗರಕ್ಕೆ ಪೂರೈಕೆ ಮಾಡಲಾಗುತ್ತಿದೆ.

ಸದ್ಯಕ್ಕೆ ಸಾಗುತ್ತಿದೆ: ಸಾಮಾನ್ಯವಾಗಿ ಭಾರತೀಯರು ಒಂದು ದಿನಕ್ಕೆ 135 ಲೀಟರ್(litre per capita per day (lpcd) ನೀರನ್ನು ಬಳಕೆ ಮಾಡುತ್ತಾರೆ ಎಂದು ಸಂಶೋಧನೆಗಳು ತಿಳಿಸಿದ್ದರೂ ಮೈಸೂರಿಗರು ಬಳಸುವುದು 210–230 ಲೀಟರ್‌ಗಳಾಗಿದೆ. ಇದರಲ್ಲಿ ಕುಡಿಯುವುದು ಸೇರಿದಂತೆ ವಾಹನಗಳನ್ನು ತೊಳೆಯುವುದಕ್ಕೆ ಗಾರ್ಡನ್ ಇನ್ನಿತರೆ ದಿನಬಳಕೆಗೆ ಬಳಸುತ್ತಾರೆ. ಆದ್ದರಿಂದ ಮೈಸೂರಿಗೆ ನಗರಕ್ಕೆ ಪ್ರತಿನಿತ್ಯ ಪೂರೈಕೆಯಾಗುತ್ತಿರುವ 237 ಎಂಎಲ್‌ಡಿ ನೀರು ಸದ್ಯಕ್ಕೆ ಸಾಕಾಗುತ್ತಿದೆ. ಮಳೆ ಬರದಿದ್ದರೆ, ಕೃಷಿ ಹಾಗೂ ತಮಿಳುನಾಡಿಗೆ ಕಾವೇರಿ ನೀರು ಹರಿಸಿದರೆ ಕುಡಿಯುವ ನೀರಿಗೂ ತೊಂದರೆಯಾಗಲಿದೆ ಎಂದು ಮೈಸೂರು ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರ ಮೊಹಮ್ಮದ್ ಮುಸ್ತಾಫ ಎ.ಎಂ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

1000 ಕೊಳವೆ ಬಾವಿಗಳು: ಮೈಸೂರು ನಗರದಾದ್ಯಂತ ಸುಮಾರು 1000ಕ್ಕೂ ಹೆಚ್ಚು ಕೊಳವೆ ಬಾವಿಗಳಿದ್ದು, ಇವುಗಳಿಂದ 15 ಎಂಎಲ್‌ಡಿ ನೀರು ಸಂಗ್ರಹವಾಗುತ್ತಿದೆ. ನೀರಿನ ಕೊರತೆಯನ್ನು ಕೊಳವೆ ಬಾವಿಗಳಿಂದ ನಿಭಾಯಿಸಲಾಗುತ್ತಿದೆ. ಜಲಸಂಗ್ರಹಣಾ ಘಟಕಗಳಿಂದ ನೀರಿನ ವ್ಯತ್ಯಯವಾದಲ್ಲಿ ಕೊಳವೆ ಬಾವಿಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದರು.

ಮೈಸೂರಿಗೆ 2.4 ಟಿಎಂಸಿ: ಕೆಆರ್‌ಎಸ್‌ನಲ್ಲಿ ಸದ್ಯಕ್ಕೆ ಸುಮಾರು 23.86 ಟಿಎಂಸಿ(ಸಾವಿರ ಮಿಲಿಯನ್ ಕ್ಯೂಬಿಕ್ ಅಡಿ) ಹಾಗೂ ಕಬಿನಿಯಲ್ಲಿ 14.58 ಟಿಎಂಸಿ ನೀರಿದೆ. ಮೈಸೂರು ನಗರಕ್ಕೆ ದಿನಕ್ಕೆ 0.01 ಟಿಎಂಸಿಯಂತೆ ಮುಂದಿನ ಜೂನ್(ಮುಂದಿನ 8 ತಿಂಗಳ ಅವಧಿಗೆ) ತಿಂಗಳವರೆಗೆ ಕುಡಿಯಲು 2.4 ಟಿಎಂಸಿ ನೀರು ಬೇಕಾಗಿದೆ ಎಂದು ತಿಳಿಸಿದರು.

68 ಅಡಿಗಿಂತ ಕಡಿಮೆಯಾದರೆ ಬಂದ್!: ಕೆಆರ್‌ಎಸ್ ಅಣೆಕಟ್ಟೆಯ 68 ಅಡಿ ಆಳದಲ್ಲಿ ಆರ್‌ಬಿಎಲ್‌ಸಿ(ರೈಟ್ ಬ್ಯಾಂಕ್ ಲೋ ಲೆವೆಲ್ ಕೆನಾಲ್) ಇದ್ದು, ಅದಕ್ಕಿಂತ ಕಡಿಮೆಯಾದರೆ ಕೆಆರ್‌ಎಸ್‌ನಿಂದ ನೀರಿನ ಪೂರೈಕೆ ಸಂಪೂರ್ಣ ಬಂದ್ ಆಗಲಿದೆ ಸದ್ಯಕ್ಕೆ ಅಣೆಕಟ್ಟೆಯಲ್ಲಿರುವ ನೀರನ್ನು ಕುಡಿಯುವುದಕ್ಕಾಗಿ ಸಂಗ್ರಹಿಸಿಡುವುದು ಅವಶ್ಯವಾಗಿದೆ. ಮೈಸೂರು ಸೇರಿದಂತೆ ಕೆಆರ್‌ಎಸ್, ಕಬಿನಿ ಅವಲಂಬಿತ ನಗರಗಳಿಗೂ ಕುಡಿಯುವ ನೀರಿನ ಸಮಸ್ಯೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಎಚ್ಚರಿಸಿದರು.

ಶೇ.90 ರಷ್ಟು ನೀರು ಪೂರೈಕೆ...

ಮೈಸೂರು ನಗರಕ್ಕೆ ಶೇ.90 ರಷ್ಟು ನೀರು ಪೂರೈಕೆ ಮಾಡಲಾಗುತ್ತಿದೆ. ಕೆಲ ಎತ್ತರದ ಹಾಗೂ ಪೈಪ್ ದುರಸ್ತಿಯಲ್ಲಿರುವ ಸ್ಥಳಗಳನ್ನು ಹೊರತುಪಡಿಸಿದರೆ ಉಳಿದೆಲ್ಲೆಡೆಗೂ ವ್ಯವಸ್ಥಿತವಾಗಿ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಮೈಸೂರಿನ ನಿವಾಸಿಗಳು ಕೂಡ ನೀರಿನ ಬಳಕೆಯಲ್ಲಿ ಎಚ್ಚರಿಕೆ ವಹಿಸಬೇಕು.

ಮೊಹಮ್ಮದ್ ಮುಸ್ತಾಫ ಎ.ಎಂ, ಸಹಾಯಕ ಕಾರ್ಯಪಾಲಕ ಅಭಿಯಂತರ, ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್

ಕಾವೇರಿ ನೀರಾವರಿ ನಿಗಮಕ್ಕೆ ಮನವಿ...!

ಮಳೆ ಕೊರತೆಯಿಂದಾಗಿ ಕುಡಿಯುವ ನೀರಿಗೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇದೆ. ಆದ್ದರಿಂದ ಮೈಸೂರಿಗರು ನೀರನ್ನು ಮಿತವಾಗಿ ಬಳಸಬೇಕು. ಪಾಲಿಕೆ ವ್ಯಾಪ್ತಿಯಲ್ಲಿರುವ ಕೊಳವೆ ಬಾವಿಗಳಲ್ಲಿ ನೀರು ಬಾರದೆ ದುಸ್ಥಿತಿಯಲ್ಲಿರುವ ಕೊಳವೆ ಬಾವಿಗಳನ್ನು ಸುಸ್ಥಿತಿಯತ್ತ ತರುವ ಕೆಲಸವನ್ನೂ ಮಾಡಲಾಗುತ್ತಿದೆ. ಹಾಗೆಯೇ ಕೆಆರ್‌ಎಸ್ ಡ್ಯಾಂನಲ್ಲಿ 80–85 ಅಡಿಯಷ್ಟು ನೀರು ಇರುವಂತೆ ನಿರ್ವಹಣೆ ಮಾಡಬೇಕು ಎಂದು ಕಾವೇರಿ ನೀರಾವರಿ ನಿಗಮಕ್ಕೆ ಪತ್ರ ಮುಖೇನ ಮನವಿ ಮಾಡಲಾಗಿದೆ.

- ಅಶ್ವಿನ್, ಕಾರ್ಯಪಾಲಕ ಅಭಿಯಂತರ, ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್

ಶುಕ್ರವಾರ 17-11-2023
ಬೆಳ್ಳಿ ಬೆಳಕು
ಮೈಸೂರು ಮಿತ್ರ
ಸಿನಿಮಾ ಪುರವಣಿ

• ಸತ್ಯಮೂರ್ತಿ ತೋಳಹುಣಸೆ

ಸ್ನೇಹದ ಮಹತ್ವ ಸಾರುವ 'ಕುಚುಕು'





ಮನುಷ್ಯನ ಜೀವನದಲ್ಲಿ ಸ್ನೇಹಸಂಬಂಧಕ್ಕೆ ದೊಡ್ಡ ಪ್ರಾಮುಖ್ಯತೆಯಿದೆ. ಅಂಥಾ ಇಬ್ಬರು ಸ್ನೇಹಿತರ ಕಥೆಯನ್ನು ಹೇಳುವ ಚಿತ್ರ ಕುಚುಕು. ಮೈಸೂರು ರಾಜು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರವನ್ನು ನಾಗರತ್ನಮ್ಮ ನಿರ್ಮಿಸಿದ್ದಾರೆ. ಅರ್ಜುನ್ ಚೋಹಾನ್, ಬಸವರಾಜ್ ಗೆಳೆಯರಾಗಿ ಕಾಣಿಸಿಕೊಂಡಿರುವ ಈ ಚಿತ್ರದ ಟ್ರೈಲರ್ ಹಾಗೂ ಹಾಡುಗಳ ಬಿಡುಗಡೆ ಇತ್ತೀಚೆಗೆ ನಡೆಯಿತು. ಫಿಲಂ ಚೇಂಬರ್ ಅಧ್ಯಕ್ಷ ಎನ್.ಎಂ.ಸುರೇಶ್, ಉಮೇಶ್ ಬಣಕಾರ್, ಎಂ.ಎನ್.ಕುಮಾರ್, ಎಂ.ಡಿ. ಪಾರ್ಥಸಾರಥಿ, ಅದಿತಿ(ವಕೀಲರು), ಜಗ್ಗಿ ಮಾಸ್ಟರ್ ಸೇರಿ ಅನೇಕ ಗಣ್ಯರು 'ಕುಚುಕು' ಚಿತ್ರದ ಟ್ರೈಲರ್ ಬಿಡುಗಡೆ ಮಾಡಿ, ಶುಭ ಕೋರಿದರು. ವೇದಿಕೆಯಲ್ಲಿ ನಿಜವಾದ ಕುಚುಕು ಗೆಳೆಯರಾದ ವಿಷ್ಣು-ಅಂಬಿ ಗೆಟಪ್‌ನಲ್ಲಿ ಚಿತ್ರದ ನಾಯಕರಿಬ್ಬರೂ ಕಾಣಿಸಿಕೊಂಡು ಕುಚಿಕು ಹಾಡಿಗೆ ಡ್ಯಾನ್ಸ್ ಮಾಡಿದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ನಿರ್ದೇಶಕ ಮೈಸೂರು ರಾಜು ಮಾತನಾಡುತ್ತ ಚಿತ್ರರಂಗದಲ್ಲಿ ಹಲವಾರು ವರ್ಷಗಳಿಂದ ಡ್ಯಾನ್ಸ್‌ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ನಿರ್ದೇಶನದ ಎರಡನೇ ಚಿತ್ರವಿದು. ಇಬ್ಬರು ಸ್ನೇಹಿತರ ನಡುವೆ ನಡೆಯುವ ಕಥೆಯಿದು. 'ಸ್ನೇಹಸಂಬಂಧ, ಸ್ನೇಹದ ಮಹತ್ವ ಸಾರುವ ಕಂಟೆಂಟ್ ಇಟ್ಟುಕೊಂಡು ಈ ಚಿತ್ರವನ್ನು ನಿರ್ದೇಶಿಸಿದ್ದೇನೆ. ಚಿತ್ರದಲ್ಲಿ ಬರುವ ಸೆಂಟಿಮೆಂಟ್ ಸನ್ನಿವೇಶಗಳು ಪ್ರೇಕ್ಷಕರ ಮನಸಿಗೆ ತುಂಬಾ ಹತ್ತಿರವಾಗಲಿದೆ. ಚಿತ್ರಕ್ಕೆ ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಚಿತ್ರವೂ ತೆರೆಗೆ ಬರಲು ಸಿದ್ಧವಿದೆ ಎಂದರು.

ನಾಯಕ ಅರ್ಜುನ್ ಚೋಹಾನ್ ಮಾತನಾಡುತ್ತ ಇದು ನಾನು ಅಭಿನಯಿಸಿದ ಮೂರನೇ ಚಿತ್ರ. ಹೆಸರೇ ಹೇಳುವಂತೆ ಸ್ನೇಹ, ಸ್ನೇಹಿತರ ನಡುವಿನ ಸಂಬಂಧದ ಕುರಿತಾದ ಕಥೆಯಿದು. ಚಿತ್ರದಲ್ಲಿ ನಾನು ಹಾಗೂ ಬಸವರಾಜ್ ಕುಚಿಕು ಸ್ನೇಹಿತರಾಗಿ ಕಾಣಿಸಿಕೊಂಡಿದ್ದೇವೆ ಎಂದು ಹೇಳಿದರು. ಮತ್ತೊಬ್ಬ ನಟ ಬಸವರಾಜ್‌ಕುಮಾರ್ ಮಾತನಾಡಿ ನಾನು ಮೂಲತಃ ರಂಗಭೂಮಿ ಕಲಾವಿದ. ಚಿತ್ರದಲ್ಲಿ ನಾನು ಹಾಗೂ ಅರ್ಜುನ್ ಚೋಹಾನ್ ಇಬ್ಬರೂ ಪ್ರಾಣಸ್ನೇಹಿತರಾಗಿ ನಟಿಸಿದ್ದೇವೆ ಎಂದರು. ಸಿನಿಮಾ ಮೇಲಿನ ಪ್ರೀತಿಯಿಂದ ಕಷ್ಟಪಟ್ಟು ಇಷ್ಟಪಟ್ಟು ಈ ಚಿತ್ರ ನಿರ್ಮಾಣ ಮಾಡಿರುವುದಾಗಿ ನಿರ್ಮಾಪಕಿ ನಾಗರತ್ನಮ್ಮ ಹೇಳಿದರು. 'ಕುಚುಕು' ಚಿತ್ರದಲ್ಲಿ ಐದು ಹಾಡುಗಳಿದ್ದು, ಎ.ಟಿ.ರವೀಶ್ ಸಂಗೀತ ಸಂಯೋಜನೆ ಮಾಡಿದ್ದಾರೆ. ನಾಯಕಿಯಾಗಿ ಪ್ರಿಯದರ್ಶಿನಿ, ಶಂಕರ್ ಅಶ್ವಥ್, ಬಲ ರಾಜ್ವಾಡಿ, ಶಿವಾಜಿ, ಹನುಮಂತೇಗೌಡ, ಬಿ.ಡಿ.ಜತ್ತಿ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಶರ್ಮಿಳಾ ಮಾಂಡ್ರೆಯವರ 'ಕೆಲವೇ ಕ್ಷಣಗಳಲ್ಲಿ'



ನವಗ್ರಹ, 'ಈ ಬಂಧನ', 'ಮುಮ್ತಾಜ್', 'ಗಾಳಿಪಟ -2' ಸೇರಿದಂತೆ ಅನೇಕ ಚಿತ್ರಗಳಲ್ಲಿ ನಟಿಸಿ ಗುರುತಿಸಿಕೊಂಡಿರುವ ನಟಿ ಶರ್ಮಿಳಾ ಮಾಂಡ್ರೆ, ಈಗ ನಿರ್ಮಾಪಕಿಯಾಗಿದ್ದಾರೆ. ಮಲೇಷಿಯಾ ಮೂಲದ ಪುನ್ನಗೈ ಪೂ ಗೀತಾ ಅವರ ನಿರ್ಮಾಣದ 'ಸಿಲನೊಡಿಗಳಿಲ್' ಚಿತ್ರದ ಕ್ರಿಯೇಟಿವ್ ಪ್ರೊಡ್ಯೂಸರ್ ಆಗಿ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದಾರೆ. ಈ ಹಿಂದೆ 'ಮುಂದಿನ ನಿಲ್ದಾಣ' ಚಿತ್ರ ನಿರ್ದೇಶಿಸಿದ್ದ ವಿನಯ್ ಭಾರದ್ವಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ವಿನಯ್, ನನಗೆ ಈ ಚಿತ್ರ ಸಿಗಲು ಲೂಸಿಯಾ ಪವನ್ ಕಾರಣ. 'ಸಿಲನೊಡಿಗಳಿಲ್' ಅಂದರೆ 'ಕೆಲವೇ ಕ್ಷಣಗಳಲ್ಲಿ' ಮಲೇಷಿಯಾದ ಟಾಪ್ ಆರ್.ಜೆ. ಪುನ್ನಗೈಪೂ ಗೀತಾ ಅವರು ಈ ಚಿತ್ರವನ್ನು ನಿರ್ಮಿಸುವ ಜೊತೆಗೆ ನಾಯಕಿಯಾಗೂ ಅಭಿನಯಿಸಿದ್ದಾರೆ. ಮೂರು ಪಾತ್ರಗಳ ಸುತ್ತ ನಡೆಯುವ ಸೈಕಲಾಜಿಕಲ್ ಮಿಸ್ಟ್ರಿ ಡ್ರಾಮಾ ಇದಾಗಿದ್ದು, ಲಂಡನ್‌ನ ಫೇಮಸ್ ಕಾಸ್ಮೆಟಿಕ್ ಸರ್ಜನ್ ಆಗಿ ರಿಚರ್ಡ್ ರಿಷಿ, ಅವರ ಪತ್ನಿಯಾಗಿ ಪುನ್ನಗೈಪೂ ಗೀತಾ ಹಾಗೂ ಸ್ನೇಹಿತೆಯ ಪಾತ್ರದಲ್ಲಿ ಯಶಿಕಾ ಆನಂದ್ ಕಾಣಿಸಿಕೊಂಡಿದ್ದಾರೆ. ದಂಪತಿಯ ನಡುವೆ ಯುವತಿಯೊಬ್ಬಳ ಎಂಟ್ರಿಯಾಗಿ ಅಲ್ಲೊಂದು ಕೊಲೆಯೂ ನಡೆಯುತ್ತದೆ. ಈ ಕೊಲೆ ಮಾಡಿದ್ದು ಯಾರು? ಇದು ನಿಜವಾಗಿಯೂ ಕೊಲೆನಾ? ಎಂಬೆಲ್ಲಾ ಕುತೂಹಲಕಾರಿ ಅಂಶಗಳ ಸುತ್ತ ಚಿತ್ರಕಥೆ ಸಾಗಲಿದೆ. ಇಡೀ ಚಿತ್ರವನ್ನು ಲಂಡನ್‌ನಲ್ಲೇ ಶೂಟ್ ಮಾಡಿದ್ದೇವೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಐವರು ಸಂಗೀತ ನಿರ್ದೇಶಕರು ಕೆಲಸ ಮಾಡಿದ್ದಾರೆ. ಮೊದಲು ಚಿತ್ರವನ್ನು ತಮಿಳಿನಲ್ಲಿ ರಿಲೀಸ್ ಮಾಡಿ, ನಂತರ ಕನ್ನಡದಲ್ಲೂ ನಿರ್ಮಿಸುವ ಯೋಜನೆಯಿದೆ ಎಂದರು.

ನಿರ್ಮಾಪಕಿ ಶರ್ಮಿಳಾ ಮಾಂಡ್ರೆ ಮಾತನಾಡಿ ನಿರ್ದೇಶಕ ಪವನ್ ಬಳಿ ಈ ಚಿತ್ರದ ಬಗ್ಗೆ ಮಾತಾಡಿದ್ದೆ. ಅವರು ಧೂಮಂ ಚಿತ್ರದಲ್ಲಿ ಬ್ಯುಸಿಯಾಗಿದ್ದರಿಂದ ವಿನಯ್‌ರನ್ನು ಪರಿಚಯಿಸಿದರು. ವಿನಯ್ ತುಂಬಾ ಚೆನ್ನಾಗಿಯೇ ಚಿತ್ರವನ್ನು ಮಾಡಿಕೊಟ್ಟಿದ್ದಾರೆ. ನಾನು ಚಿತ್ರದ ಕ್ರಿಯೇಟಿವ್ ಪ್ರೊಡ್ಯೂಸರ್ ಆಗಿ ನಿರ್ಮಾಪಕರು ಕೊಟ್ಟ ಜವಾಬ್ದಾರಿಯನ್ನು ನಿಭಾಯಿಸಿದ್ದೇನೆ. ನವೆಂಬರ್ 24ಕ್ಕೆ ಪ್ರಪಂಚದಾದ್ಯಂತ ಈ ಚಿತ್ರ ಬಿಡುಗಡೆಯಾಗಲಿದೆ ಎಂದು ಹೇಳಿದರು.

ಖಾಲಿ ಮನೆಯ ಸುತ್ತ 'ದಿ ವೆಕೆಂಟ್ ಹೌಸ್'!



'ನಾವಿಕ', 'ಅತಿರಥ', 'ನುಗ್ಗೇಕಾಯಿ', 'ಲೋಕಲ್ ಟ್ರೈನ್', 'ಲಂಕೆ', 'ಇನಾಮ್ದಾರ್' ಸೇರಿದಂತೆ ಹಲವು ಕನ್ನಡ ಸಿನಿಮಾಗಳಲ್ಲಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸುವ ಮೂಲಕ ಗುರುತಿಸಿಕೊಂಡಿರುವ ನಟಿ ಎಸ್ತರ್ ನರೋನ್ಹಾ ಇದೀಗ 'ದಿ ವೆಕೆಂಟ್‌ಹೌಸ್' ಚಿತ್ರದ ಮೂಲಕ ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ. ನಿರ್ದೇಶನದ ಜೊತೆಗೆ ನಿರ್ಮಾಣ, ಸಂಗೀತ ನಿರ್ದೇಶನ, ನಟನೆಯ ಜವಾಬ್ದಾರಿಯನ್ನು ಬಹಳ ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಈ ಚಿತ್ರವು ನ.17ರಂದು ತೆರೆಗೆ ಬರಲಿದೆ.

ಈಚೆಗೆ ನಡೆದ ಟ್ರೈಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಎಸ್ತಾರ್ ನರೋನ್ಹಾ, 'ದಿ ವೆಕೆಂಟ್ ಹೌಸ್' ಹಾರರ್ ಸಿನಿಮಾವಲ್ಲ. ಒಂದು ಖಾಲಿ ಮನೆಯ ಸುತ್ತ ಸಾಗುವ ಕಥೆ. ಈಗಿನ ಯೂತ್‌ಗೆ ಬಹಳ ಕನೆಕ್ಟ್ ಆಗುವಂತಹ ಕಂಟೆಂಟ್ ಚಿತ್ರದಲ್ಲಿದೆ. ಪ್ರೀತಿ ಮತ್ತು ಎಮೋಷನ್ ಎರಡನ್ನೂ ಸೇರಿಸಿ ಹೆಣೆದಂಥ ಕಥೆ. ಡೈರೆಕ್ಷನ್ ಮಾಡಿದ್ದು ಖುಷಿ ಅನಿಸಿತು. ನನ್ನ ವಿಷನ್ ಅನ್ನು ನಾನು ಓಪನ್ ಆಗಿ ಹೇಳುವ ಸ್ವಾತಂತ್ರ್ಯ ನನ್ನ ಸಿನಿಮಾದಲ್ಲಿ ಸಿಕ್ಕಿದೆ. ನಾನು ರಂಗಭೂಮಿಗೆ ಬಂದಿದ್ದು ಸಿಂಗರ್ ಆಗಿಯೇ. ಹೀಗಾಗಿ ಈ ಚಿತ್ರದಲ್ಲಿ ನಾನೇ ಸಂಗೀತ ನಿರ್ದೇಶಕಿಯಾಗಿಯೂ ಕೆಲಸ ಮಾಡಿದ್ದೇನೆ ಎಂದರು.

'ದಿ ವೆಕೆಂಟ್ ಹೌಸ್' ಸಿನಿಮಾದ ಸ್ಯಾಂಪಲ್ಸ್ ಈಗಾಗಲೇ ದೊಡ್ಡ ಸದ್ದು ಮಾಡುತ್ತಿವೆ. ಹಾಡುಗಳು, ಟೀಸರ್ ಗಮನ ಸೆಳೆಯುತ್ತಿದೆ. ಕನ್ನಡ ಹಾಗೂ ಕೊಂಕಣಿ ಭಾಷೆಯಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ನರೇಂದ್ರ ಗೌಡ ಛಾಯಾಗ್ರಹಣವಿದ್ದರೆ, ವಿಜಯ್‌ರಾಜ್ ಸಂಕಲನವಿದೆ. ಬಹುತೇಕ ಮಂಗಳೂರಿನಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಎಸ್ತರ್ ನರೋನ್ಹಾ ಮಂಗಳೂರಿನವರಾದರೂ, ಬೆಳೆದಿದ್ದೆಲ್ಲ ಮುಂಬೈನಲ್ಲಿ. ಅನುಪಮ್ ಖೇರ್ ಅವರ ಶಾಲೆಯಲ್ಲಿ ತರಬೇತಿ ಪಡೆದು ಹಿಂದಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದ ಎಸ್ತಾರ್ ಬಳಿಕ ತೆಲುಗು, ತುಳು ಸಿನಿಮಾಗಳಲ್ಲೂ ನಟಿಸಿದ್ದಾರೆ. ಇಷ್ಟು ವರ್ಷದ ನಟನೆ ಅನುಭವವನ್ನು ಧಾರೆ ಎರೆದು ದಿ ವೆಕೆಂಟ್ ಹೌಸ್ ಸಿನಿಮಾ ನಿರ್ದೇಶಿಸಿ ನಟಿಸಿ, ನಿರ್ಮಾಣ ಕೂಡ ಮಾಡಿದ್ದಾರೆ.

ರಾಧಿಕಾ ಕುಮಾರಸ್ವಾಮಿ ಈಗ 'ಭೈರಾದೇವಿ'






ನಾಯಕಿ, ನಿರ್ಮಾಪಕಿ ರಾಧಿಕಾ ಕುಮಾರಸ್ವಾಮಿ ಅವರ ನಿರ್ಮಾಣದ 'ಭೈರಾದೇವಿ' ಹಾಗೂ 'ಅಜಾಗ್ರತೆ' ಚಿತ್ರಗಳ ಮೋಷನ್ ಪೋಸ್ಟರ್, ಟೀಸರ್ ಬಿಡುಗಡೆ ಕಾರ್ಯಕ್ರಮ ವಿಶೇಷವಾಗಿ ಅವರ ಬರ್ತ್‌ಡೇ ಕಾರ್ಯಕ್ರಮದ ವೇದಿಕೆಯಲ್ಲೇ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಸಲ ನನ್ನ ಹುಟ್ಟುಹಬ್ಬ ಮತ್ತಷ್ಟು ವಿಶೇಷ. ಏಕೆಂದರೆ ನಾನು ಅಭಿನಯಿಸಿದ ಎರಡು ಚಿತ್ರಗಳ ಕಾರ್ಯಕ್ರಮ ನಡೆಯುತ್ತಿದೆ. ಶಶಿಧರ್ ನಿರ್ದೇಶನದ 'ಅಜಾಗ್ರತೆ' ಚಿತ್ರದ ಮೂಲಕ ನನ್ನ ದೊಡ್ಡ ಕನಸೊಂದು ನನಸಾಗುತ್ತಿದೆ, ಅದೇನೆಂದು ಮುಂದಿನ ದಿನಗಳಲ್ಲಿ ಹೇಳುತ್ತೇನೆ. ಭೈರಾದೇವಿ ನನ್ನ ಇಪ್ಪತ್ತು ವರ್ಷಗಳ ಸಿನಿ ಜರ್ನಿಯಲ್ಲೇ ವಿಭಿನ್ನ ಚಿತ್ರ ಮೊದಲ ಬಾರಿಗೆ ನಾನು ಹೆಣ್ಣು ಅಘೋರಿಯಾಗಿ ಕಾಣಿಸಿಕೊಂಡಿದ್ದೇನೆ. ನನಗೆ ಸ್ಮಶಾನ ಎಂದರೆ ತುಂಬಾ ಭಯ, ಆದರೆ ಚಿತ್ರದ ಹೆಚ್ಚಿನ ಭಾಗವನ್ನು ಸ್ಮಶಾನದಲ್ಲೇ ಚಿತ್ರೀಕರಿಸಿದ್ದೇವೆ. ಈ ಚಿತ್ರಕ್ಕಾಗಿ ನಾನು ಪಟ್ಟಿರುವಷ್ಟು ಶ್ರಮವನ್ನು ಬೇರ್‍ಯಾವ ಚಿತ್ರಕ್ಕೂ ಪಟ್ಟಿಲ್ಲ. ಟೀಸರ್ ನೋಡಿದಾಗ ತುಂಬಾ ಖುಷಿಯಾಯಿತು. ಶ್ರೀಜೈ, ಚಿತ್ರವನ್ನು ತುಂಬಾ ಚೆನ್ನಾಗಿ ನಿರ್ದೇಶಿಸಿದ್ದಾರೆ. ಭೈರಾದೇವಿ ತೆರೆಗೆ ಬರಲು ಸಿದ್ಧವಾಗಿದ್ದು, ಸದ್ಯದಲ್ಲೇ ಬಿಡುಗಡೆಯ ದಿನಾಂಕ ಘೋಷಿಸುತ್ತೇವೆ ಎಂದು ಹೇಳಿದರು.

ರಾಧಿಕಾ ಅವರ ಸಹೋದರ ಹಾಗೂ ನಿರ್ಮಾಪಕ ರವಿರಾಜ್ ಮಾತನಾಡುತ್ತಾ, ಭೈರಾದೇವಿಯ ಟೀಸರ್ ಹಾಗೂ 'ಅಜಾಗ್ರತೆ' ಪೋಸ್ಟರ್ ಒಂದೇ ವೇದಿಕೆಯಲ್ಲಿ ಬಿಡುಗಡೆಯಾಗುತ್ತಿದೆ. 'ಭೈರಾದೇವಿ' ರಿಲೀಸ್‌ಗೆ ಸಿದ್ಧವಾಗಿದೆ. ಅಲ್ಲದೆ 'ಅಜಾಗ್ರತೆ'ದ 4- 5 ದಿನಗಳ ಶೂಟಿಂಗ್ ಬಾಕಿಯಿದೆ. ಹೊಸ ವರ್ಷ ಅಥವಾ ಫೆಬ್ರವರಿಗೆ ಅದನ್ನೂ ರಿಲೀಸ್ ಮಾಡುತ್ತೇವೆ ಎಂದು ಹೇಳಿದರು.

'ಭೈರಾದೇವಿ' ಚಿತ್ರದ ನಿರ್ದೇಶಕ ಶ್ರೀಜೈ ಮಾತನಾಡುತ್ತ ನಮ್ಮ ಚಿತ್ರಕ್ಕೆ ಕನ್ನಡ, ತೆಲುಗು, ತಮಿಳು ಈ ಮೂರು ಭಾಷೆಗಳಲ್ಲೂ ಪ್ರತ್ಯೇಕವಾಗಿ ಚಿತ್ರೀಕರಣ ಮಾಡಿದ್ದೇವೆ. ಸಾಮಾನ್ಯವಾಗಿ ಹೆಣ್ಣು ಅಘೋರಿಗಳು ಎಲ್ಲೂ ಕಾಣಿಸುವುದಿಲ್ಲ, ನಾನು ಆ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಸ್ಕ್ರಿಪ್ಟ್ ಮಾಡಿಕೊಂಡಿದ್ದೇನೆ ಎಂದು ಹೇಳಿದರು.

'ಅಜಾಗ್ರತೆ' ಚಿತ್ರದ ನಿರ್ದೇಶಕ ಶಶಿಧರ್ ಮಾತನಾಡುತ್ತ ಇದೊಂದು ಸೈಕಲಾಜಿಕಲ್ ಕ್ರೈಮ್ ಥ್ರಿಲ್ಲರ್ ಚಿತ್ರವಾಗಿದ್ದು, ಕನ್ನಡ, ತೆಲುಗು, ತಮಿಳು ಸೇರಿದಂತೆ ಏಳು ಭಾಷೆಗಳಲ್ಲಿ ನಿರ್ಮಿಸುತ್ತಿದ್ದೇವೆ. ಚಿತ್ರವನ್ನು ಬೇರೆ ಥರ ಮಾಡೋಣ ಎಂದು ಅನ್ಯಭಾಷೆಗಳಿಂದ ಸಾಕಷ್ಟು ಕಲಾವಿದರನ್ನು ಕರೆತಂದಿದ್ದೇವೆ ಎಂದರು.

ಸಿನಿಪದಬಂಧ-500



ಹೆಸರು ________________

ವಿಳಾಸ ________________

____

ದೂರವಾಣಿ ಸಂಖ್ಯೆ ________________



ವಿಜೇತರು: ಪ.ಶಿ.ವೀರಭದ್ರಸ್ವಾಮಿ S/O ಲೇಟ್ ಶಿವಬಸಪ್ಪ, ಪಡುಗೂರು ಗ್ರಾಮ ಮತ್ತು ಅಂಚೆ, ಗುಂಡ್ಲುಪೇಟೆ ತಾ॥, ಚಾಮರಾಜನಗರ ಜಿಲ್ಲೆ.



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 499ರ ಉತ್ತರ

ಮ	ಕ್ಕ	ಳ	ಸೈ	ನ್ಯ						ಅ
ಹಾ			ನಿ			ಜೀ	ವ	ನ	ಜ್ಯೋ	ತಿ
ಎ	ರ	ಡು	ಕ	ನ	ಸು			ಮ್ಮೊ		ಥಿ
ಡ						ಮ	ಣಿ	ರ	ತ್ನಂ	
ಬಿ	ಳಿ	ಗು	ಲಾ	ಬಿ		ಜ್ಞ		ಹ		ಇ
ಡಂ		ಡು						ಮ್ಮೀ		ಮ್ಮ
ಗಿ		ಗು		ದೇ		ದೇ	ವ	ರ	ಗು	ಡಿ
	ಬಿ	ಸಿ	ಬಿ	ಸಿ						ಪು
ಅ		ಡಿ			ಜೀ	ವ	ನ	ಜೋ	ಕಾ	ಲಿ
ಹ	ಗ	ಲು	ವೇ	ಷ			ಮು			ಕೇ
ಲ್ಯ						ವಿ	ಜ	ಯ	ಕಾ	ಶಿ

ಎಡದಿಂದ ಬಲಕ್ಕೆ

1. ಮಾಜಿ ಕ್ರಿಕೆಟಿಗ ಸಿಧು ನೆನಪಿಸಿಕೊಂಡರೆ ಪ್ರಜ್ವಲ್ ದೇವರಾಜ್ ಚಿತ್ರ ಪ್ರತ್ಯಕ್ಷ ! 3
4. ಸುರೇಶ್ ಹೆಬ್ಳಿಕರನಿಗೆ ಆದ ಪೆಟ್ಟು ! 3
6. ಜಲಪ್ರಳಯ ತೆರೆಯ ಮೇಲೂ ಅಪ್ಪಳಿಸಿತ್ತು 3
7. ಬೊಂಬೆ ಹೇಳುತೈತೆ ಪುನೀತ್ ಅರಸು ಅಂತಾ ! 5
9. ಉದಯ್ ಕುಮಾರನಿಗೆ ಅನುಮಾನದಿಂದ ದೊರೆತ ಪ್ರಯೋಜನ 5
11. ಪಿ.ಮಹೇಶ್ ಸುಖಧರೆಯ ಸಡಗರಕ್ಕೆ ರಮೇಶ್ ಅರವಿಂದ್ ಅಭಿನಯವಿದೆ 3
14. ವಿಷ್ಣುವರ್ಧನ್ ಇನ್ನೊಂದು ಜೀವಕೆ ಆಧಾರವಾದ "ದಾನಿ" 2
15. ಪ್ರಭಾಕರ್ ಅಲ್ಲೋಲ ಕಲ್ಲೋಲ ಎಬ್ಬಿಸಿದ ಶಿವ 5
17. ಲೋಕವನ್ನೇ ಜಯಿಸಿದ ನಟ ಈಗ ನಮ್ಮೊಂದಿಗಿಲ್ಲ 5
19. ಟೈಗರ್ ಪ್ರಭಾಕರ್ ಅರಣ್ಯಾಧಿಕಾರಿಯಾಗಿ ಇಲ್ಲಿ ಅಸ್ತವ್ಯಸ್ತಗೊಂಡಿದ್ದಾನೆ 3
20. "ತಾರೆಯು ಬಾನಿಗೆ _ _ _ ನೀರಿಗೆ ಹೂವೆಲ್ಲಾ ವನದೇವಿ ಮುಡಿಗೆ......", 3
21. ಮುತ್ತಣ್ಣ ನಗರದ ಮೊದಲ ಪ್ರಜೆ 3

ಮೇಲಿನಿಂದ ಕೆಳಕ್ಕೆ

1. ಸಾರಾಯಿ ನಿಷೇಧಕ್ಕೆ ಹೋರಾಡಿದ ಜಯಶ್ರೀ ದೇವಿಯ "ಭವಾನಿ" 3
2. ಶಿವರಾಜ್ ಕುಮಾರ್ "ರಾಕ್ಷಸ" 3
3. ಚೇತನ್ ಚಂದ್ರ - ಅಮೂಲ್ಯ ಅಭಿನಯದ ಚಿತ್ರ 3
5. ಹಾಸ್ಯನಟ ನಾಣಿ ಬಾರಿಸಿದ ಚರ್ಮವಾದ್ಯ 3
8. ಸಾಧನೆಗೈದು ಹುತಾತ್ಮರಾದವರಿಗೆ ಕೆ.ಎಂ. ಶಂಕರಪ್ಪ ನಿರ್ದೇಶಕ 7
10. ಆರಂಭದಿ ಬಾಣ ಹೂಡಿ ಕೊನೆಯಲ್ಲಿ ಕುದುರೆ ಏರಿದ ನಟ 7
12. "ನಾನೇ ವೀಣೆ ನೀನೇ ತಂತಿ ಅವನೇ ವೈಣಿಕ.. ", ಗೀತೆಯ ಕವಿ 3
13. ವಿಷ್ಣುವಿನ ಪತ್ನಿಗೆ ತೂಕವಿದೆ 3
15. ಭೀಮಾ ತೀರದಲ್ಲಿ ಚಿತ್ರದ ನಾಯಕಿ ಶುದ್ಧ ನೀರಂತಿದ್ದಾಳೆ 3
16. ಇಂದ್ರನ ಗೆದ್ದವನು ಇಲ್ಲಿ ತಿರುಗಿ ನಿಂತಿದ್ದಾನೆ 3
17. ಅಜಯ್‌ನೊಂದಿಗೆ ಬಂದವನು 3
18. ಥ್ರಿಲ್ಲರ್ ಮಂಜು ಝಳಪಿಸಿದ ಖಡ್ಗ 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸರ್ಕಾರದಿಂದ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿಕೆ

ತಿ.ನರಸೀಪುರ, ನ.16–ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಕಾಲಕಾಲಕ್ಕೆ ಪ್ರೋತ್ಸಾಹಧನ ಹೆಚ್ಚಿಸುವ ಮೂಲಕ ಆರ್ಥಿಕವಾಗಿ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ತಾಲೂಕಿನ ಕೇತುಪುರ ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದ (ಬಿಎಂಸಿ ಕೇಂದ್ರ) ಸಭಾಂಗಣವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, ವ್ಯವಸಾಯದೊಂದಿಗೆ ರೈತರಿಗೆ ಪ್ರಮುಖ ಆದಾಯದ ಮೂಲ ಹೈನುಗಾರಿಕೆಯಾಗಿದೆ. ಗ್ರಾಮೀಣ ಭಾಗದ ಜನರ ಜೀವನೋಪಾಯಕ್ಕೆ ಕ್ಷೀರ ಉತ್ಪಾದನೆ ಅನುಕೂಲ ಕ್ಷೇತ್ರವಾಗಿದೆ. ಇದಕ್ಕೆ ಪೂರಕವಾಗಿ ಹಾಲು ಉತ್ಪಾದಕರ ಏಳಿಗೆಗೆ ನಮ್ಮ ಸರ್ಕಾರ ಶ್ರಮಿಸಲಿದೆ. ಸಹಕಾರ ಕ್ಷೇತ್ರದಲ್ಲಿ ಪ್ರತಿಯೊಬ್ಬರು ಪಕ್ಷಭೇದವಿಲ್ಲದೆ ಅಭಿವೃದ್ಧಿಗಾಗಿ ದುಡಿಯಬೇಕು ಎಂದು ಮನವಿ ಮಾಡಿದರು.

ಗ್ಯಾರಂಟಿಯಿಂದ 1.32 ಕೋಟಿ ಕುಟುಂಬ ಸ್ವಾವಲಂಬಿ: ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದ 1.32 ಕೋಟಿ ಜನರು ಸ್ವಾವಲಂಬಿ ಜೀವನ ನಡೆಸಲು ಪೂರಕವಾಗಿದೆ. ಕುಟುಂಬಗಳು ಯಾರ ಮೇಲೂ ಅವಲಂಬಿತರಾಗದೇ ಜೀವನ ನಡೆಸಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದ್ದು, ದೇಶದ ಯಾವುದೇ ರಾಜ್ಯ ಹಾಗೂ ಪಕ್ಷ ಮಾಡದ ಜನಪರ ತೀರ್ಮಾನವನ್ನು ನಮ್ಮ ಸರ್ಕಾರ ಮಾಡಿದೆ ಎಂದು ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.



ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಡೇರಿಗಳು ರೈತರ ಪಾಲಿಗೆ ತಾಯಿಸಮಾನವಾಗಿವೆ. ಮಕ್ಕಳನ್ನು ತಾಯಿ ಹೇಗೆ ಪೋಷಿಸುತ್ತಾಳೋ ಹಾಗೇ ಡೈರಿಗಳು ಕೂಡ ರೈತರನ್ನು ಪೋಷಿಸುತ್ತಿದ್ದು, ರೈತರು ನೆಮ್ಮದಿಯಾಗಿ ಜೀವನ ಸಾಗಿಸಲು ಡೈರಿಗಳು ಪ್ರಮುಖ ಪಾತ್ರ ವಹಿಸುತ್ತಿವೆ ಎಂದರು.

ಕಾರ್ಯಕ್ರಮದಲ್ಲಿ ಕೆಡಿಪಿ ಸದಸ್ಯ ಸುನೀಲ್ ಬೋಸ್, ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆಂಪ್ತ್ರೇಗೌಡ, ಮೈಮುಲ್ ಮಾಜಿ ಅಧ್ಯಕ್ಷರಾದ ಓಂ ಪ್ರಕಾಶ್, ಕೆ.ಉಮಾಶಂಕರ್, ಕೆ.ಜಿ.ಮಹೇಶ್, ನಿರ್ದೇಶಕರಾದ ಆರ್.ಚೆಲುವರಾಜು, ಲೀಲಾ ನಾಗರಾಜು, ಬಿ.ನೀಲಾಂಬಿಕೆ ಮಹೇಶ್, ಜಿಪಂ ಮಾಜಿ ಸದಸ್ಯೆ ಎಂ.ಸುಧಾಮಹದೇವಯ್ಯ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವಕ್ತಾರ ಹುಣಸೂರು ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ವಿ.ಎನ್.ವಿಜಯಕುಮಾರ್, ವ್ಯವಸ್ಥಾಪಕ ಡಾ.ಸಿ.ದಿವಾಕರ್, ಉಪವ್ಯವಸ್ಥಾಪಕ ಜಿ.ಎನ್.ಸಂತೋಷ್, ವಿಸ್ತರಣಾಧಿಕಾರಿ ಆರ್.ಪ್ರಮೋದ, ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ಮಹಿಳಾ ಅಧ್ಯಕ್ಷೆ ವೀಣಾ, ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಎಂ.ಮಧು ಕುಮಾರ್, ಎ.ಎನ್.ಸ್ವಾಮಿ, ಯುವ ಕಾಂಗ್ರೆಸ್ ಅಧ್ಯಕ್ಷ ಟಿ.ಎಸ್.ಲೋಕೇಶ್, ಯಾಚೇನಹಳ್ಳಿ ಪೈಲ್ವಾನ್ ಅಶೋಕ್, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಡೈರಿ ಅಧ್ಯಕ್ಷ ಕೆ.ಬಿ.ಪ್ರಭಾಕರ್, ಉಪಾಧ್ಯಕ್ಷ ಸಿದ್ದೇಗೌಡ, ನಿರ್ದೇಶಕರಾದ ಕೆಎನ್.ರಂಗಸ್ವಾಮಿ, ರಂಗೇಗೌಡ, ದೊಡ್ಡಮರಿಗೌಡ, ತಿಮ್ಮೇಗೌಡ, ಮಹದೇವಶೆಟ್ಟಿ, ರಂಗಶೆಟ್ಟಿ, ಮಲ್ಲಯ್ಯ, ನಾರಾಯಣಮೂರ್ತಿ, ನಿಂಗಮ್ಮ, ಮುಖ್ಯ ಕಾರ್ಯನಿರ್ವಾಹಕ ಎಂ.ಕುಳ್ಳೇಗೌಡ, ಮುನಾವರ್ ಪಾಷ, ತಾಪಂ ಮಾಜಿ ಸದಸ್ಯ ಕುಕ್ಕೂರು ಗಣೇಶ್, ರಾಮಲಿಂಗಯ್ಯ ಕೆ.ಎಸ್.ಧನಂಜಯ ಇನ್ನಿತರರು ಹಾಜರಿದ್ದರು.

> ನ.29ಕ್ಕೆ ತಿ.ನರಸೀಪುರದಲ್ಲಿ ಜನಸಂಪರ್ಕ ಸಭೆ ಏರ್ಪಡಿಸಲಾಗಿದ್ದು, ಜಿಲ್ಲಾಧಿಕಾರಿ, ಜಿಪಂ ಸಿಇಓ ಭಾಗವಹಿಸಲಿದ್ದಾರೆ. ಸಭೆಗೆ ಅಧಿಕಾರಿಗಳು ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ತಾಲೂಕು ಮಟ್ಟದ ಅಧಿಕಾರಿಗಳು ನ.29ರೊಳಗೆ ಎಲ್ಲಾ ಹೋಬಳಿವಾರು ಪ್ರವಾಸ ಮಾಡಿ, ಅಲ್ಲಿನ ಜನರ ಸಮಸ್ಯೆಗಳನ್ನು ಕ್ರೋಢೀಕರಣ ಮಾಡಬೇಕು. ನಂತರ ಜನಸಂಪರ್ಕ ಸಭೆಯಲ್ಲಿ ಸಮಸ್ಯೆ ಬಗೆಹರಿಸಲು ಕಾರ್ಯಕ್ರಮ ರೂಪಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ತಾಲೂಕಿನ ಎಲ್ಲಾ ಕೆರೆಗಳನ್ನು ತುಂಬಿಸಬೇಕು.
> –ಡಾ.ಹೆಚ್.ಸಿ.ಮಹದೇವಪ್ಪ, ಸಚಿವ

ಬೆಳ್ಳಿ ಬಸಪ್ಪನ ದೀವಟಿಗೆ ಉತ್ಸವ



ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಇತಿಹಾಸ ಪ್ರಸಿದ್ಧ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿಯ ಬೆಳ್ಳಿ ಬಸಪ್ಪ ಹಾಗೂ ಗಿರಿಜಮ್ಮದೇವಿಯ ದೀವಟಿಗೆ ಉತ್ಸವ ಬೆಟ್ಟದ ಸುತ್ತಮುತ್ತಲಿನ ಹತ್ತಾರು ಗ್ರಾಮಗಳಲ್ಲಿ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ದೀಪಾವಳಿ ಹಬ್ಬದ ಅಂಗವಾಗಿ ಬೆಟ್ಟದ ಸುಮಾರು 30 ಕಿ.ಮೀ. ಸುತ್ತ ಸಾವಿರಾರು ದೀವಟಿಗೆಯೊಂದಿಗೆ ಉತ್ಸವ ಮೂರ್ತಿಗಳನ್ನು ಬೆಳಗ್ಗೆಯಿಂದ ಮಧ್ಯರಾತ್ರಿವರೆಗೂ ಮೆರವಣಿಗೆ ನಡೆಸಲಾಯಿತು. ಬೆಟ್ಟದಪುರದ ಬಸವೇಶ್ವರ ಕಾಲೋನಿಯ ತೋಪು, ಬೆಟ್ಟದತುಂಗಾ, ಕೆಳಗನಹಳ್ಳಿ, ದೊಡ್ಡೇಗೌಡನಕೊಪ್ಪಲು, ಕುಡುಕೂರು, ಬಾರಸೆ, ಕೂರ್ಗಲ್ಲು ಸೇರಿದಂತೆ 20 ಹಳ್ಳಿಗಳಲ್ಲಿ ಬೆಳ್ಳಿ ಬಸಪ್ಪ ಹಾಗೂ ಗಿರಿಜಮ್ಮದೇವಿಯ ಉತ್ಸವ ನಡೆಯಿತು.

ಆಯಾ ಗ್ರಾಮಗಳ ದೇವಾಲಯಗಳ ಸುತ್ತು ದೀವಟಿಗೆ ಹಿಡಿದು ಉತ್ಸವ ಮೂರ್ತಿಗಳನ್ನು ಹೊತ್ತಿಕೊಂಡು ಓಡುವುದನ್ನು ನೋಡಲು ಸಾವಿರಾರು ಜನರು ಸೇರಿದ್ದರು. ರಾತ್ರಿ 2 ಗಂಟೆಗೆ ಬೆಟ್ಟದಪುರದ ದೇವಾಲಯ ಗುಡಿಗೆ ಆಗಮಿಸಿದ ದೇವರಿಗೆ ವಿಶೇಷ ಪೂಜೆ ನೆರವೇರಿಸಿ, ಪಂಜಿನ ಮೆರವಣಿಗೆಯೊಂದಿಗೆ ಉತ್ಸವ ಕೊನೆಗೊಂಡಿತು.

ಇದೇ ವೇಳೆ ಬೆಟ್ಟದಪುರದ ವೀರಶೈವ–ಲಿಂಗಾಯತ ಸಮಾಜದ ವತಿಯಿಂದ ಅನ್ನದಾನ ಏರ್ಪಡಿಸಲಾಗಿತ್ತು. ಉಪ್ಪಾರ ಸಮಾಜದವರು ಉತ್ಸವ ಮೂರ್ತಿಗಳನ್ನು ಹೊತ್ತು ಮೆರವಣಿಗೆ ನಡೆಸಿದರು. ಬೆಟ್ಟದಪುರ ಠಾಣೆಯ ಪೊಲೀಸರು ಬಿಗಿಬಂದೋಬಸ್ತ್ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಏರ್ಪಡಿಸಲಾಗಿತ್ತು.

ಪ್ರಧಾನ ಅರ್ಚಕ ಸತೀಶ್ ಕಶ್ಯಪ ತಂಡ, ಕಂದಾಯ ನಿರೀಕ್ಷಕ ಅಜ್ಮಲ್ ಪಾಷಾ, ಗ್ರಾಪಂ ಅಧ್ಯಕ್ಷ ಬಿ.ಸಿ.ಗಿರೀಶ್, ಕಾರ್ಯದರ್ಶಿ ಮಂಜುನಾಥ್ ಮತ್ತಿತರರು ಹಾಜರಿದ್ದರು.



ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಮೈಮುಲ್ ಮಾಜಿ ನಿರ್ದೇಶಕ ಎಸ್.ಸಿ.ಅಶೋಕ್ ಹಾಗೂ ಯುವ ಮುಖಂಡ ಎನ್.ವಿ.ವಿನಯ್ ಕುಮಾರ್ ಸನ್ಮಾನಿಸಿದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಮನವಿ ಸಲ್ಲಿಕೆ

ಸದಾಶಿವ ಆಯೋಗ ವರದಿ ಜಾರಿಗೆ ಆದಿಜಾಂಬವ ಸಂಘ ಆಗ್ರಹ

ಹುಣಸೂರು: ಆದಿಜಾಂಬವ ಮತ್ತು ಛಲವಾದಿ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸಲು ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿಗೊಳಿಸುವಂತೆ ಒತ್ತಾಯಿಸಿ ತಾಲೂಕು ಆದಿಜಾಂಬವ ಸಂಘದ ವತಿಯಿಂದ ಜಿ.ಡಿ.ಹರೀಶ್‌ಗೌಡ ಅವರಿಗೆ ಮನವಿ ಸಲ್ಲಿಸಲಾಯಿತು.

ಪರಿಶಿಷ್ಟ ಜಾತಿಗಳ ಪೈಕಿ ಆದಿಜಾಂಬವ ಮತ್ತು ಛಲವಾಡಿ ಜನಾಂಗ ಸಾಮಾಜಿಕ, ಸಾಂಸ್ಕೃತಿ, ಶೈಕ್ಷಣಿ ಹಾಗೂ ರಾಜಕೀಯವಾಗಿ ಅತ್ಯಂತ ಹಿಂದುಳಿದಿವೆ. ಈ ಜನಾಂಗದವರಿಗೆ ಇಂದಿಗೂ ದೇವಸ್ಥಾನ, ಹೋಟೆಲ್, ಕ್ಷೌರಿಕ ಅಂಗಡಿ ಸೇರಿದಂತೆ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವಿಲ್ಲ. ಇದರಿಂದ ಅಸ್ಪೃಶ್ಯತೆ ಒಂದು ಶಾಪವಾಗಿ ಕಾಡುತ್ತಿದೆ ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸಿ 30 ವರ್ಷಗಳಿಂದಲೂ ಹೋರಾಡಲಾಗುತ್ತಿದೆ. ಆದಿಜಾಂಬವ ಮತ್ತು ಛಲವಾದಿ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸಲು ನ್ಯಾ.ಸದಾಶಿವ ಆಯೋಗ ಮೀಸಲಾತಿ ವರ್ಗೀಕರಣ ಮಾಡಿ ವರದಿ ಸಲ್ಲಿಸಿ ಅನೇಕ ವರ್ಷಗಳಾಗಿವೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.



ಸದಾಶಿವ ಆಯೋಗದ ವರದಿ ಜಾರಿಗೊಳಿಸಲು ಎಲ್ಲಾ ರಾಜಕೀಯ ಪಕ್ಷಗಳು ಆಶ್ವಾಸನೆ ನೀಡುತ್ತಿವೆ. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ ಮೊದಲ ಅಧಿವೇಶನದಲ್ಲಿ ವರದಿ ಜಾರಿಗಾಗಿ ಕೇಂದ್ರಕ್ಕೆ ಶಿಫಾರಸು ಮಾಡುತ್ತೇವೆ ಎಂದು ಭರವಸೆ ನೀಡಿದೆ. ಆದ್ದರಿಂದ ಡಿ.4ರಿಂದ ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ನ್ಯಾ.ಸದಾಶಿವ ಆಯೋಗದ ವರದಿ ಜಾರಿಗೊಳಿಸಲು ಧ್ವನಿ ಎತ್ತುವಂತೆ ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಮನವಿ ಮಾಡಲಾಯಿತು. ತಾಲೂಕು ಆದಿಜಾಂಬವ ಸಂಘದ ಅಧ್ಯಕ್ಷ ಬಿ.ಶಿವಣ್ಣ, ಪ್ರಧಾನ ಕಾರ್ಯದರ್ಶಿ ಡಿ.ಕುಮಾರ್ ಹಾಗೂ ಪದಾಧಿಕಾರಿಗಳು ಇದ್ದರು.

ಕನಕನಗರ ಬಡಾವಣೆಯಲ್ಲಿ ಕನ್ನಡ ರಾಜ್ಯೋತ್ಸವ



ಕೆ.ಆರ್.ನಗರ: ಪಟ್ಟಣದ ಕನಕನಗರ ಬಡಾವಣೆಯಲ್ಲಿ ಎರಡು ದಿನ ಶ್ರೀ ವಿನಾಯಕ ಯುವಕರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಸಾಂಸ್ಕೃತಿಕ ಮತ್ತು ಮನರಂಜನಾ ಕಾರ್ಯಕ್ರಮ ನಡೆಸಿ, ಬಡಾವಣೆಯ ಹಿರಿಯ ನಾಗರಿಕರಾದ ಬಿ.ಎಂ.ನಾಗರಾಜು, ಬಸವರಾಜು, ಹನುಮಶೆಟ್ಟಿ, ಕಾಳೇಗೌಡ, ವಾಸು, ಕೃಷ್ಣೇಗೌಡ, ಮಣಿಯಮ್ಮ, ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ನಗರಾಧ್ಯಕ್ಷ ಎಂ.ಜೆ.ರಮೇಶ್ ಮತ್ತಿತರರನ್ನು ಸನ್ಮಾನಿಸಲಾಯಿತು.

ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮಾತನಾಡಿ, ಕರ್ನಾಟಕ ಏಕೀಕರಣಗೊಂಡು 50 ವರ್ಷ ಆದ ಹಿನ್ನೆಲೆಯಲ್ಲಿ ಸರ್ಕಾರ ವರ್ಷವಿಡೀ ರಾಜ್ಯೋತ್ಸವ ಆಚರಿಸಲು ನಿರ್ಧರಿಸಿದೆ. ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯ ಉಳಿವಿಗಾಗಿ ಹೋರಾಟ ಮಾಡುವ ಜತೆಗೆ ಜನರಲ್ಲಿ ಜಾಗೃತಿ ಮೂಡಿಸಲು ರಾಜ್ಯೋತ್ಸವದಂತಹ ಕಾರ್ಯಕ್ರಮಗಳನ್ನು ಆಚರಿಸುತ್ತಿರುವುದು ವಿಪರ್ಯಾಸ. ರಾಜ್ಯದಲ್ಲಿ ಬದುಕುತ್ತಿರುವ ಎಲ್ಲರೂ ಕನ್ನಡ ಪ್ರೇಮ ಬೆಳೆಸಿಕೊಂಡು ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯಬೇಕು ಎಂದು ಮನವಿ ಮಾಡಿದರು.

ರಾಜ್ಯದ ನೆಲ, ಜಲ ಮತ್ತು ಗಡಿಭಾಗದಲ್ಲಿ ಕನ್ನಡಿಗರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರ ಉತ್ತಮ ಸ್ಪಂದನೆ ನೀಡಬೇಕು. ಆಗ ಮಾತ್ರ ಕನ್ನಡಕ್ಕಾಗಿ ಹೋರಾಡುವುದು ತಪ್ಪಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕನ್ನಡಿಗರಿಗೆ ಅನುಕೂಲವಾಗುವ ಯೋಜನೆಗಳನ್ನು ರೂಪಿಸಬೇಕು ಎಂದರು.

ತಾಪಂ ಇಓ ಜಿ.ಕೆ.ಹರೀಶ್, ಪುರಸಭೆ ಸದಸ್ಯ ನಟರಾಜು, ಸಂಘದ ಪದಾಧಿಕಾರಿಗಳಾದ ಪ್ರಮೋದ್, ಪ್ರಶಾಂತ್, ಮಂಜುನಾಥ್, ಚೇತನ್‌ಶೆಟ್ಟಿ, ಪರಶಿವಮೂರ್ತಿ, ವೆಂಕಟೇಶ್, ಬ್ರಾಂಡ್ ಮಂಜು, ವಕೀಲ ಕೆ.ಸಿ.ಹರೀಶ್, ವಿ.ಪ್ರಸನ್ನ, ಚಿಕ್ಕರಾಮೇಗೌಡ ಮತ್ತಿತರರು ಹಾಜರಿದ್ದರು.

ನಾಡು–ನುಡಿ ಕುರಿತು ರಸಪ್ರಶ್ನೆ ಸ್ಪರ್ಧೆ



ಹುಣಸೂರು: ರೋಟರಿ ಹಾಗೂ ಇನ್ನರ್ ವ್ಹೀಲ್ ಕ್ಲಬ್ ವತಿಯಿಂದ ಸುವರ್ಣ ಕನ್ನಡ ರಾಜ್ಯೋತ್ಸವ ಅಂಗವಾಗಿ ಗುರುವಾರ ಪಿಯುಸಿ ವಿದ್ಯಾರ್ಥಿಗಳಿಗೆ ನಾಡು–ನುಡಿ ಕುರಿತು ತಾಲೂಕು ಮಟ್ಟದ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿತ್ತು.

ತಾಲೂಕಿನ ಗಾವಡಗೆರೆ, ಹನಗೂಡು, ಬಿಳಿಕೆರೆ, ರತ್ನಪುರಿ ಹಾಗೂ ಹುಣಸೂರು ಸೇರಿದಂತೆ ಒಟ್ಟು 8 ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹನಗೂಡು ಕಾಲೇಜು ಪ್ರಥಮ ಹಾಗೂ ಹುಣಸೂರಿನ ಬಾಲಕಿಯರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಬಹುಮಾನ ಪಡೆದುಕೊಂಡರು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಉಪನ್ಯಾಸಕ ಲಕ್ಷ್ಮಿಕಾಂತ್, ರೋಟರಿ ಸಂಸ್ಥೆಯ ಅಧ್ಯಕ್ಷ ಚೆನ್ನಕೇಶವ, ಕಾರ್ಯದರ್ಶಿ ಪ್ರಸನ್ನ, ಖಜಾಂಚಿ ಆನಂದ್, ಇನ್ನರ್‌ವ್ಹೀಲ್ ಅಧ್ಯಕ್ಷೆ ಸ್ಮಿತಾ ದಯಾನಂದ್, ರೋಟರಿ ವಿದ್ಯಾಸಂಸ್ಥೆ ಮುಖ್ಯಶಿಕ್ಷಕಿ ದೀಪಾ, ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ಸಂತೋಷ್ ಉಪಸ್ಥಿತರಿದ್ದರು.

ಪಿ.ಅಖಿಲೇಶ್ವರಿಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಎಂ.ಎ. ಶ್ರೀಧರ್ ಅವರ ಮಾರ್ಗದರ್ಶನದಲ್ಲಿ ಪಿ. ಅಖಿಲೇಶ್ವರಿ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಕಂಪಲಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಕೆ.ಸ್ವಾಮಿ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷ ಶಿವಣ್ಣ, ನಿರ್ದೇಶಕರಾದ ಕಟ್ಟೆ ಜಯಣ್ಣ, ಕೃಷ್ಣೇಗೌಡ, ಶಿವರಾಮೇಗೌಡ, ಚಲುವೇಗೌಡ, ಕೆ.ಕೆ.ಸ್ವಾಮಿ, ಕೃಷ್ಣ, ಸಾಕಮ್ಮ, ಜಯಮ್ಮ, ಮಾಜಿ ಅಧ್ಯಕ್ಷ ರಾಜೇಗೌಡ, ಸಿಬ್ಬಂದಿ ಮಂಜು, ರೇವಣ್ಣ ಇತರರಿದ್ದರು.

ಆನೆ ಕಾರ್ಯಪಡೆ ಗುತ್ತಿಗೆ ನೌಕರರ ಪ್ರತಿಭಟನೆ

ಏಕಾಏಕಿ ಕೆಲಸದಿಂದ ತೆಗೆದುಹಾಕಿರುವುದಾಗಿ ಅರಣ್ಯಾಧಿಕಾರಿಗಳ ವಿರುದ್ಧ ಆರೋಪ

ಹೆಚ್.ಡಿ.ಕೋಟೆ, ನ.16–ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ನಮ್ಮನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಲಾಗಿದೆ ಎಂದು ಆರೋಪಿಸಿ ಆನೆ ಕಾರ್ಯಪಡೆಯ ತಂಡದವರು ಹ್ಯಾಂಡ್‌ಪೋಸ್ಟ್‌ನಲ್ಲಿರುವ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಅರಣ್ಯದಂಚಿನ ರೈತರ ಜಮೀನುಗಳಿಗೆ ಕಾಡಾನೆಗಳು ಬಾರದಂತೆ ಆನೆ ಕಾರ್ಯಪಡೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ 10 ಜನರನ್ನು ಆರ್‌ಎಫ್‌ಓ ಏಕಾಏಕಿ ಕೆಲಸದಿಂದ ತೆಗೆದುಹಾಕಿದ್ದಾರೆ. ಇದರಿಂದ ಆ ಕುಟುಂಬಗಳು ಬೀದಿಪಾಲಾಗಿವೆ. ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.



ಆನೆ ಕಾರ್ಯಪಡೆ ನೌಕರ ನಿಂಗರಾಜು ಮಾತನಾಡಿ, ಒಂದು ವರ್ಷಗಳಿಂದ ವಿವಿಧ ಅರಣ್ಯ ಭಾಗಗಳಲ್ಲಿ ಕಾಡಾನೆ ಓಡಿಸುವ ಕಾರ್ಯದಲ್ಲಿ ನಮ್ಮ ಜೀವವನ್ನೇ ಒತ್ತೆಯಿಟ್ಟು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇವೆ. ಆದರೂ ಅರಣ್ಯ ಅಧಿಕಾರಿಗಳು ನಮ್ಮನ್ನು ಕೆಲಸದಿಂದ ತೆಗೆದುಹಾಕಿ ನಮ್ಮ ಕುಟುಂಬಗಳು ಬೀದಿಗೆ ಬರುವಂತೆ ಮಾಡಿದ್ದಾರೆ. ನಮ್ಮನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು, ಇಲ್ಲದಿದ್ದಲ್ಲಿ ನಿರಂತರವಾಗಿ ಪ್ರತಿಭಟನೆ ಮುಂದುವರೆಸುವುದಾಗಿ ಎಚ್ಚರಿಸಿದರು.

ಸಿಪಿಐಎಲ್‌ಎಂಸಿ ಜಿಲ್ಲಾ ಕಾರ್ಯದರ್ಶಿ ಚೌಡಳ್ಳಿ ಜವರಯ್ಯ ಮಾತನಾಡಿ, ಆನೆ ಕಾರ್ಯಪಡೆಯಲ್ಲಿ ಕೆಲಸ ಮಾಡುತ್ತಿದ್ದವರನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಿರುವುದು ಖಂಡನೀಯ. ಈ ಕೆಲಸವನ್ನೇ ನಂಬಿಕೊಂಡು ಬಡಕುಟುಂಬದ ಯುವಕರು ಜೀವನ ಸಾಗಿಸಿಕೊಂಡು ಹೋಗುತ್ತಿದ್ದರು. ಆದರೆ, ಅರಣ್ಯಾಧಿಕಾರಿಗಳು ಇವರ ಮೇಲೆ ದಬ್ಬಾಳಿಕೆ ಮಾಡಿ ಕೆಲಸದಿಂದ ತೆಗೆದುಹಾಕಿದ್ದಾರೆ ಎಂದು ದೂರಿದರು.

ಆನೆ ಕಾರ್ಯಪಡೆಯಲ್ಲಿ ಕೆಲಸ ಮಾಡುತ್ತಿದ್ದವರನ್ನ ಕೆಲಸದಿಂದ ತೆಗೆದುಹಾಕಿರುವುದನ್ನು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ತಿಳಿಸಲಾಗಿದ್ದು, ಈ ಸಂಬಂಧ ಶಾಸಕರು ಅರಣ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಯಾವುದೇ ಅನ್ಯಾಯವಾಗದ ರೀತಿ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಹೇಳಿದ್ದರು. ಆದರೂ ಅರಣ್ಯಾಧಿಕಾರಿಗಳು ಶಾಸಕರ ಮಾತಿಗೆ ಬೆಲೆ ನೀಡದೇ ದಬ್ಬಾಳಿಕೆ ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಆನೆ ಕಾರ್ಯಪಡೆಯ ನೌಕರರಾದ ನಿಂಗರಾಜು, ಶಿವಪ್ಪ ಶಿವು, ರವಿ, ಅಣ್ಣಯ್ಯ, ಕನಕರಾಜು, ಪ್ರಕಾಶ್, ಶಿವಕುಮಾರ್, ಭಾಸ್ಕರ್, ವಿನೋದ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಮಹಿಳಾ ಜಿಲ್ಲಾಧ್ಯಕ್ಷೆ ಅನುಷಾ, ಶ್ರೀ ಶಕ್ತಿ ಒಕ್ಕೂಟದ ಜಿಲ್ಲಾ ಸದಸ್ಯೆ ಶೈಲಾ ಸುಧಾಮಣಿ, ಆದಿವಾಸಿ ಮುಖಂಡ ಶೈಲೇಂದ್ರ, ಎಐಎಆರ್‌ಎಲ್‌ಎ ತಾಲೂಕು ಅಧ್ಯಕ್ಷ ಇವಾನ್‌ರಾಜ್, ಎಐಟಿಸಿಸಿಟಿಯು ತಾಲೂಕು ಅಧ್ಯಕ್ಷ ನಂಜುಂಡಯ್ಯ, ಅಕ್ಬರ್ ಪಾಷಾ, ರಾಜಣ್ಣ, ನಾಗರಾಜು, ಮಾದೇವನಾಯಕ, ಕಾಳಮ್ಮ, ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮಂಗಳ ವರುಂ(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಜ ಯೋಗ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಂಗಳ ವರುಂ (ಕ)	4 ಪ್ರದರ್ಶನಗಳು
ಪ್ರಭಾ	
ನೇತ್ರಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಗರಡಿ (ಕ):** ಬೆ.10.10ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **ಟಗರುಪಲ್ಯ (ಕ):** ಸಂ.4.15ಕ್ಕೆ.
ಸ್ಕ್ರೀನ್ 2	**ಘೋಸ್ಟ್ (ಕ):** ಬೆ.10.10ಕ್ಕೆ, **ಜಿಗರ್‌ಥಂಡ ಡಬಲ್ x (ತ):** ಮ.1ಕ್ಕೆ, ಸಂ.6.50ಕ್ಕೆ, **ರೈಡ್ (ತ):** ಸಂ.4.25ಕ್ಕೆ, **ಟಗರುಪಲ್ಯ (ಕ):** ರಾ.10.05ಕ್ಕೆ.
ಸ್ಕ್ರೀನ್ 3	**ಜಪಾನ್ (ತ):** ಬೆ.10.15ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ, **ಬಂದ್ರ (ಮ):** ರಾ.10ಕ್ಕೆ.
ಸ್ಕ್ರೀನ್ 4	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.8.30ಕ್ಕೆ, ಬೆ.10.45ಕ್ಕೆ, ಮ.1.05ಕ್ಕೆ, ಮ.3.25ಕ್ಕೆ, ಸಂ.5.40ಕ್ಕೆ, ರಾ.7.55ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.9.30ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಸಂ.5ಕ್ಕೆ, ರಾ.7.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಗರಡಿ (ಕ):** ರಾ.10.15ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, **ಟಗರುಪಲ್ಯ (ಕ):** ಮ.12.55ಕ್ಕೆ, **ಜಿಗರ್‌ಥಂಡ ಡಬಲ್ x (ತ):** ರಾ.10.20ಕ್ಕೆ.
ಸ್ಕ್ರೀನ್ 3	**ಜಿಗರ್‌ಥಂಡ ಡಬಲ್ x (ತ):** ಬೆ.10.35ಕ್ಕೆ, ಮ.2.10ಕ್ಕೆ, ಸಂ.5.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	**ಜಪಾನ್ (ತ):** ಬೆ.9.30ಕ್ಕೆ, ಮ.12.45ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಸೈಕಲ್ ಸವಾರಿ (ಕ):** ಬೆ.10.30ಕ್ಕೆ, **ಕ್ರೇಜಿ ಕೀರ್ತಿ (ಕ):** ಮ.1.30ಕ್ಕೆ, **ಗರುಡ ಪುರಾಣ (ಕ):** ಸಂ.4ಕ್ಕೆ, **ಬಸ್ರಿಕಟ್ಟೆ (ಕ):** ಸಂ.6.45ಕ್ಕೆ, **ಲಿಯೋ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಟಗರುಪಲ್ಯ (ಕ):** ಬೆ.10.45ಕ್ಕೆ, ಮ.1.40ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 3	**ಲಿಯೋ (ತ):** ಮ.1.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	**ಘೋಸ್ಟ್ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.45ಕ್ಕೆ, **ಲಿಯೋ (ಕ):** ಮ.1.05ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೂಡಲಮಠದ ಅಭಿವೃದ್ಧಿಗೆ ಒತ್ತು



ಸರಗೂರು, ನ.16–ಪಟ್ಟಣದ 12ನೇ ವಾರ್ಡ್‌ನ ಮೂಡಲಮಠವನ್ನು ಮೇಲ್ದರ್ಜೆಗೇರಿಸಿ ಹಂತ ಹಂತ ಅಭಿವೃದ್ಧಿ ಪಡಿಸಲು ಹೆಚ್ಚಿನ ಒತ್ತು ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಮೂಡಲಮಠದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, 700 ವರ್ಷ ಇತಿಹಾಸವಿರುವ ಗುರುಅಕ್ಕಿಪೇಟೆ ಸ್ವಾಮಿಯ ಸನ್ನಿಧಿಯ ಮೂಡಲಮಠದ ಅಭಿವೃದ್ಧಿಗೆ ಶ್ರಮಿಸಲಾಗುವುದು. ಟ್ರಸ್ಟ್‌ನ ಹೆಸರಿಗೆ ಮಠದ ಆಸ್ತಿಯನ್ನು ಹಸ್ತಾಂತರಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು. ಇದಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಗುರುಅಕ್ಕಿಪೇಟೆ ಸ್ವಾಮಿ ಸೇವಾ ಕೈಂಕರ್ಯ ಸಮಿತಿ ಅಧ್ಯಕ್ಷ ಮಹಾಂತದೇವು, ಖಜಾಂಚಿ ಎಸ್.ಎನ್.ಮಹದೇವಪ್ಪ, ಕಾರ್ಯದರ್ಶಿ ಶಿವನಾಗಪ್ಪ, ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಮಾಜಿ ಅಧ್ಯಕ್ಷೆ ಜ್ಯೋತಿ ಯೋಗೀಶ್, ಪಿಎಸ್‌ಐ ನಂದೀಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಮುಖಂಡರಾದ ಕುಮಾರಸ್ವಾಮಿ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಿ.ಪಿ.ನಟರಾಜು, ಮಲ್ಲಿಕಾರ್ಜುನ, ವರುಣ್ ಟೆಕ್ಸ್‌ಟೈಲ್ ಮಾಲೀಕ ವರುಣ್, ಮೂರ್ತಿ, ಚಂದ್ರಶೇಖರ್, ಸೋಮಣ್ಣ, ಕಂಬಣ್ಣ, ಮಂಜು, ಭುವನೇಶ್, ಮಹದೇವಸ್ವಾಮಿ, ಪುಟ್ಟಯ್ಯ, ರವಿಶಂಕರ್, ವೀರಶೈವ ಸಮಾಜದ ಮಹಿಳಾ ಸಂಘದ ಪದಾಧಿಕಾರಿಗಳು, ಮುಖಂಡರು ಹಾಜರಿದ್ದರು.



ದೀಪಾವಳಿ ಹಬ್ಬದ ಬಲಿಪಾಡ್ಯಮಿ ಅಂಗವಾಗಿ ಮೂಗೂರಿನ ಶ್ರೀ ತ್ರಿಪುರಸುಂದರಿ ಅಮ್ಮನವರ ದೇವಾಲಯದಲ್ಲಿ ಗೋಪೂಜೆ ನೆರವೇರಿಸಲಾಯಿತು. ಅರ್ಚಕರಾದ ನಂಜುಂಡಸ್ವಾಮಿ, ಅಭಿಷೇಕ್, ಅನಿಲ್, ಗ್ರಾಮ ಸಹಾಯಕ ರಾಜು, ಗ್ರಾಮಸ್ಥರು ಇದ್ದರು.

ಹೊಸ ಮನೆ ಮಾರಾಟಕ್ಕಿದೆ

ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ

Call: 9380284276

ಬೇಕಾಗಿದ್ದಾರೆ

ಮೈಸೂರಿನ ಪ್ರತಿಷ್ಠಿತ ಸೋಲಾರ್ ಕಂಪನಿಯಲ್ಲಿ ವಿವಿಧ ಹುದ್ದೆಗಳಿಗಾಗಿ ARC Welder, Co2 welder, Tig welder, Helpers, Drivers, Solar Technicians, Electricians, Marketing Executive, Marketing manager, Feild Officer, Digital Marketing and Payment Recovery Officer ಗಳು ಬೇಕಾಗಿದ್ದಾರೆ, ಊಟ ವಸತಿಯೊಂದಿಗೆ ಆಕರ್ಷಕ ವೇತನ ದೊರೆಯುತ್ತದೆ. ಸಂಪರ್ಕಿಸಿ

9964832118, 9980917976

ಸ್ಥಳ: Essar Technologies, #19/A, Kadkola Industrial Area, Mysore-571311

Newly Café Opened

WANTED

Cashier & Manager

Only Experience Holders

Kalidasa Road, Mysore

8088361007

SITES FOR SALE

MUDA Approved

AVAILABLE: 30x40, 20x30 & ODD SITES

Adjacent to Vijayanagar 4th Stage and M.S. Ramaiah Layout.

EUREKA ENCLAVE

Ready to Regn. & Construction.

9880440033, 9008299946

ಸೈಟು ಮಾರಾಟಕ್ಕಿದೆ

50x80

MUDA Regn.

ಪರಶುರಾಮ ಬಡಾವಣೆ, ಬನ್ನೂರು ರಸ್ತೆ, 80 ಅಡಿ ಜೋಡಿ ರಸ್ತೆಗೆ

74066-08899, 90352-01030

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ

ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು

ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.

Call: 96111 72148, 94495 61722

Office time 11 am to 6.00 pm on all days

ADRI HEALTH MART YOUR FRIENDLY CHEMIST

@ Dattagalli, Nethaji Circle

REQUIRED STAFFS

Freshers and Experienced

Salary at par with industry standards

Call: 98800 32733

Email: adrihealthmart@gmail.com

44 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

DTCP SITES FOR SALE

DTCP Sites Rs. 699 per sq.ft., Near Jayapura, H.D. Kote Road, Mysore.

9590491194,9606783264

WATER PROOFING

SPECIALIST IN Interior & Exterior Water Proof Painting. Contractor, Dr.Fixit, Terrace, Roof, Mould.

Web : www.slgpainters.com

Present Google Review is 4.9

Call : 81236 07989 Karnataka Service

REQUIRED

B.A., B.Ed (English, Hindi)

M.Sc, B.Ed (PCM, CBZ)

9535333467

8150964055

Email Id: kalabharathi1991@gmail.com

COMMERCIAL SPACE FOR RENT

No.596, Near Basudeva Somani College, Kuvempunagar, Mysuru

Call:- 97429 24912

Between 6pm to 7pm

FOR ADVERTISEMENT

STAR OF MYSORE — Please Call: 0821-2496522 / 23, Email: ad@starofmysore.com

ಮೈಸೂರು ಮಿತ್ರ — Please Call: 0821-2496522 / 23, Email: ad@mysurumithra.com

ಕಡೇ 4 ದಿನಗಳು ಮಾತ್ರ

(20-11-23 ಕಡೇ ಪ್ರದರ್ಶನ)

ಜಂಬೊ ಸರ್ಕಸ್

ಮಳೆ ಚಿಂತೆ ಬಿಡಿ ವಾಟರ್ ಪ್ರೂಫ್ ಟೆಂಟ್‌ನಲ್ಲಿ

ಮುಂಗಡ ಬುಕ್ಕಿಂಗ್ ರೂ. 300/-

ದಿನ 3 ಪ್ರದರ್ಶನಗಳು 1ಕ್ಕೆ, 4ಕ್ಕೆ ಮತ್ತು 7ಕ್ಕೆ

ಇಥಿಯೋಪಿಯನ್, ಟ್ಯಾನ್‌ಜೇನಿಯನ್, ಆಫ್ರಿಕನ್ ಕಲಾವಿದರು ಹಾಗೂ ಇತರೆ ದೇಶಗಳ ಕಲಾವಿದರ ಸಾಹಸಮಯ ಪ್ರದರ್ಶನ

ಪ್ರವೇಶ ದರ: ರೂ. 100/-, ರೂ. 150/-, ರೂ. 250/-, ರೂ. 300/-

ಕಾರಂಜಿ ಕೆರೆ ಬಳಿ, ಮೃಗಾಲಯದ ಹಿಂಭಾಗ, ನಜರ್‌ಬಾದ್, ಮೈಸೂರು

ಕರೆ ಮಾಡಿ: 7991172237 / 9496790336 for advance booking: bookmyseats.in

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರಾದೆಯ ಮೇರೆಗೆ, ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮೂಗನ ಹುಂಡಿ ಗ್ರಾಮದಲ್ಲಿರುವ ಲೇಟ್ ಎಂ. ಮಲ್ಲೇಗೌಡ ರವರ ಧರ್ಮ ಪತ್ನಿ ಶ್ರೀಮತಿ ಗೌರಮ್ಮ ಮತ್ತು ಅವರ ಮಕ್ಕಳಾದ ರವಿಕುಮಾರ್ ಎಂ. ಲೋಕೇಶ್ ಎಂ, ಮತ್ತು ಅವರ ಕುಟುಂಬದವರಿಗೂ ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ಮಾರಾಟ ಮಾಡುವ ಸಂಬಂಧ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಈಗಾಗಲೇ ಆ ಸಂಬಂಧ ನನ್ನ ಕಕ್ಷಿದಾರರಿಗೆ ಕೆಲವು ದಾಖಲಾತಿಗಳನ್ನು ಹಾಜರು ಮಾಡಿದ್ದು ನನ್ನ ಕಕ್ಷಿದಾರರು ಸದರಿ ಜಮೀನನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧ ಕ್ರಯ ಪತ್ರವನ್ನು ಪಡೆದುಕೊಳ್ಳುತ್ತಾರೆ. ಮುಂದೆ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ.ನಂ. 72/2 ಹಳೆ ಸರ್ವೆ ನಂ 72/3 ರಲ್ಲಿ 33 ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್ ಬಂದಿ: ಪೂರ್ವಕ್ಕೆ: ಸರ್ವೆ ನಂ. 71 ರಲ್ಲಿ ನೈರುತ್ಯ ರೈಲ್ವೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ; ಪಶ್ಚಿಮಕ್ಕೆ: ಸರ್ವೆ ನಂ. 72/3 ರಲ್ಲಿ ಸರೋಜಮ್ಮನವರ ಜಮೀನು ; ಉತ್ತರಕ್ಕೆ: ಸರ್ವೆ ನಂ 72/4 ರಲ್ಲಿ ಎಸ್.ಬಿ. ಉಮೇಶ್ ರವರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂ. 72/1 ರಲ್ಲಿ ಶಾಂತೇಗೌಡ ಮತ್ತು ಮಹದೇವ ರವರ ಜಮೀನು.

ಸಹಿ/– ಶ್ರೀ ಪಾಲಾಕ್ಷ, ಬಿ.ಎಸ್ಸಿ, ಎಲ್.ಎಲ್.ಬಿ. ವಕೀಲರು, **KAR 1146/98**, ನಂ. 645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಚಿತ್ರ ಮಂದಿರ ಹತ್ತಿರ, ಮೈಸೂರು.

ಮೊ: **94480 75718**

neem BOND PLATINUM®

PLYWOOD & DOORS

@ FACTORY DEPOT RATES

10 YEARS WARRANTY*

9845426862, 9901291267

HOUSE FOR RENT

3 BHK independent house for rent in Gravity -1, Prashanth Layout, near Dadadahalli, Mysore.

Contact:

Mob: 90366 65888

RENT / LEASE

40x60, large bungalow, independent ground & first floor is available for long term rent / lease, at Vijayanagar 1st Stage, Mysore, suitable for corporate office, bank premises, corporate guest house, kinder garten school & for residential purpose with parking facility.

Contact: 99012 28704 / 93222 93394 / 99458 54440

Required Experienced Candidates

Male / Female for the post of Office Assistant along with Accounts knowledge for reputed Restaurant at Mysore.

Qualification: B.Com along with Tally

Salary: Rs. 20000/- Per Month

Food and accommodation provided.

Contact **9886436063**

MMCB

ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಜಗನ್ ಮೋಹನ ಅರಮನೆ ರಸ್ತೆ, ಮೈಸೂರು-24

ಸ್ಥಾಪನೆ - 1953

ಮೈಸೂರಿನ ಪ್ರಮುಖ 'ಎ' ಗ್ರೇಡ್ ಸಹಕಾರಿ ಬ್ಯಾಂಕ್

25 ವರ್ಷಗಳಿಂದ ಸತತವಾಗಿ 25% ಡಿವಿಡೆಂಟ್‌ನ್ನು ಸದಸ್ಯರುಗಳಿಗೆ ನೀಡಲಾಗುತ್ತಿದೆ ಮತ್ತು ನಿವ್ವಳ ಎನ್.ಪಿ.ಎ 0% ಇರುತ್ತದೆ

ಮೈಸೂರು ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು

ಆಕರ್ಷಕ ಠೇವಣಿಯ ಮೇಲೆ ಬಡ್ಡಿ ದರಗಳು

370 ದಿನಗಳಿಗೆ **7.5%**

ಹಿರಿಯ ನಾಗರೀಕರಿಗೆ **8%**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

0821-2432938 / 2522759

ಬಂಡಿಪಾಳ್ಯ - 2489565 | ಹೆಬ್ಬಾಳ್ - 2515077

WE ARE HIRING

Join Our Team !

We are a premier Edu-Tech Company focusing school solutions

EXCELLENT SALARY & INCENTIVES

- Experienced Professional in for educational Marketing products to schools
- Good communication Skills
- Should be confident to interact with School Principal & Management.
- Age upto 40 years

V-LEAD SCHOOL SHOP SOLUTIONS PVT. LTD.

9738892640 / 7483374207

Send CV - vleadedusolutions@gmail.com

Immediate Joiners Preferred

ಜಿಲ್ಲಾ ಪಂಚಾಯತ್, ಮೈಸೂರು | ತಾಲ್ಲೂಕು ಪಂಚಾಯತ್, ಪಿರಿಯಾಪಟ್ಟಣ

ಕಿತ್ತೂರು ಗ್ರಾಮಪಂಚಾಯಿತಿ ಕಾರ್ಯಾಲಯ

ಕಿತ್ತೂರು, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ,

ಕೆರೆಯ ಮೀನು ಪಾಶುವಾರು ಹಕ್ಕಿನ ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕಿತ್ತೂರು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ ದಿನಾಂಕ 10-11-2023ರ ನಿರ್ಣಯದಂತೆ ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು, ಕಿತ್ತೂರು ಗ್ರಾಮ ಪಂಚಾಯ್ತಿಯ ವ್ಯಾಪ್ತಿಯ ಕಿತ್ತೂರು ಗ್ರಾಮದ ಕೆರೆಯ ಮೀನು ಪಾಶುವಾರು ಹಕ್ಕನ್ನು 5 (ಐದು) ವರ್ಷಗಳ ಅವಧಿಗೆ (20-11-2023 ರಿಂದ 19-11-2028 ರವರೆಗೆ) ಹರಾಜು ಮೂಲಕ ನೀಡಲು 2023-24ನೇ ಸಾಲಿನ ದಿನಾಂಕ 20-11-2023ರ ಸೋಮವಾರ ಹರಾಜನ್ನು ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಸರ್ವ ಸದಸ್ಯರ ಉಪಸ್ಥಿಯಲ್ಲಿ ಸಾರ್ವಜನಿಕರ ರೂಬು ರೂಬು ಮೀನು ಪಾಶುವಾರು ಹಕ್ಕನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ.

ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಿ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆದು ಮತ್ಸ್ಯಪಾಲನೆ ಮೂಲಕ ಲಾಭವನ್ನು ಪಡೆಯಬಹುದಾಗಿದೆ. ಹರಾಜು ಮಾಡಬೇಕಾದ ಕೆರೆಯ ವಿವರ ಈ ಕೆಳಕಂಡಂತಿರುತ್ತದೆ. ದಿನಾಂಕ ಮತ್ತು ಸಮಯ : 20-11-2023, ಬೆ.10-30 ಗಂಟೆಗೆ, ಗ್ರಾಮದ ಹೆಸರು ಕಿತ್ತೂರು ,ಕೆರೆ ಹೆಸರು: ಕಿತ್ತೂರು ದೊಡ್ಡಕೆರೆ, ಮುಂಗಡ ಠೇವಣಿ 30,000/- ಹರಾಜು ನಡೆಯುವ ಸ್ಥಳ, ದಿನಾಂಕ ಮತ್ತು ವೇಳೆ: ಗ್ರಾಮ ಪಂಚಾಯಿತಿ ಕಛೇರಿ ಆವರಣ, ಕಿತ್ತೂರು

5 ವರ್ಷಗಳ ಅವಧಿಗೆ ಕೆರೆ ಮೀನುಪಾಶುವಾರು ಹಕ್ಕನ್ನು ಹರಾಜು ಮೂಲಕ ವಿಲೇವಾರಿಯು ಷರತ್ತಿಗೊಳಪಟ್ಟು ಹಾಗೂ ನಿಬಂಧನೆಗೊಳಪಟ್ಟಿರುತ್ತದೆ.

ಕಛೇರಿ ವೇಳೆಯಲ್ಲಿ ಸಂಪರ್ಕಿಸಿ: 8722012237

ಕರ್ನಾಟಕ ಪೊಲೀಸ್ ಅಕಾಡೆಮಿ

ಅಬ್ಬಾ ರಸ್ತೆ, ಜಲಪುರಿ, ನಜರ್ ಬಾದ್ ಮೊಹಲ್ಲಾ, ಮೈಸೂರು–570019

ದೂ.ಸಂ.: 0821–2564297 ಇ–ಮೇಲ್: kpamyc@ksp.gov.in

ಸಂಖ್ಯೆ: 01/ಕೆ.ಪಿ.ಎ./ಮೆಸ್/2023–24 ದಿನಾಂಕ: 30.10.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಪೊಲೀಸ್ ಅಕಾಡೆಮಿ. ಮೈಸೂರು ಘಟಕದಲ್ಲಿ ಮೂಲ ತರಬೇತಿ / ಪುನರ್ ಮನನ ತರಬೇತಿ ಹಾಗೂ ಇತರೆ ತರಬೇತಿಗಳಿಗೆ ಹಾಜರಾಗುವ ಪ್ರಶಿಕ್ಷಣಾರ್ಥಿಗಳು / ಪೊಲೀಸ್ ಅಧಿಕಾರಿಗಳು ಮತ್ತು ಇತರೇ ಇಲಾಖೆಯ ಅಧಿಕಾರಿ ಸಿಬ್ಬಂಧಿರವರಿಗೆ ಬೆಳಗಿನ ಉಪಹಾರ / ಮಧ್ಯಾನದ ಊಟ / ರಾತ್ರಿ ಊಟ ಮತ್ತು ಕಾಫಿ/ಟೀ/ ಸೇರಿದಂತೆ ಸಿದ್ದಪಡಿಸಿದ ಅಹಾರ / ಉಪಚಾರಗಳನ್ನು ಸರಬರಾಜನ್ನು ಹೊರ ಗುತ್ತಿಗೆ ಮುಖಾಂತರ ಪಡೆಯಲು ಕೆ.ಪಿ.ಟಿ.ಟಿ. ಕಾಯಿದೆ 1999–2000 ರನ್ವಯ ಟೆಂಡರ್ ಅಹ್ವಾನಿಸಲಾಗಿದ್ದು ಆಸಕ್ತಿಯುಳ್ಳ ಸರಬರಾಜುದಾರರ ಕಂಪೆನಿ/ ಏಜೆನ್ಸಿಗಳು ದಿ: 03.11.2023ರ ಬೆಳಿಗ್ಗೆ 10:00 ರಿಂದ ದಿ: 24.11.2023 ರ ಸಂಜೆ 04.00 ಗಂಟೆಯೊಳಗಾಗಿ ಕರ್ನಾಟಕ ಪೊಲೀಸ್ ಅಕಾಡೆಮಿ, ಅಬ್ಬಾ ರಸ್ತೆ, ಮೈಸೂರಿನ ಆಡಳಿತ ಕಚೇರಿಗೆ ಭೇಟಿ ನೀಡಿ ಟೆಂಡರ್ ಅರ್ಜಿಯನ್ನು ಪಡೆದು ದಾಖಲೆಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪೊಲೀಸ್ ಅಕಾಡೆಮಿ, ಅಬ್ಬಾ ರಸ್ತೆ, ಮೈಸೂರಿನ ಅಡಳಿತ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಉಪ ನಿರ್ದೇಶಕರು, ಕರ್ನಾಟಕ ಪೊಲೀಸ್ ಅಕಾಡೆಮಿ, ಅಬ್ಬಾ ರಸ್ತೆ. ಮೈಸೂರು

DIPR/DDMYS/KSMCA/588/2023-24

